


ಪಂಚಪರಮೇಷ್ಠಿಗಳು

ಣಮೋ ಅರಹಂತಾಣಂ । ಣಮೋ ಸಿದ್ಧಾಣಂ ।
ಣಮೋ ಆಇರಿಯಾಣಂ । ಣಮೋ ಉವಜ್ಝಾಯಾಣಂ
ಣಮೋ ಲೋಏ ಸವ್ವಸಾಹೂಣಂ ।



# 69. ಶ್ರೀ ಪಂಚಪರಮೇಷ್ಠಿಗಳು

ಜೈನ ಧರ್ಮಕ್ಕೆ ತನ್ನದೇ ಆದ ಅಸ್ತಿತ್ವವಿದೆ, ತನ್ನದೇ ಆದ ವೃದ್ಧಿ, ಸಿದ್ಧಿಗಳಿವೆ. ತನ್ನದೇ ಆದ ಸ್ವಾತಂತ್ರ್ಯವಿದೆ. ತನ್ನದೇ ಆದ ಆಚಾರ-ವಿಚಾರ ವಿಧಿ-ವಿಧಾನ, ನ್ಯಾಯ, ರೂಪರೇಷೆಗಳಿವೆ. ತನ್ನದೇ ಆದ ಮಂತ್ರ-ತಂತ್ರ-ಪೂಜೆ ಆರಾಧನೆ, ದೇವರು-ಗುರು-ಶಾಸ್ತ್ರ, ನಂಬಿಕೆ-ಉಪಾಸನೆ ನಡೆನುಡಿಗಳಿವೆ. ಹೀಗಾಗಿ ಜೈನರ ಆರಾಧ್ಯ ದೈವ ಜಿನೇಂದ್ರ ಭಗವಂತ. ಇವರು ತೀರ್ಥಂಕರರು. ಕೇವಲಿಗಳು ಜಿನರು ಆಗಿದ್ದಾರೆ. ಇವರು ನಿರ್ದೋಷರೂ, ವೀತರಾಗಿಗಳೂ ಸರ್ವಜ್ಞರೂ, ಹಿತೋಪದೇಶಿಗಳೂ ಆಗಿರುತ್ತಾರೆ. ಇವರ ನಂತರದ ಅವಸ್ಥೆ ಮುಕ್ತಾತ್ಮರದು. ಇವರೀರ್ವರ ಅವಸ್ಥೆಗಿಂತ ಮುಂಚಿನವರಾದ ಆಚಾರ್ಯರು, ಉಪಾಧ್ಯಾಯರೂ, ಸಾಧುಗಳು. ಇವರು ಪದವಿ ಅಂತಸ್ತು ಪಾವಿತ್ರ್ಯತೆಗಳಿಂದ ಪೂಜ್ಯರಾಗಿದ್ದಾರೆ, ಆರಾಧ್ಯರಾಗಿದ್ದಾರೆ, ವಂದ್ಯರಾಗಿದ್ದಾರೆ.

ಇವರನ್ನು ಪರಮೇಷ್ಠಿಗಳೆನ್ನುತ್ತಾರೆ ಇವರು ಶ್ರೇಷ್ಠರಾದ ಪೂಜಾಯೋಗ್ಯರು. ಇವರು ಅರಹಂತರು ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸರ್ವಸಾಧುಗಳು ಎಂದು ಐದು ಮಂದಿ. ಇವರನ್ನು ಪಂಚ ಪರಮೇಷ್ಠಿಗಳೆನ್ನುತ್ತಾರೆ.

ಯಾರು ಸಂಸಾರಶರೀರಗಳ ಭೋಗವನ್ನು ತ್ಯಜಿಸಿ ವೈರಾಗ್ಯ ಹೊಂದಿ ತನ್ನಾತ್ಮ ಕಲ್ಯಾಣಕ್ಕಾಗಿ ಸರ್ವಸಂಗ ಪರಿತ್ಯಾಗಿಗಳಾಗಿ ದಿಗಂಬರ ದೀಕ್ಷಾಧಾರಿಗಳಾಗುತ್ತಾರೋ ಅವರನ್ನು ಸಾಧುಗಳೆನ್ನುತ್ತಾರೆ. ಇವರೇ ತಮ್ಮ ಸಂಘದ ಶಿಷ್ಯರಿಗೆ ಧರ್ಮೋಪದೇಶವನ್ನು ಮಾಡುವ ಹಂತವನ್ನು ಪಡೆದು ಉಪಾಧ್ಯಾಯರೆನ್ನಿಸುತ್ತಾರೆ. ಮತ್ತೆ ಇವರೇ ಸಂಘದ ನಾಯಕರಾಗಿ ಶಿಷ್ಯರಿಗೆ ಶಿಕ್ಷೆ ದೀಕ್ಷೆಗಳನ್ನು ಕೊಡುವ ಅರ್ಹತೆಯನ್ನು ತನ್ನ ಆಚಾರ ವಿಚಾರಗಳ ಶ್ರೇಷ್ಠತೆಯಿಂದ ಪಡೆದು ಆಚಾರ್ಯರೆನಿಸುತ್ತಾರೆ. ಇವರೇ ಆತ್ಮಧ್ಯಾನದಲ್ಲಿ ತೊಡಗಿ ಆತ್ಮನಿಗೆ ಘಾತ ಮಾಡುವಂತ ಘಾತೀಯ ಕರ್ಮಗಳನ್ನು ಕಳೆದುಕೊಂಡು ಪೂಜೆ-ಆರಾಧನೆಗೆ ಯೋಗ್ಯರಾಗುತ್ತಾರೆ. ಅವರು ಕರ್ಮಶತ್ರುಗಳನ್ನು ಗೆದ್ದ ಅರಿಹಂತರೆನಿಸುತ್ತಾರೆ. ಮತ್ತೆ ಇವರೇ ತಮ್ಮಲ್ಲಿದ್ದ ಎಂಟೂ ರೀತಿಯ ಸಕಲ ಕರ್ಮಗಳನ್ನು ಕಳೆದುಕೊಂಡು ಮುಕ್ತರಾಗಿ ಸಿದ್ಧರೆನಿಸುತ್ತಾರೆ.

ಹೀಗೆ ಕ್ರಮವಾಗಿ ಸಾಧುಗಳು, ಉಪಾಧ್ಯಾಯರೂ, ಆಚಾರ್ಯರೂ, ಅರಹಂತರೂ, ಸಿದ್ಧರೂ ಎಂಬ ಅರ್ಹತೆಯನ್ನು ತಮ್ಮ ಆಚಾರ-ವಿಚಾರ ಅರ್ಹತೆ, ಅಂತಸ್ತುಗಳಿಗೆ ಅನುಸಾರವಾಗಿ ಪೂಜ್ಯತೆಯನ್ನು ಪಡೆದವರಾಗಿದ್ದಾರೆ. ಈ ಐದೂ ಪದವಿಗಳು ಬಹು ಪವಿತ್ರವಾದವುಗಳು. ಒಬ್ಬರೇ ಮೇಲೇರುತ್ತಾ ಏರುತ್ತಾ ಮುಂದಿನ ಅರ್ಹತೆಯನ್ನು ಹೊಂದಬಹುದು. ಆದರೂ ಒಮ್ಮೆಲೇ ಈ ಐದೂ ಹಂತಗಳು ಒಬ್ಬರಿಗೇ ಲಭ್ಯವಾಗುವುದಿಲ್ಲವಾದ್ದರಿಂದ ಜಗತ್ತಿನಲ್ಲಿ ಈ ಪದವಿಗಳನ್ನು ಹೊಂದಿದ ಪವಿತ್ರಾತ್ಮರುಗಳು ಪ್ರತ್ಯೇಕವಾಗಿಯೇ ಇದ್ದು ಪೂಜ್ಯರಾಗಿದ್ದಾರೆ.

ಈ ಪವಿತ್ರಾತ್ಮರ ಸ್ಮರಣೆ-ಜಪ, ಧ್ಯಾನ, ಭಜನೆ, ಪೂಜೆ, ವಂದನೆ-ಆರಾಧನೆಯು ಜೈನರಲ್ಲಿ ಅತ್ಯಂತ ಮಹತ್ವವೂ ಶ್ರೇಷ್ಠವೂ ಅತ್ಯವಶ್ಯಕವೂ ಆಗಿದೆ. ಇವರಿಂದಲೇ ಜನತೆಗೆ ಸುಖ ಶಾಂತಿಯ ಬೋಧನೆ, ಮಾರ್ಗದರ್ಶನ ಆದರ್ಶ ಪಾಲನೆಯ ನಿಯಮ-ಆತ್ಮ-ಪರಮಾತ್ಮನಾಗಿ ಪರಂಜ್ಯೋತಿ ಎನಿಸಿ ಪಾವನನಾಗಿ ಪೂಜ್ಯನಾಗುವ ಬೋಧೆ ದೊರೆಯುವುದರಿಂದ ಇವರ ಆರಾಧನೆಯು ಜೈನರಲ್ಲಿ ಅತಿ ಮುಖ್ಯವಾಗಿದೆ. ಇವರ ಸ್ಮರಣೆಗೆ ಜಪ-ಧ್ಯಾನಕ್ಕೆಂದೇ ಇವರ ನಾಮಸೂಚಕವಾದ ಐದು ಚರಣಗಳ ಮಂತ್ರವಿದೆ. ಇದೇ ಪಂಚಪರಮೇಷ್ಠಿ ಮಂತ್ರ. ಇದು ಣಮೋಕಾರದಿಂದ ಪ್ರಾರಂಭವಾಗಿರುವುದರಿಂದ ಇದನ್ನು ಪಂಚ ಣಮೋಕಾರ ಮಂತ್ರವೆಂದೂ ಹೇಳುವರು ಅದು ಹೀಗಿದೆ.

ಣಮೋ ಅರಿಹಂತಾಣಂ
ಣಮೋ ಸಿದ್ಧಾಣಂ
ಣಮೋ ಆ ಇರಿಯಾಣಂ
ಣಮೋ ಉವಜ್ಝಾಯಾಣಂ
ಣಮೋ ಲೋ ಏ ಸವ್ವಸಾಹೂಣಂ ॥

ಈ ಮಂತ್ರವು ಪ್ರಾಕೃತ ಭಾಷೆಯಲ್ಲಿದೆ. ಇದು ಅನಾದಿ ಮಂತ್ರ. ಬಹುಪ್ರಾಚೀನವಾದುದು. ಪ್ರಾಚೀನ ಭಾಷೆಯು ಪ್ರಾಕೃತವಾಗಿತ್ತು. ಆದ್ದರಿಂದ ಈ ಮಂತ್ರವೂ ಪ್ರಾಕೃತ ಭಾಷೆಯಲ್ಲಿದೆ. "ಣಮೋ" ಎಂದರೆ ನಮಸ್ಕಾರ ಎಂದರ್ಥ. ಐದೂ ಮಂದಿ ಪವಿತ್ರಾತ್ಮರಿಗೆ ನಮಸ್ಕಾರ ಮಾಡುವುದಕ್ಕೆ ಪ್ರತಿಯೊಂದು ಚರಣ ಸಾಲಿನ ಮೊದಲಲ್ಲೂ ಣಮೋ ಎಂಬ ಶಬ್ದ ಇದೆ. ಅಂದರೆ ಅರಿಹಂತರಿಗೆ ನಮಸ್ಕಾರ.

ಸಿದ್ಧರಿಗೆ ನಮಸ್ಕಾರ



ಆಚಾರ್ಯರಿಗೆ ನಮಸ್ಕಾರ
ಉಪಾಧ್ಯಾಯರಿಗೆ ನಮಸ್ಕಾರ
ಲೋಕದಲ್ಲಿರುವ ಎಲ್ಲಾ ಸಾಧುಗಳಿಗೆ ನಮಸ್ಕಾರ

ಎಂಬುದಾಗಿ ಇದು ಐದು ಮಂದಿ ಪರಮೇಷ್ಠಿಗಳಿಗೆ ನಮಸ್ಕಾರವನ್ನು ಮಾಡುವ ಮಂತ್ರವಾಗಿದೆ.

ಇದರಲ್ಲಿ ಮೊದಲು ಅರಿಹಂತರಿಗೆ ನಮಸ್ಕಾರ ಮಾಡಲಾಗಿದೆ. ಏಕೆಂದರೆ ಅರಿಹಂತರೆಂದರೆ ಜಿನರು, ತೀರ್ಥಂಕರರು, ಕೇವಲಿಗಳು. ಇವರು ತಮ್ಮಲ್ಲಿದ್ದ ಆತ್ಮಘಾತಿಕರ ವಾದ ಘಾತೀಯ ಕರ್ಮವೆಂಬ ಶತ್ರುಗಳನ್ನು ತಮ್ಮ ಉಗ್ರವಾದ ತಪೋಧ್ಯಾನದಿಂದ ಗೆದ್ದು ಅಂದರೆ ಕಳೆದುಕೊಂಡು ಪವಿತ್ರರಾದರು. ಆತ್ಮ ಶುದ್ಧಿಯನ್ನೂ, ಜ್ಞಾನ ಸಿದ್ಧಿಯನ್ನೂ ಹೊಂದಿ ಸರ್ವಜ್ಞರಾಗಿ ಸಕಲ ವಿಷಯವನ್ನು ತಿಳಿದರು. ಇವರು ತಾವು ಕಂಡ ಆತ್ಮಸತ್ಯವನ್ನು ಜೀವಿಗಳ ಉದ್ಧಾರಕ್ಕಾಗಿ ಧರ್ಮೋಪದೇಶ ಮಾಡಿದರು. ಇವರಿಂದ ಸತ್ಯವಾದ ಆತ್ಮೋದ್ಧಾರದ ಮಾರ್ಗ ದೊರೆಯಿತೆಂದು ತಿಳಿದು ಇವರ ಮಹೋಪ ಕಾರವನ್ನು ಸ್ಮರಿಸಿ ಇವರೇ ಮೊದಲು ಪೂಜೆ ಆರಾಧನೆಗೆ ಯೋಗ್ಯರೆಂದು ಅರಿಹಂತರನ್ನು ಮೊದಲು ಸ್ಮರಿಸುತ್ತಾರೆ. ಇವರ ನಂತರದ ಸಿದ್ಧರು ಸರ್ವಶ್ರೇಷ್ಠರಾದ ಆತ್ಮರಾದರೂ ಇವರು ಅಮೂರ್ತರು ಅಂದರೆ ಕಣ್ಣಿಗೆ ಕಾಣುವುದಿಲ್ಲ ಕೈಗೆ ಸಿಗುವುದಿಲ್ಲ ಅವರು ಅರೂಪಿಗಳಾಗಿ ಸಿದ್ಧ ಲೋಕದಲ್ಲಿ ಸುಖ ಶಾಂತಿಯಿಂದ ಇರುವವರು ಆದ್ದರಿಂದ ಸಿದ್ಧರನ್ನು ಅರಹಂತರ ನಂತರ ಸ್ಮರಿಸುತ್ತಾರೆ. ಇವರಿವರಲ್ಲಿ ಏರು ಪೇರು ಹೆಚ್ಚು ಕಮ್ಮಿ ಎಂದೇನಿಲ್ಲ. ಅರಿಹಂತರಾದವರು ಸಿದ್ಧರಾಗಿಯೇ ತೀರುತ್ತಾರೆ. ಅರಹಂತರು ಮೂರ್ತಿ ಸ್ವರೂಪರು. ವ್ಯಕ್ತರು, ಸಿದ್ಧರು ಅಮೂರ್ತರು ಅಶರೀರಿಗಳು, ಅವ್ಯಕ್ತರು, ಕೇವಲ ಜ್ಞಾನಕ್ಕೆ ಗೋಚರಿಸುವವರು. ಹೀಗಾಗಿ ಸ್ವರೂಪ ಮೊದಲು. ಅರೂಪ ಅನಂತರವೆಂದೂ, ಸ್ವರೂಪದಿಂದ, ಸ್ಥಲದಿಂದ ಅರೂಪ, ಸೂಕ್ಷ್ಮದ ಪರಿಚಯಕ್ಕೆಂದು ಹೀಗೆ ಅರಿಹಂತರನ್ನು ಮೊದಲು ಸಿದ್ಧರನ್ನು ನಂತರ ಸ್ಮರಿಸಲಾಗುತ್ತಿದೆ. ಇನ್ನು ಆಚಾರ್ಯರೂ, ಉಪಾಧ್ಯಾಯರೂ, ಸರ್ವಸಾಧುಗಳೂ ಅರಿಹಂತ, ಸಿದ್ಧರಾಗುವುದಕ್ಕೆ ಬೇಕಾದ ಸಾಧನಾ ಪಥದಲ್ಲಿ ಸಾಗುತ್ತಿದ್ದಾರೆ. ಇವರೂ ಶ್ರೇಷ್ಠವಾದ ಆಚಾರ, ವಿಚಾರ ನಿಷ್ಠರಾಗಿದ್ದಾರೆ. ಮುಂದೆ ಆ ಉತ್ತಮ ಪದವಿಯನ್ನು ಹೊಂದುವವರಿದ್ದಾರೆ ಆದ್ದರಿಂದ ಇವರುಗಳನ್ನು ಅರಿಹಂತರು, ಸಿದ್ಧರ ನಂತರ ಕ್ರಮವಾಗಿ ಅವರ ಪದವಿಗನುಸಾರವಾಗಿ ಆಚಾರ್ಯರು ಉಪಾಧ್ಯಾಯರು ಸರ್ವ ಸಾಧುಗಳನ್ನು ಸ್ಮರಿಸಲಾಗುತ್ತದೆ. ಇವರೆಲ್ಲಾ ಪರಮ ಪೂಜ್ಯರೂ ಶ್ರೇಷ್ಠರೂ,

ಉತ್ತಮರೂ, ಮಂಗಲರೂ ಪವಿತ್ರರೂ ಆಗಿದ್ದಾರೆ. ಇವರ ಸ್ಮರಣೆಯಿಂದ ನಾವೂ ಅಂತಹ ಉತ್ತಮ ಪದವಿಗಳನ್ನು ಹೊಂದಿ ಸರ್ವ ಶ್ರೇಷ್ಠವಾದ ಮುಕ್ತಿ ಮಂದಿರವನ್ನು ಸೇರಿ ಸಹಜ್ಞಾನಂದ ಸುಖ ಶಾಂತಿಯನ್ನು ಹೊಂದಬಹುದು. ಜೈನರಲ್ಲಿ ಆರಾಧಕನು ಮುಂದೆ ಆರಾಧ್ಯನೇ ಆಗುತ್ತಾನೆ. ಪೂಜಕನೂ ಪೂಜ್ಯನೇ ಆಗುತ್ತಾನೆ. ಆದ್ದರಿಂದ "ವಂದೇ ತದ್ಗುಣ ಲಬ್ಧಯೇ" ಎಂದು ನಾವೂ ಅಂತಹ ಗುಣಗಳನ್ನು ಪಡೆಯಬೇಕೆಂದು ನಮಸ್ಕಾರ ಮಾಡುತ್ತೇನೆ ಎಂಬ ಭಾವನೆ ಇರುತ್ತದೆ. ಇನ್ನು ಇವರ ಸ್ವರೂಪವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಅರಿಹಂತರು :

ಇವರನ್ನು ಅರಹಂತರೆಂದೂ, ಅರ್ಹಂತರೆಂದೂ, ಜಿನರೆಂದೂ, ಕೇವಲಿಗಳೆಂದೂ, ಹಿತೋಪದೇಶಕರೆಂದೂ, ಸರ್ವಜ್ಞರೆಂದೂ, ವೀತರಾಗಿ ಗಳೆಂದೂ, ಆಪ್ತರೆಂದೂ ಕರೆಯುತ್ತಾರೆ. "ಅರಿ" ಎಂದರೆ ಕರ್ಮ ಶತ್ರುಗಳನ್ನು "ಹಂತ" ಗೆದ್ದವರು ಕಳೆದುಕೊಂಡವರು, ನಾಶ ಮಾಡಿದವರೂ ಎಂದರ್ಥ, ಕರ್ಮ ಶತ್ರುಗಳನ್ನು ಜಯಿಸಿದವರು ಜಿನರು, ಕೇವಲ ಜ್ಞಾನವನ್ನು ಹೊಂದಿದವರು ಕೇವಲಿಗಳು, ಜೀವಿಗಳಿಗೆ ಹಿತವಾದ ಧರ್ಮದ ಉಪದೇಶ ಮಾಡಿದವರು ಹಿತೋಪದೇಶಿಗಳು, ಸಕಲವನ್ನು ತಿಳಿದವರು ಸರ್ವಜ್ಞರು. ರಾಗದ್ವೇಷ ಕಷಾಯಾದಿ ದೋಷಗಳಿಲ್ಲದವರು ವೀತರಾಗಿಗಳು, ಎಲ್ಲಾ ಆತ್ಮ ಹಿತಚಿಂತಕರಾದ್ದರಿಂದ ಇವರನ್ನು ಆಪ್ತರೆಂದೂ, ಧರ್ಮತೀರ್ಥವನ್ನು ಹರಿಸಿದವರಾದ್ದರಿಂದ ತೀರ್ಥಂಕರರೆಂದೂ ಇವರನ್ನು ಕರೆದರು. ಹೀಗೆ ಇವರ ಗುಣಾತಿಶಯಗಳನ್ನು ಕೊಂಡಾಡುವ 1008 ಹೆಸರುಗಳು. ಇಷ್ಟೇ ಅಲ್ಲ ಇವರು ಅನಂತ ಗುಣನಿಧಿಯಾಗಿರುತ್ತಾರೆ. ಅರಿಹಂತರು ಮುಖ್ಯವಾದ 46 ಗುಣಾತಿಶಯ ಗಳಿಂದ ಕೂಡಿರುತ್ತಾರೆ. ಅವುಗಳೆಂದರೆ :-

ಜನ್ಮಾತಿಶಯಗಳು - 10 : ಕೇವಲ ಜ್ಞಾನದ ಅತಿಶಯಗಳು 10, ದೇವಕೃತ ಅತಿಶಯಗಳು-14, ಪ್ರಾತಿಹಾರ್ಯಗಳು 8 ಮತ್ತು ಅನಂತ ಚತುಷ್ಟಯಗಳು 4,

1. ಜನ್ಮಾತಿಶಯಗಳು :

1. ಬೆವರಿಲ್ಲದ ದೇಹ.
2. ಮಲಮೂತ್ರ ವಿಸರ್ಜನೆ ಇಲ್ಲದಿರುವುದು.
3. ಶರೀರದಲ್ಲಿ ಹಾಲಿನಂತಹ ರಕ್ತ ಹರಿಯುವುದು.



4. ವಜ್ರದಂತೆ ಇರುವ ಮೂಳೆ ಕೀಲುಗಳಿರುವುದು.
5. ಸರ್ವಾಂಗ ಸಂಪೂರ್ಣ ಸುಲಕ್ಷಣ ದೇಹವಿರುವುದು.
6. ಅತ್ಯಂತ ಸ್ಫುರದ್ರೂಪಿಗಳಾಗಿರುವುದು.
7. ಸುಗಂಧಮಯವಾದ ಶರೀರವಿರುವುದು.
8. 1008 ಅಂಗ ಲಕ್ಷಣ ಹೊಂದಿರುವುದು.
9. ಅಪರಿಮಿತವಾದ ಶಕ್ತಿಯುಳ್ಳವರಾಗಿರುವುದು.
10. ಹಿತಮಿತ ಮೃದು ಮಧುರ ಗಂಭೀರ ಮಾತುಳ್ಳವರಾಗಿರುವುದು.

**2. ದೇವಕೃತ ಅತಿಶಯ:**

1. ಅರ್ಧ ಮಾಗಧೀಭಾಷೆ, 2. ಸರ್ವಜನ ಮೈತ್ರಿ, 3. ಸರ್ವಋತು ಫಲ ಶೋಭಿತ, 4. ಅವರು ವಿಹಾರ ಮಾಡುವಾಗ ನೆಲವೆಲ್ಲಾ ಕನ್ನಡಿಯಂತೆ ಸ್ವಚ್ಛವಾಗಿರುತ್ತದೆ, 5. ಸುಗಂಧವಾಯು ಬೀಸುತ್ತದೆ, 6. ಜನರೆಲ್ಲಾ ಆನಂದ ಭರಿತರಾಗಿರುತ್ತಾರೆ, 7. ಭೂಭಾಗ ಶಾಂತವಾಗಿ ನಿಷ್ಕಂಟಕವಾಗಿರುತ್ತದೆ, 8. ಸುಗಂಧ ಜಲವೃಷ್ಟಿಯಾಗುತ್ತದೆ, 9. ವೃಕ್ಷಗಳೆಲ್ಲಾ ಫಲಪುಷ್ಪ ಭರಿತವಾಗಿರುತ್ತವೆ, 10. ಹೆಜ್ಜೆ ಇಡುವಾಗ ಅವರ ಕಾಲಕೆಳಗೆ ಕಮಲಗಳ ರಚನೆಯಾಗುತ್ತದೆ, 11. ನಿರ್ಮಲಾಕಾಶವಿರುತ್ತದೆ, 12. ದೇವತೆಗಳು ಸದಾ ಬರುತ್ತಿರುತ್ತಾರೆ, 13. ಅವರ ಮುಂದೆ ಸದಾ ಧರ್ಮಚಕ್ರವಿರುತ್ತದೆ, 14. ಅಷ್ಟಮಂಗಲ ದ್ರವ್ಯಗಳು ಅವರ ಸುತ್ತಾ ಇರುತ್ತವೆ.

**3. ಕೇವಲ ಜ್ಞಾನದ ಅತಿಶಯಗಳು – 10 :**

1. ಅವರಿರುವ ಕಡೆ ಸುಭಿಕ್ಷವಿರುತ್ತದೆ.
2. ಅವರಿಗೆ ಆಕಾಶದಲ್ಲಿ ಗಮನ ಮಾಡುವ ಶಕ್ತಿ ಇರುತ್ತದೆ.
3. ಅವರಿದ್ದ ಕಡೆ ಯಾವ ಪ್ರಾಣಿಗೂ ಹಿಂಸೆಯಾಗುವುದಿಲ್ಲ.
4. ಅವರು ಆಹಾರ ತೆಗೆದುಕೊಳ್ಳುವುದಿಲ್ಲ.
5. ಯಾವ ಉಪಸರ್ಗವೂ ಆಗುವುದಿಲ್ಲ.
6. ಅವರ ಮುಖನಾಲ್ಕು ದಿಕ್ಕಿಗೂ ಕಾಣುವುದು.
7. ಅವರು ಎಲ್ಲಾ ವಿದ್ಯೆ ಪಾರಂಗತರಾಗಿರುತ್ತಾರೆ.
8. ಅವರ ಶರೀರದ ನೆರಳು ಬೀಳುವುದಿಲ್ಲ.

9. ರೆಪ್ಪೆ ಮಿಟುಕಿಸುವುದಿಲ್ಲ.

10. ಅವರಿಗೆ ದಂತ, ನಖ, ಕೇಶಗಳು ಬೆಳೆಯುವುದಿಲ್ಲ.

**4. ಪ್ರಾತಿಹಾರ್ಯಗಳು – 8 :**

1. ಅಶೋಕ ವೃಕ್ಷ, 2. ಸುರಪುಷ್ಪ ವೃಷ್ಟಿ, 3. ದಿವ್ಯ ಧ್ವನಿ, 4. ಚಾಮರ, 5. ಸಿಂಹಾಸನ, 6. ಭಾಮಂಡಲ, 7. ದೇವ ದುಂದುಭಿ, 8. ಛತ್ರತ್ರಯ.

**5. ಅನಂತ ಚತುಷ್ಟಯಗಳು – 4 :**

1. ಅನಂತಜ್ಞಾನ, 2. ಅನಂತ ದರ್ಶನ, 3. ಅನಂತವೀರ್ಯ, 4. ಅನಂತ ಸುಖ

ಹೀಗೆ ಅರಿಹಂತರಿಗೆ 46 ಗುಣಗಳಿರುತ್ತವೆ. ಇವರು ಘೋರವಾದ ತಪಸ್ಸಿನಿಂದ ಜ್ಞಾನಾವರಣೀಯ ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯವೆಂಬ ನಾಲ್ಕು ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತರೆನಿಸಿ ಪೂಜ್ಯರಾಗಿದ್ದಾರೆ.

ಅರಿಹಂತರು ಹಸಿವು, ಬಾಯಾರಿಕೆ, ಭಯ, ರಾಗ, ದ್ವೇಷ, ಮೋಹ, ಚಿಂತೆ, ರೋಗ, ಮುಪ್ಪು, ಬೆವರು, ಸಂಕಟ, ಮದ, ರತಿ, ನಿದ್ರೆ, ವಿಷಾದ, ಜನನ, ಮರಣಗಳೆಂಬ ಹದಿನೆಂಟು ರೀತಿಯ ದೋಷ ರಹಿತರಾಗಿರುತ್ತಾರೆ. ಇವರಿಗೆ ಮನ ವಚನ ಕಾಯಗಳಿರುವುದರಿಂದ ಇವರನ್ನು ಸಯೋಗ ಕೇವಲಿಗಳೆಂದು ಕರೆಯುತ್ತಾರೆ.

**2. ಸಿದ್ಧ ಪರಮೇಷ್ಠಿಗಳು :–** ಇವರು ಅಷ್ಟ ಕರ್ಮಗಳನ್ನು ಗೆದ್ದು ಅಷ್ಟ ಗುಣಗಳನ್ನು ಹೊಂದಿರುತ್ತಾರೆ.

**1. ಕ್ಷಾಯಿಕ ಸಮ್ಯಕ್ತ್ವ ಗುಣ :–** ಅನಂತ ದರ್ಶನದಿಂದ ಕೂಡಿದ ಸಮ್ಯಕ್ತ್ವವಿರುತ್ತದೆ. ಪವಿತ್ರಾತ್ಮರು ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಮಯವಾಗಿರುತ್ತಾರೆ.

**2. ಕ್ಷಾಯಿಕ ಜ್ಞಾನ :–** ಅನಂತ ಜ್ಞಾನ ಧಾರಿಗಳಾಗಿರುತ್ತಾರೆ.

**3. ಕ್ಷಾಯಿಕವೀರ್ಯ:–** ಅನಂತ ಶಕ್ತಿಯುಳ್ಳವರಾಗಿರುತ್ತಾರೆ. ಅನಂತ ಸುಖಿಗಳಾಗಿರುತ್ತಾರೆ.



**4. ಕ್ಷಾಯಿಕದರ್ಶನ:–** ಮೂರೂ ಲೋಕವನ್ನು ಒಮ್ಮೆಲೇ ನೋಡುವ ಗುಣವುಳ್ಳವರಾಗಿರುತ್ತಾರೆ.

**5. ಅಗುರುಲಘುತ್ವ:–** ಅವರು ಹಗುರವೂ ಇಲ್ಲದ ಭಾರವೂ ಇಲ್ಲದ ಆತ್ಮ ಸ್ವರೂಪರಾಗಿದ್ದಾರೆ.

**6. ಸೂಕ್ಷ್ಮತ್ವ:–** ಬಹಳ ಸೂಕ್ಷ್ಮಾತ್ಮರಾಗಿದ್ದಾರೆ.

**7. ಅವ್ಯಾಬಾಧತ್ವ:–** ತನ್ನಂತೆ ಬಹಳಷ್ಟು ಮಂದಿ ಇರುವ ಯಾವ ಸಿದ್ಧಾತ್ಮರಿಗೆ ಯಾವ ಬಾಧೆಯಾಗದಂತೆ ಇರುತ್ತಾರೆ.

**8. ಅವಗಾಹನತ್ವ:–** ತನ್ನಲ್ಲಿ ತಾನಿದ್ದು, ತಾನೇ ತಾನಾಗಿದ್ದು ತನ್ನ ಆತ್ಮೀಕವಾದ ಅನಂತ ಸುಖ, ಶಾಂತಿ, ಆನಂದದಲ್ಲಿ ತಲ್ಲೀನವಾಗಿರುವುದು.

ಈ ರೀತಿಯಾದ ಸಿದ್ಧಾತ್ಮರು ಅಶರೀರಿಗಳಾಗಿ ಮೂರು ಲೋಕದ ತುತ್ತ ತುದಿಯಲ್ಲಿರುವ ಮುಕ್ತಿ ಮಂದಿರದಲ್ಲಿ ಈಶತ್ಪ್ರಾಗ್ಭಾರವೆಂಬ ಸಿದ್ಧಸ್ಥಾನದಲ್ಲಿ ಇರುತ್ತಾರೆ. ಪರಿಶುದ್ಧ ಪರಂಜ್ಯೋತಿ ಸ್ವರೂಪರಾಗಿದ್ದಾರೆ. ಇವರು ನಿರಂಜನಸಿದ್ಧರಾಗಿದ್ದಾರೆ. ಧ್ರುವನೂ, ಅಚಲನೂ ಅನುಪಮವಾದ ಸುಖಾನಂದ ಸ್ವರೂಪರಾಗಿದ್ದಾರೆ. ಇವರು ಸಕಲ ಕರ್ಮವನ್ನು ಗೆದ್ದಾಗ, ಶರೀರವನ್ನು ಬಿಡುವಾಗ ಯಾವ ಶರೀರಾಕೃತಿ ಇತ್ತೋ ಅಷ್ಟು ಎತ್ತರ ಗಾತ್ರದಲ್ಲಿ ಅವರ ಆತ್ಮ ಸ್ವರೂಪರಾಗಿರುತ್ತಾರೆ. ಮತ್ತೆ ಅವರು ಎಂದೂ ಈ ಸಂಸಾರಕ್ಕೆ ಹಿಂದಿರುಗುವುದಿಲ್ಲ.

**3. ಆಚಾರ್ಯ ಪರಮೇಷ್ಠಿಗಳು:–**

ಜೈನ ಚತುಃಸಂಘದಲ್ಲಿ ಮುನಿಗಳೂ, ಆರ್ಯಿಕೆಯರೂ, ಶ್ರಾವಕರೂ ಶ್ರಾವಿಕೆಯರೂ ಇರುತ್ತಾರೆ. ಇವರಿಗೆ ವ್ರತ ನಿಯಮಾದಿಗಳನ್ನು ಕೊಟ್ಟು ಅರ್ಹರಾದವರಿಗೆ ದೀಕ್ಷೆಯನ್ನು ಕೊಡುವವರೂ, ಪ್ರಮಾದದಿಂದ ಯಾರಾದರೂ ಸಂಘದಲ್ಲಿ ತಪ್ಪು ನಡೆದರೆ ಅವರಿಗೆ ಪ್ರಾಯಶ್ಚಿತ್ತಾದಿ ಶಿಕ್ಷೆಯನ್ನು ನೀಡುವವರೂ, ಚತುಃಸಂಘ ನಾಯಕರೂ ಆದ ದಿಗಂಬರ ಮುನಿ ಮುಖಂಡರೇ **ಆಚಾರ್ಯರು**. ಇವರು ಶಾಸ್ತ್ರೋಕ್ತವಾದ ಆಚಾರ ವಿಚಾರ ಪರಿಪೂರ್ಣರಾಗಿರುತ್ತಾರೆ. ಶ್ರಮಣ ಸಂಘದ ನೇತಾರರಾಗಿ ವಿಹರಿಸುತ್ತಾರೆ. ಇವರೂ ಪೂಜ್ಯರೂ, ಪರಮೇಷ್ಠಿಗಳೂ ಆಗಿರುತ್ತಾರೆ.

ಆಚಾರ್ಯರು 36 ಗುಣ ವಿಭೂಷಿತರಾಗಿರುತ್ತಾರೆ. 12 ತಪಸ್ಸುಗಳೂ,

3 ಗುಪ್ತಿಗಳೂ, 10 ಧರ್ಮಗಳೂ, 5 ಆಚಾರಗಳೂ, 6 ಆವಶ್ಯಕಕ್ರಿಯೆಗಳೂ ಇರುತ್ತವೆ. ತಪಸ್ಸಿನಲ್ಲಿ 6 ಬಹಿರಂಗ ತಪಸ್ಸು, 6 ಅಂತರಂಗ ತಪಸ್ಸು ಎಂಬ ಭೇದಗಳಿವೆ.

**ಬಹಿರಂಗ ತಪಸ್ಸು – 6 :**

1. ಅನಶನ (ಉಪವಾಸ ಮಾಡುವುದು)

2. ಅವಮೋದಾರ್ಯ (ಕಡಿಮೆ ಆಹಾರ ತೆಗೆದುಕೊಳ್ಳುವುದು)

3. ವೃತ್ತಿ ಪರಿಸಂಖ್ಯಾನ (ಇಂತಹ ಆಹಾರ ದೊರೆತರೆ ಮಾತ್ರ ತೆಗೆದುಕೊಳ್ಳುವೆನೆಂದು ಸಂಕಲ್ಪ ಮಾಡಿಕೊಂಡು ಆಹಾರಕ್ಕೆ ಹೋಗುವುದು)

4. ರಸಪರಿತ್ಯಾಗ (ನೀರಸ ಆಹಾರ ತೆಗೆದುಕೊಳ್ಳುವುದು)

5. ಕಾಯಕ್ಲೇಶ (ಶರೀರವನ್ನು ದಂಡಿಸುವುದು)

6. ವಿವಿಕ್ತಶಯ್ಯಾಸನ (ನೆಲದ ಮೇಲೆ ಒಂದೇ ಮಗ್ಗುಲಲ್ಲಿ ಮಲಗುವುದು.

**ಅಂತರಂಗ ತಪಸ್ಸು – 6 :**

1. ಪ್ರಾಯಶ್ಚಿತ್ತ (ಮಾಡಿದ ತಪ್ಪನ್ನು ಒಪ್ಪಿಕೊಂಡು ಗುರುಗಳಲ್ಲಿ ಕ್ಷಮೆ ಕೇಳಿ ಪಶ್ಚಾತ್ತಾಪ ಪಡುವುದು)

2. ವಿನಯ (ದೇವರು, ಗುರು, ಶಾಸ್ತ್ರಕ್ಕೆ ವಿಧೇಯನಾಗಿರುವುದು)

3. ವೈಯಾ ವೃತ್ಯ (ಗುರುಗಳ ಸಾಧುಗಳ ಸೇವೆ ಮಾಡುವುದು)

4. ಸ್ವಾಧ್ಯಾಯ (ಸದಾ ಧರ್ಮ ಗ್ರಂಥಗಳನ್ನು ಓದುವುದು)

5. ವ್ಯುತ್ಸರ್ಗ (ಶರೀರದ ಮಮಕಾರವನ್ನು ಬಿಡುವುದು)

6. ಧ್ಯಾನ (ಆತ್ಮ ಚಿಂತನೆ ಮಾಡುವುದು)

**3. ಗುಪ್ತಿಗಳು – 3 :**

1. ಮನೋಗುಪ್ತಿ, 2. ವಚನ ಗುಪ್ತಿ, 3. ಕಾಯಗುಪ್ತಿ, ಅಂದರೆ ಮನ-ವಚನ-ಕಾಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವುದು.



**4. ಧರ್ಮಗಳು–10 :**

1. ಉತ್ತಮ ಕ್ಷಮಾ (ಕೋಪ, ತಾಪ, ವೈರ ಮಾಡದಿರುವುದು)

2. ಉತ್ತಮ ಮಾರ್ದವ (ಮೃದು ಸ್ವಭಾವ)

3. ಉತ್ತಮ ಆರ್ಜವ (ಮಾಯಾಚಾರವನ್ನು ಬಿಟ್ಟು ತ್ರಿಕರಣ ಶುದ್ಧಿಯಿಂದಿರುವುದು)

4. ಉತ್ತಮಶೌಚ (ಲೋಭಮೋಹವನ್ನು ತೊರೆಯುವುದು)

5. ಉತ್ತಮ ಸತ್ಯ (ನಡೆನುಡಿಯಲ್ಲಿ ಶುದ್ಧನಾಗಿರುವುದು)

6. ಉತ್ತಮ ಸಂಯಮ (ಇಂದ್ರಿಯ-ಮನಸ್ಸುಗಳನ್ನು ನಿಗ್ರಹಿಸುವುದು, ಪ್ರಾಣಿಹಿಂಸೆಯಾಗದಂತೆ ಎಚ್ಚರವಹಿಸುವುದು)

7. ಉತ್ತಮತಪ (ಇಚ್ಛೆಯನ್ನು ತಡೆಯುವುದು)

8. ಉತ್ತಮತ್ಯಾಗ (ರಾಗದ್ವೇಷ ಮಾಡದಿರುವುದು)

9. ಉತ್ತಮ ಆಕಿಂಚನ್ಯ (ಅಪರಿಗ್ರಹಿಯಾಗಿರುವುದು)

10. ಉತ್ತಮ ಬ್ರಹ್ಮಚರ್ಯ (ಆತ್ಮೋಪಾಸನೆಯಲ್ಲಿರುವುದು)

**ಆವಶ್ಯಕ ಕ್ರಿಯೆಗಳು–6 :**

1. ಸಾಮಾಯಿಕ (ಸಮತಾಭಾವದಿಂದಿರುವುದು)

2. ಸ್ತವನ (ಜಿನರ-ಪಂಚಪರಮೇಷ್ಠಿಗಳ ಸ್ತೋತ್ರ ಮಾಡುವುದು)

3. ಪ್ರತಿಕ್ರಮಣ (ಪ್ರಮಾದಗಳನ್ನು ಒಪ್ಪಿಕೊಂಡು ಪ್ರಾಯಶ್ಚಿತ್ತ ಮಾಡಿಕೊಳ್ಳುವುದು)

4. ಪ್ರತ್ಯಾಖ್ಯಾನ (ಮತ್ತೆ ಪ್ರಮಾದಗಳು ಆಗದಂತೆ ಎಚ್ಚರವಿರುವುದು)

5. ವಂದನೆ ಜಿನದೇವ-ಗುರು-ಶಾಸ್ತ್ರಗಳಿಗೆ ನಮಸ್ಕರಿಸುವುದು)

6. ಕಾಯೋತ್ಸರ್ಗ (ನಿಂತು ತಪಸ್ಸು ಮಾಡುವುದು)

ಜ್ಞಾನಾಚಾರ, ದರ್ಶನಾಚಾರ, ತಪಾಚಾರ, ಚಾರಿತ್ರಾಚಾರ ಮತ್ತು ವೀರ್ಯಾಚಾರಗಳೆಂಬ ಐದು ವಿಧವಾದ ಆಚಾರ ನಿಷ್ಠರಾಗಿರುತ್ತಾರೆ. ಹೀಗೆ ಆಚಾರ್ಯರು 36 ಗುಣಗಳಿಂದ ವಿಭೂಷಿತರಾಗಿ ಆಚಾರ ವಿಚಾರಗಳಲ್ಲಿ ನಿಷ್ಠಾವಂತರಾಗಿ ಪೂಜ್ಯರಾಗಿರುತ್ತಾರೆ.

**4. ಉಪಾಧ್ಯಾಯ ಪರಮೇಷ್ಠಿಗಳು:-**

ಆಚಾರ್ಯರ ಸಂಘದಲ್ಲಿ ಸಕಲ ಶಾಸ್ತ್ರಗಳನ್ನು ಬಲ್ಲವರಾಗಿ ಸಂಘಸ್ಥರೆಲ್ಲರಿಗೂ ಶಾಸ್ತ್ರಾಭ್ಯಾಸ, ಧರ್ಮೋಪದೇಶ ಮಾಡುತ್ತಿರುತ್ತಾರೆ. ದಿಗಂಬರ ಯತಿಗಳಾದ ಇವರು ಉತ್ತಮ ವಾಗ್ಮಿಗಳೂ, ಲೇಖಕರೂ, ವಾದ ವಿವಾದಗಳನ್ನು ಬಲ್ಲ ದರ್ಶನ ಶಾಸ್ತ್ರಜ್ಞರೂ ಆಗಿರುತ್ತಾರೆ. ಇವರು 25 ಮೂಲಗುಣವನ್ನು ಹೊಂದಿರುತ್ತಾರೆ.

**ಅಂಗಶಾಸ್ತ್ರಗಳು – 11**
**ಪೂರ್ವಿಗಳು – 14**

ಹೀಗೆ ಹನ್ನೊಂದಂಗ ಶಾಸ್ತ್ರ ಹದಿನಾಲ್ಕು ಪೂರ್ವಿಗಳೆಂಬ ಸಮಸ್ತ ಜಿನ ವಾಣಿಯನ್ನು ಬಲ್ಲವರಾಗಿರುತ್ತಾರೆ. ತಪೋ ಜ್ಞಾನ ವೈರಾಗ್ಯ ಉಳ್ಳವರಾಗಿದ್ದು ಆಚಾರ್ಯರಿಗೆ ವಿಧೇಯರಾಗಿರುತ್ತಾರೆ.

**11 ಅಂಗ ಶಾಸ್ತ್ರಗಳು :**

1. ಆಚಾರಾಂಗ, 2. ಸೂತ್ರಕೃತುಂಗ, 3. ಸ್ಥಾನಾಂಗ, 4. ಸಮವಾಯಾಂಗ, 5. ವ್ಯಾಖ್ಯಾಪ್ರಜ್ಞಪ್ತಿ ಅಂಗ, 6. ಜ್ಞಾತೃಕೃತಾಂಗ, 7. ಉಪಾಸಕಾಧ್ಯಯನಾಂಗ 8. ಅಂತಕೃದ್ದಶಾಂಗ 9. ಅನುತ್ತರೋಪಪಾದಿಕದಶಾಂಗ 10. ಪ್ರಶ್ನಾವ್ಯಾ ಕರಣಾಂಗ 11. ವಿಪಾಕಸೂತ್ರಾಂಗ

**14 ಪೂರ್ವಿಗಳು : ಇವು 12ನೆಯ ಅಂಗದ ಪ್ರಭೇದಗಳು.**

1. ಉತ್ಪಾದಪೂರ್ವ 2. ಅಗ್ರಾಯಣೀಪೂರ್ವ 3. ವೀರ್ಯಪ್ರವಾದಪೂರ್ವ 4. ಅಸ್ತಿನಾಸ್ತಿಪ್ರವಾದಪೂರ್ವ 5. ಜ್ಞಾನಪ್ರವಾದಪೂರ್ವ 6. ಸತ್ಯ ಪ್ರವಾದಪೂರ್ವ 7. ಆತ್ಮಪ್ರವಾದಪೂರ್ವ 8. ಕರ್ಮಪ್ರವಾದ ಪೂರ್ವ 9. ಪ್ರತ್ಯಾಖ್ಯಾನ ಪೂರ್ವ 10. ವಿದ್ಯಾನುವಾದಪೂರ್ವ 11. ಕಲ್ಯಾಣಪೂರ್ವ 12. ಪ್ರಾಣವಾಯಪೂರ್ವ 13. ಕ್ರಿಯಾವಿಶಾಲಪೂರ್ವ 14. ಲೋಕಬಿಂದುಸಾರಪೂರ್ವ.

ಹೀಗೆ ಉಪಾಧ್ಯಾಯರು ಜಿನಾಗಮದ ಸರ್ವಸ್ವವನ್ನೂ ಬಲ್ಲವರಾಗಿ ಆತ್ಮ ಕಲ್ಯಾಣದತ್ತ ಸಾಗುತ್ತಿರುತ್ತಾರೆ.



**5. ಸಾಧು ಪರಮೇಷ್ಠಿಗಳು :**

ಸಂಸಾರ ಶರೀರ ಭೋಗದಿಂದ ವೈರಾಗ್ಯ ಹೊಂದಿ ಮನೆ ಮಡದಿ ಮಕ್ಕಳು ಉದ್ಯೋಗ ವ್ಯವಹಾರಾದಿಗಳನ್ನು ತೊರೆದು ಗುರುಗಳ ಬಳಿ ಸಾರಿ ಸಕಲ ಪರಿಗ್ರಹರತರಾಗಿ ದಿಗಂಬರ ದೀಕ್ಷಾಧಾರಿಗಳಾಗಿ ಜ್ಞಾನ-ಧ್ಯಾನ ತಪಾರಾಧನೆಯಲ್ಲಿ ತೊಡಗಿರುವವರೇ ಸಾಧುಗಳು. ಇವರು ಸದಾ ಸಮತಾಭಾವದಿಂದ ಶಾಂತರಾಗಿರುತ್ತಾರೆ. ಆತ್ಮೋನ್ನತಿಪಥದಲ್ಲಿ ಸಾಗುತ್ತಾ ಮುಕ್ತಿಯ ಸಾಧಕರಾದ ಶ್ರಮಣರಾಗಿರುತ್ತಾರೆ.

ಇವರು 28 ಮೂಲಗುಣಗಳನ್ನು ಹೊಂದಿರುತ್ತಾರೆ.

ಮಹಾವ್ರತಗಳು - 5, ಸಮಿತಿಗಳು - 5, ಆವಶ್ಯಕ ಕ್ರಿಯೆಗಳು - 6, ಇಂದ್ರಿಯನಿಗ್ರಹ - 5, ಕೇಶಲೋಚನ, ನಗ್ನತ್ವ, ಅಸ್ನಾನ, ಅದಂತ ಧಾವನ, ಸ್ಥಿತಿ ಭೋಜನ, ಭೂಶಯ, ಏಕ ಭುಕ್ತ (ದಿನಕ್ಕೆ ಒಪ್ಪತ್ತು ಮಾತ್ರ ಆಹಾರ ತೆಗೆದು ಕೊಳ್ಳುವುದು)

ಹೀಗೆ ಇವೆಲ್ಲಾ ಸೇರಿ 28 ರೀತಿಯ ಆಚಾರ ಪರಿಪಾಲಕರಾಗಿ ಗುಣಶಾಲಿಗಳಾಗಿರುತ್ತಾರೆ.

ಎಲ್ಲ ನಿಗ್ರಂಥ ಮುನಿಗಳೂ ಸಾಧು ಪರಮೇಷ್ಠಿಗಳಾಗಿರುತ್ತಾರೆ. ಈ ಮೂಲಗಳನ್ನು ಉಪಾಧ್ಯಾಯರೂ, ಆಚಾರ್ಯರೂ ಪಾಲಿಸುತ್ತಾರೆ. ಇವುಗಳ ಜೊತೆಗೆ ಶಾಸ್ತ್ರಜ್ಞಾನ ಹೊಂದಿ ಉಪದೇಶವನ್ನು ಮಾಡುವ ಉಪಾಧ್ಯಾಯರನ್ನು ಸಂಘದ ನಾಯಕರಾದ ಮುನಿಮುಖ್ಯಸ್ಥರಾದ ಆಚಾರ್ಯರನ್ನೂ ಸಾಧು ಗಳಿಗಿಂತ ಮುಂಚೆ ಸ್ಮರಿಸುತ್ತಾರೆ.

ಪಂಚ ಪರಮೇಷ್ಠಿಗಳಲ್ಲಿ ಆಚಾರ್ಯರೂ, ಉಪಾಧ್ಯಾಯರೂ, ಸಾಧುಗಳೂ, ಗುರುಗಳೆನಿಸಿದ್ದಾರೆ. ಇವರು ಈಗಲೂ ಇರುವವರಾಗಿದ್ದಾರೆ. ಅರಹಂತರು ಈ ಪಂಚಮಕಾಲದಲ್ಲಿ ಈ ಕ್ಷೇತ್ರದಲ್ಲಿಲ್ಲ. ಆದರೆ ವಿದೇಹ ಕ್ಷೇತ್ರ ದಲ್ಲಿದ್ದಾರೆ. ಸಿದ್ಧರು ಸಿದ್ಧ ಲೋಕದಲ್ಲಿ ಸದಾ ಇರುತ್ತಾರೆ. ಇವರೆಲ್ಲಾ ಎಲ್ಲಿಯೇ ಇರಲಿ ಅವರನ್ನು ಸ್ಮರಿಸಿ ವಂದಿಸಿ ಪೂಜಿಸುವುದು ಮುಖ್ಯವಾಗಿದೆ. ಈ ಪಂಚ ಪರಮೇಷ್ಠಿಗಳ ಮೂಲ ರೂಪವು ಷಟ್‌ಖಂಡಾಗಮದ ಮೊದಲ ಮಂಗಲಶ್ಲೋಕವಾಗಿದೆ. ಜೈನರಿಗೆ ಈಗ ದೊರೆತಿರುವ ಮೂಲ ಗ್ರಂಥವೇ ಈ ಷಟ್‌ಖಂಡಾಗಮ. ಇದನ್ನು ಮಂಗಲ ಶ್ಲೋಕವಾಗಿ ಉಪಯೋಗಿಸಿರಬೇಕಾದರೆ ಇದು ಅನಾದಿ ಮೂಲಮಂತ್ರವಾಗಿದೆ.

ಈ ಮಂತ್ರದ ಅರಹಂತರ, ಸಿದ್ಧರ, ಆಚಾರ್ಯರ, ಉಪಾಧ್ಯಾಯರ, ಸಾಧುಗಳ ಮೊದಲಕ್ಷರವು ಸೇರಿ ಓಂ ಎಂಬ ಏಕಾಕ್ಷರ, ಬೀಜಾಕ್ಷರ, ಪ್ರಣ ವಾಕ್ಷರ ಮಂತ್ರವಾಗಿದೆ ಹಾಗೂ ಈ ಮಂತ್ರದ ಸಂಕ್ಷಿಪ್ತ ರೂಪ ಓಂ ಅ ಸಿ ಆ ಉ ಸಾ ನಮಃ ಎಂದೂ ಹೇಳಿಕೊಳ್ಳುವ ವಾಡಿಕೆ ಉಂಟು.

ಈ ಣಮೋಕಾರವು ಎಲ್ಲಾ ಮಂತ್ರಗಳಿಗೂ ಮೂಲವಾಗಿದೆ. ಇಷ್ಟಾರ್ಥಸಿದ್ಧಿ ದಾಯಕವಾಗಿದೆ. ಮೋಕ್ಷ ಪ್ರದಾಯಕವಾಗಿದೆ. ಸುಖ ಶಾಂತಿಯನ್ನು ಕೊಡುವ ಮಂತ್ರವಾಗಿದೆ. ಅನಾದಿಯಿಂದಲೂ ಈ ಮಂತ್ರವನ್ನೇ ಜಪಿಸಿ ಜಿನರೂ ಸಿದ್ಧರೂ ಆಗಿ ನಿತ್ಯ ನಿರ್ಮಲ ಸುಖಿಗಳಾಗಿದ್ದಾರೆ. ಈ ಮಂತ್ರದ ಮಹಿಮೆ ಅಪಾರ. ಈ ಮಂತ್ರದ ಜಪವನ್ನು ತಮಗೆ ಸಾಧ್ಯವಾದಷ್ಟು ಮಾಡ ಬಹುದು. ಎಷ್ಟು ಮಾಡಿದರೆ ಅಷ್ಟಷ್ಟು ಫಲ.

## 69. ಸರ್ವೋದಯ ಧರ್ಮತೀರ್ಥ

ಪತಿತನನ್ನು ಪಾವನಗೊಳಿಸುವ ಧರ್ಮವೇ ಸರ್ವೋದಯ ತೀರ್ಥವೆಂದು ಪ್ರಸಿದ್ಧವಾಗಿದೆ. ಜೈನ ಧರ್ಮವೇ ಸರ್ವೋದಯತೀರ್ಥವಾಗಿದೆ.

ಸರ್ವ, ಉದಯ, ತೀರ್ಥ ಎಂಬ ಪದಗಳು ಸೇರಿ ಸರ್ವೋದಯ ತೀರ್ಥ ವಾಗಿದೆ.

ಸರ್ವ ಎಂದರೆ ಸಂಪೂರ್ಣ, ಸಕಲ, ಎಲ್ಲಾ, ಎಲ್ಲರ, ಸರ್ವರ ಸಂಪೂರ್ಣ ಜೀವರಾಶಿಯ ಎಂದಾಗುತ್ತದೆ.

ಉದಯವೆಂದರೆ ವಿಕಾಸ, ಏಳಿಗೆ, ಉನ್ನತಿ ಮೇಲೇರುವುದು, ಮುಂದುವರಿಯುವುದು ಎಂದಾಗುತ್ತದೆ.

ತೀರ್ಥವೆಂದರೆ ಪವಿತ್ರವಾದ, ಪಾವನವಾದ, ಧರ್ಮ ಎಂದಾಗುತ್ತದೆ.

ಹೀಗಾಗಿ ಎಲ್ಲರ ಏಳಿಗೆಯ ಸಾಧನವಾದ ಪವಿತ್ರ ಧರ್ಮವೇ ಸರ್ವೋದಯ ತೀರ್ಥ, ವ್ಯಾಪಕವಾದ ಅಭಿಪ್ರಾಯವೆಂದರೆ ಸರ್ವರ, ಸರ್ವ ಜೀವಾತ್ಮರ



ಅಭ್ಯುದಯಕ್ಕೆ, ಉನ್ನತಿಗೆ ಆತ್ಮ ಕಲ್ಯಾಣಕ್ಕೆ, ಸುಖ ಶಾಂತಿಗೆ ಸಹಕಾರಿಯಾದ ಸಾಧನವೇ ಸರ್ವೋದಯ ತೀರ್ಥ. ಇದೇ ಧರ್ಮ ತೀರ್ಥ, ಈ ತೀರ್ಥವನ್ನು ಜಗತ್ತಿನಲ್ಲಿ ಹರಿಸಿದವರು ತೀರ್ಥಾಧೀಶರು.

ಅನಾದಿಯಿಂದಲೂ ಈ ಧರ್ಮತೀರ್ಥವು ಜಗತ್ತಿನಲ್ಲಿ ಹರಿಯುತ್ತಾ ಬಂದಿದೆ. ಯಾರು ಈ ಧರ್ಮ ತೀರ್ಥದಲ್ಲಿ ಸ್ನಾನ ಮಾಡುತ್ತಾರೋ ಪಾನ ಮಾಡುತ್ತಾರೆ. ಅಂದರೆ ಈ ಧರ್ಮವನ್ನು ನಂಬಿ ತಿಳಿದು. ಪಾಲಿಸುತ್ತಾರೋ ಅವರು ಪವಿತ್ರರಾಗುತ್ತಾರೆ. ವಿಕಾಸ ಹೊಂದುತ್ತಾರೆ. ಪಾವನರಾಗುತ್ತಾರೆ. ಆತ್ಮೋನ್ನತಿ ಹೊಂದುತ್ತಾರೆ.

ಬಟ್ಟೆಯನ್ನು, ಮೈಕೈಗಳನ್ನು ತೊಳೆಯಲು, ಬಾಯಾರಿಕೆಯನ್ನು ನೀಗಲು ನೀರು ಹೇಗೆ ಅವಶ್ಯಕವೋ ಹಾಗೇ ಆತ್ಮನ ಕರ್ಮಬಂಧನವೆಂಬ ಕೊಳೆಯನ್ನು ಕಳೆಯಲು, ಅಜ್ಞಾನವೆಂಬ ಬಾಯಾರಿಕೆಯನ್ನು ನೀಗಲು, ಮಿಥ್ಯೆ-ದುಃಖವನ್ನು ತೊಲಗಿಸಲು, ಆತ್ಮೋನ್ನತಿ ಹೊಂದಲು, ಅಂತರ್ಯದ ಕೊಳೆಯನ್ನು ತೊಳೆಯಲು ತೀರ್ಥಾಧೀಶರಾದ ಜಿನೇಂದ್ರರು ಹೇಳಿದ ಸರ್ವೋದಯ ತೀರ್ಥವೇ ಬೇಕು. ಪತಿತನನ್ನು ಪಾವನ ಮಾಡುವ, ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮಾಡುವ, ಮಿಥ್ಯಾ ದೃಷ್ಟಿಗಳನ್ನು ಸಮ್ಯಗ್ದೃಷ್ಟಿಗಳನ್ನಾಗಿ ಮಾಡುವ, ಅಶಾಂತಿ ದುಃಖ, ದೀನತೆ, ಹೀನತೆಗಳನ್ನು ದೂರ ಮಾಡುವ, ನೀಚನನ್ನು ಉಚ್ಚನನ್ನಾಗಿಸುವ, ಮಾನವನು ಮುಕ್ತನಾಗುವ, ಅಧೋಗತಿಯಿಂದ ಸದ್ಗತಿಗೆ ಕೊಂಡೊಯ್ಯುವ ಸಾಧನವೇ ಸರ್ವೋದಯ ಧರ್ಮತೀರ್ಥ.

ಸರ್ವೋದಯ ತೀರ್ಥದಲ್ಲಿ ಜೀವಿಗಳನ್ನು ಪರಿಶುದ್ಧ ಗೊಳಿಸುವಂತಹ, ಅವುಗಳ ಅಂತರಂಗದಲ್ಲಿ ಉತ್ತಮತೆಯನ್ನು, ಪರಿಶುದ್ಧತೆಯನ್ನು ಮಾಡುವ ಏಳಿಗೆಯನ್ನು, ಉನ್ನತಿಯನ್ನು ಉಂಟುಮಾಡುವ, ಮಾನವನು ಮಾನವೀಯತೆಯ ಗುಣಗಳನ್ನು ಹೊಂದಿ ತನ್ನ ಏಳಿಗೆ ಪಥದಲ್ಲಿ ಸಾಗುವ ಸಾಧನೋಪಾಯವನ್ನು ತೀರ್ಥಾಧೀಶರು ಸಾರಿದ್ದಾರೆ. ಇದೇ ಧರ್ಮತೀರ್ಥ, ಇದು ಜೀವಿಗಳನ್ನು ಉದ್ಧಾರ ಮಾಡುತ್ತದೆ.

ಈ ಧರ್ಮದ ಬಗ್ಗೆ ಸ್ವಾಮಿ ಸಮಂತ ಭದ್ರಾಚಾರ್ಯರು ಹೀಗೆ ಹೇಳಿದ್ದಾರೆ.

*ದೇಶಯಾಮಿ ಸಮೀಚೀನಂ*
*ಧರ್ಮಂ ಕರ್ಮ ನಿಬರ್ಹಣಂ*
*ಸಂಸಾರ ದುಃಖಿತಃ ಸತ್ವಾನ್*
*ಯೋಧರತ್ಯುತ್ತಮೇಸುಖೆ*

ಸಂಸಾರೀ ಜೀವಿಗಳು ಜನ್ಮ, ಜರಾ, ಮರಣಗಳನ್ನು ಎತ್ತುತ್ತಾ ದುಃಖಿಗಳಾಗಿ ಸುತ್ತುತ್ತಿರುವುದಕ್ಕೆ ಕಾರಣವಾದ ಕರ್ಮ ಬಂಧನವನ್ನು ಬಿಡಿಸಿ, ಈ ಸಾಂಸಾರಿಕ ದುಃಖವನ್ನು ಕಳೆದು ಉತ್ತಮವಾದ ಸುಖ ಶಾಂತಿ ನೆಮ್ಮದಿಗಳನ್ನು ನೀಡುವ ಸಾಧನವಾದ ಧರ್ಮವನ್ನು ಹೇಳುತ್ತೇನೆ ಎಂದಿದ್ದಾರೆ.

ಆದ್ದರಿಂದ ಜೀವಿಗಳ ಕರ್ಮ ನಿವಾರಣೆ ಸಂಸಾರದ ದುಃಖದ ನಿವಾರಣೆಗೆ ಧರ್ಮವೇ ಸಾಧನ ಎಂದಾಯಿತು. ಇದು ಪವಿತ್ರವಾದ ತೀರ್ಥದಂತೆ ಇದೆ.

ಸಂಸಾರವೆಂದರೆ ಗತಿ ಗತಿಗಳಲ್ಲಿ ಜೀವಿಗಳು ಹುಟ್ಟು ಸಾವುಗಳನ್ನು ಹೊಂದುತ್ತಾ ಸುತ್ತುವುದು ಎಂದರ್ಥ. ಹೀಗೆ ಜಗತ್ತಿನಲ್ಲಿ ಪರದಾಡುತ್ತಿರುವ ಜೀವದ ಸ್ಥಿತಿಯೇ ಸಂಸಾರ. (ದೇವಗತಿ , ಮನುಷ್ಯಗತಿ, ತಿರ್ಯಂಚಗತಿ, ನರಕಗತಿ)

ಈ ಸಂಸಾರದಲ್ಲಿ ಜೀವಿಗಳು ಸುಖವನ್ನು ಅಪೇಕ್ಷಿಸುತ್ತಿವೆ. ಈಗ ಈ ಸಂಸಾರದಲ್ಲಿ ಅನುಭವಿಸುವ ಸುಖ ಲೌಕೀಕವಾದುದು. ಕರ್ಮಾಧೀನವಾದುದು. ಇಂದ್ರಿಯಾದೀನವಾದುದು. ಪರಪದಾರ್ಥಗಳ ಅಧೀನವಾದುದು. ಕ್ಷಣಿಕವಾದುದು. ಪರತಂತ್ರವಾದುದು. ಸದಾ ಅತೃಪ್ತಿಯಿಂದ ಕೂಡಿದುದು ಇಂತಹ ಜೀವಿಗಳ ಪರದಾಟವನ್ನು ಅಲೆದಾಟವನ್ನು ದುಃಖವನ್ನು ತಪ್ಪಿಸಿ ನಿರಂತರವಾದ ಆಧ್ಯಾತ್ಮಿಕವಾದ, ಪಾರ ಲೌಕೀಕವಾದ, ಸದಾ ತೃಪ್ತಿ ದಾಯಕವಾದ, ಸ್ವಾತಂತ್ರವಾದ, ಸ್ವಾಧೀನವಾದ ಸುಖ, ಶಾಂತಿ, ನೆಮ್ಮದಿಯನ್ನು ದೊರಕಿಸಿ ಕೊಡುವುದೇ ಧರ್ಮ. ಇಂತಹ ಧರ್ಮ ಮಾರ್ಗವನ್ನು ತಿಳಿಸಿದವರು ತೀರ್ಥಾಧೀಶರು. ಇವರು ಬೋಧಿಸಿರುವ ಧರ್ಮವು ತೀರ್ಥ ರೂಪವಾಗಿ ಹರಡಿದೆ, ಹರಿಯುತ್ತಾ ಇದೆ.

"ನೀನೂ ಬದುಕು, ಇತರರೂ ಬದುಕಲು ಬಿಡು." "ಪರಸ್ಪರ ಸಹಕಾರ ಭಾವನೆಯಿಂದ ಬಾಳು." ಯಾರಿಗೂ ಮಾನಸಿಕವಾದ, ವಾಚಕವಾದ, ದೈಹಿಕವಾದ ನೋವು ಹಿಂಸೆ, ಕಷ್ಟಗಳನ್ನು ಕೊಡದೇ ಅಹಿಂಸೆಯನ್ನು ಪಾಲಿಸು, ಸುಳ್ಳು ಹೇಳಬೇಡ, ಇತರರಿಗೆ ಹಾನಿಯಾಗುವ ಅಪ್ರಿಯವಾದ ಸತ್ಯವನ್ನೂ ಹೇಳಬೇಡ. ಕಳ್ಳತನ ಮಾಡಬೇಡ, ತನ್ನ ಶೀಲವನ್ನು ಕಳೆದುಕೊಳ್ಳಬೇಡ, ಪರಸ್ತ್ರೀ ಪುರುಷರನ್ನು ಅಣ್ಣ ತಂಗಿಯಂತೆ ಕಾಣು. ಪರಿಗ್ರಹಿಯಾಗಿರಬೇಡ. ಪರಿಗ್ರಹದ ಪರಿಮಾಣ, ಅಥವಾ ಅಪರಿಗ್ರಹಿಯಾಗು. ಒರಟು, ಕೋಪ, ತಾಪ, ಸಿಟ್ಟು, ಸಿಡುಕು, ಗರ್ವ, ಮದ, ಅಹಂಕಾರ ಮಾಡಬೇಡ. ಮಾಯಾಚಾರ, ಮೋಸ, ಕಪಟ, ವಂಚನೆ ಮಾಡಬೇಡ. ಲೋಭಿಯಾಗಬೇಡ, ದುರಾಸೆಪಡಬೇಡ ಎಂಬ ಉತ್ತಮವಾದ ಧರ್ಮದ ಬೋಧನೆಯನ್ನು ಮಾಡಿದರು.



ತನಗೆ ಹೇಗೆ ಬದುಕಬೇಕೆಂಬ ಆಸೆ ಇದೆಯೋ ಅದು ಇತರರಿಗೂ ಇದೆ. ಅದು ಆ ಜನ್ಮಸಿದ್ಧವಾದ ಹಕ್ಕು. ಅದನ್ನು ಕಿತ್ತುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಇದನ್ನು ಪರಸ್ಪರ ಅರಿತು ಬಾಳುವುದೇ ಅಹಿಂಸೆ. ಈ ಅಹಿಂಸೆಯನ್ನು ತಮ್ಮ ತಮ್ಮ ಯೋಗ್ಯತೆ, ಅರ್ಹತೆ, ಶಕ್ತಿ, ಅವಕಾಶಗಳಿಗೆ ಅನುಸಾರವಾಗಿ ಪಾಲಿಸಬಹುದು. ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ನೀತಿಯನ್ನು ಪಾಲಿಸಬಹುದು. ಇವುಗಳೊಂದಿಗೆ ದಯಾಭಾವನೆ, ಕ್ಷಮಾಗುಣ, ಸರಳ-ಸಭ್ಯ ಸಾತ್ವೀಕ ಗುಣಗಳು ಆತ್ಮವಿಕಾಸಕ್ಕೆ ಮುಖ್ಯವಾದವುಗಳು. ಇವು ಆತ್ಮನ ವಿಕಾರವನ್ನೂ, ಕರ್ಮಮಲವನ್ನೂ, ಅಜ್ಞಾನವನ್ನೂ, ಮಿಥ್ಯಾತ್ವವನ್ನೂ, ದುಃಖದುಮ್ಮಾನವನ್ನೂ, ಅತೃಪ್ತಿಯನ್ನೂ ಕಳೆಯುತ್ತವೆ.

ಹಿತ, ಮಿತ, ಸರಳ, ಸತ್ಯ, ಸುಂದರವಾದ ಮಾತಿನಿಂದ ಆತ್ಮ ವಿಕಾಸ ವಾಗುತ್ತದೆ. ಸಭ್ಯತೆ ಉನ್ನತಿಕೆಯಾಗುತ್ತದೆ. ಇದೇ ಸರ್ವರ ವಿಕಾಸದ, ಜ್ಞಾನೋದಯದ ಸಾಧನವಾದ ಸರ್ವೋದಯದ ತೀರ್ಥವಾಗಿದೆ.

ಈ ಧರ್ಮಾವಲಂಬನೆಯಿಂದ, ಈ ಧರ್ಮದ ಅಭಿರುಚಿಯಿಂದ, ನಂಬಿಕೆ ಯಿಂದ, ಶ್ರದ್ಧೆಯಿಂದ ಆತ್ಮನು ಪವಿತ್ರನಾಗಿ ಪಾವನನಾಗಿ ಪರಮಾತ್ಮನಾಗುತ್ತಾನೆ. ಪೂಜ್ಯನಾಗುತ್ತಾನೆ.

ತೀರ್ಥಾಧೀಶರು ಇಂತಹ ಧರ್ಮಮಾರ್ಗದಲ್ಲಿ ಸಾಗಿ, ತಾವು ಸ್ವತಃ ಪಾವನರಾಗಿ, ಪರಿಶುದ್ಧರಾಗಿ ಕರ್ಮಕಲಂಕದಿಂದ ಮುಕ್ತರಾಗಿ ಸಕಲವನ್ನು ತಿಳಿಯುವ ಸರ್ವಜ್ಞರಾದರು, ಉನ್ನತಾತ್ಮರಾದರು, ವೀತರಾಗಿಗಳಾದರು, ಅನಂತ ಸುಖ ಶಾಂತಿಯನ್ನು ಪಡೆದರು. ಇಂತಹ ಸುಖ ಶಾಂತಿ, ಜ್ಞಾನ, ಆನಂದಗಳು ಇತರರಿಗೂ ದೊರೆಯಲಿ ಎಂದು ತಾವು ಕಂಡ ಸತ್ಯವನ್ನು ಬೋಧಿಸಿದರು. ಇದು ಪತಿತನನ್ನು ಪಾವನಗೊಳಿಸುವ ಧರ್ಮತೀರ್ಥವಾಯಿತು.

ಈ ಧರ್ಮ ತೀರ್ಥದ ಮಹತ್ವದ ಬಗ್ಗೆ ಸ್ವಾಮಿ ಸಮಂತ ಭದ್ರಾಚಾರ್ಯರು ತಮ್ಮ ಯುಕ್ತ್ಯಾನು ಶಾಸನವೆಂಬ ಗ್ರಂಥದಲ್ಲಿ ಹೇಳಿದ್ದಾರೆ.

*ಸರ್ವಾಂತವ ತದ್ಗುಣ ಮುಚ್ಚೆ ಕಲ್ಪಂ*
*ಸರ್ವಾಂತ ಶೂನ್ಯಾಚ ಮಿಥೋನ ಪೇಕ್ಷಂ*
*ಸರ್ವಾಪದಾಮಂತ ಕರಂ ನಿರಂತರಂ*
*ಸರ್ವೋದಯಾ ತೀರ್ಥಮಿದಂ ತಥೈವ ॥*

ಅಂದರೆ ಎಲ್ಲರ ಉದಯವೇ, ಏಳಿಗೆಯೇ ಸರ್ವೋದಯವಾಗಿದೆ. ಅದರಲ್ಲಿ ಎಲ್ಲರ ಉನ್ನತಿಗೆ ಸಮಾನ ಅವಕಾಶವಿದೆ. ಪೂರ್ಣ ಅಧಿಕಾರವಿದೆ. ಹೀಗೆ ಸರ್ವರ ಉನ್ನತಿಗೆ ಕಾರಣವಾದ ಉತ್ತಮ ಧರ್ಮವೇ ಸರ್ವೋದಯ ತೀರ್ಥವಾಗಿದೆ.

ಸಮಾನತೆಯೇ ಸರ್ವೋದಯದ ಮೂಲವಾಗಿದೆ. ಇಲ್ಲಿ ಊಚ-ನೀಚ, ಬಡವ-ಬಲ್ಲಿದ, ಮೇಲು-ಕೀಳು, ಪಂಡಿತ-ಪಾಮರ, ರಾಜ-ರಂಕರೆಂಬ ಭೇದವಿಲ್ಲ. ಜೀವಿಗಳೆಲ್ಲರೂ ತನ್ನ ವಿಕಾಸದ ಕಡೆಗೆ, ಉನ್ನತಿಯ ಕಡೆಗೆ, ಸುಖದ ಕಡೆಗೆ ಸಾಗಲು ಅಧಿಕಾರ ಉಂಟು. ಆತ್ಮ ಆತ್ಮರಲ್ಲಿ ಯಾವ ಭೇದವನ್ನು ಎಣಿಸದೇ ಸರ್ವರಿಗೂ ಸಮಾನ ಅವಕಾಶವನ್ನು ಕೊಟ್ಟು ಉನ್ನತಿಯ ಕಡೆಗೆ ಸಾಗಿಸುವ ಸಾಧನವೇ ಜಿನೇಂದ್ರರು ಬೋಧಿಸುವ ಸರ್ವೋದಯ ತೀರ್ಥವಾಗಿದೆ.

ಶ್ರೀ ಜಿನ ಸೇನಾಚಾರ್ಯರು ಮಹಾಪುರಾಣದಲ್ಲಿ "ಮನುಷ್ಯ ಜಾತರೇ ದೈವ" ಎಂದೂ ಪಂಪ ಕವಿಯು "ಮಾನಕುಲವೆಲ್ಲವೊಂದೇ ವಲಂ" ಎಂದೂ ಹೇಳಿದ್ದಾರೆ.

ಜ್ಞಾನ ದರ್ಶನಮಯವಾದ ಧರ್ಮವೇ ಪವಿತ್ರವಾದ ತೀರ್ಥವಾಗಿದೆ. ಇದು ಆತ್ಮಸಾಕ್ಷಾತ್ಕಾರದ ಸಾಧನವಾಗಿದೆ. ಇಲ್ಲಿ ಜಾತಿ-ಮತ-ದೇಶ-ಭಾಷೆ- ವರ್ಣ-ಪಂಥಗಳ ಭೇದವಿಲ್ಲ.

ಜಿನೇಂದ್ರರು ಹೇಳಿದ ಧರ್ಮವು ಸರ್ವರಿಗೂ ಹಿತವೂ, ಸುಖಶಾಂತಿ ದಾಯಕವೂ ಆದುದು. "ಧರ್ಮಃ ಸರ್ವ ಸಖಾಕರೋ" ಎಂಬಂತೇ ಯಾವ ಭೇದವನ್ನೂ ಎನಿಸಿದೆ ಜೀವ ಮಾತ್ರದವರಿಗೆಲ್ಲ ಈ ಧರ್ಮವು ಸುಖವನ್ನು ಕೊಡುವುದಾಗಿದೆ. ಹಾಗೆಯೇ ಜೀವ ಹಿತವನ್ನು ಬಯಸುತ್ತಿದೆ. ಇದೇ ಜಿನರು ಹೇಳಿದ ಧರ್ಮ. ಹೀಗಾಗಿ ಜೈನ ಧರ್ಮವು ಸರ್ವೋದಯ ತೀರ್ಥವಾಗಿದೆ.

ಬಾಯಾರಿದವನಿಗೆ ತಣ್ಣನೆಯ ನೀರು ದೊರೆತಂತೆ, ಬಿಸಿಲಿನಲ್ಲಿ ಸುತ್ತಿ ಬಳಲಿದವನಿಗೆ ತಂಪಾದ ಮರದ ನೆರಳು ದೊರೆತಂತೆ. ಸಮುದ್ರದಲ್ಲಿ ಮುಳುಗೇಳುತ್ತಿರುವವನಿಗೆ ದಡ ಸೇರಲು ಬೇಕಾದ ಹಡಗು ದೊರೆತಂತೆ, ಭವ ದುಃಖದಲ್ಲಿ ಬಳಲಿ ಬೆಂಡಾದ, ಕರ್ಮ ಬಂಧನದಲ್ಲಿ ಸಿಕ್ಕಿರುವ, ದುಃಖದಿಂದ ಕಂಗೆಟ್ಟಿರುವ, ಜ್ಞಾನಪಿಪಾಸುವಾಗಿರುವ ಜನ್ಮ, ಮರಣಗಳ ಬೇಗೆಯಲ್ಲಿ ಬೆಂದಿರುವ ಜೀವಿಗೇ ಜಿನೇಂದ್ರರ ದರ್ಶನ, ಜಿನವಾಣಿಯ ಬೋಧೆ, ಜಿನಗುರುಗಳ ಹಿತೋಪದೇಶ, ಮಾರ್ಗದರ್ಶನಗಳು ದೊರೆತರೆ ಅವೆಲ್ಲಾ ನೆಮ್ಮದಿಯನ್ನು ಹೊಂದುತ್ತವೆ. ಆದ್ದರಿಂದ ಜೀವಿಗಳೆಲ್ಲರ ಆತ್ಮೋನ್ನತಿಗೆ ಸಹಕಾರಿಯಾದ, ಸರ್ವೋತ್ತಮವಾದ ಸಾಧನವೆಂದರೆ ಸರ್ವೋದಯ ತೀರ್ಥವಾಗಿದೆ.



ಇಂತಹ ಧರ್ಮವನ್ನು ನಂಬಿ ತಿಳಿದು ಆಚರಿಸಿ ಆತ್ಮ ಕಲ್ಯಾಣವನ್ನು ಹೊಂದಲು ಸರ್ವರಿಗೂ ಅವಕಾಶ ಉಂಟು.

ಧರ್ಮವೆಂದರೆ ವಸ್ತುವಿನ ಸ್ಥಿತಿ, ಅಹಿಂಸೆ, ದಯೆ, ಕ್ಷಮೆ, ಸಮ್ಯಗ್ದರ್ಶನ ಜ್ಞಾನಚಾರಿತ್ರ, ಸುಖಶಾಂತಿಯ ಸಾಧನ ಮುಂತಾದವುಗಳಾಗಿವೆ.

ಇದನ್ನು ಜಿತೇಂದ್ರಿಯರೂ, ಜಿತಮೋಹರೂ, ಜಿತಕರ್ಮರೂ, ಜೀವ ದಯಾಪರರೂ, ಜೀವ ಹಿತಕಾರಿಗಳೂ ಆದ ಜಿನೇಂದ್ರರು ತಿಳಿಸಿದ್ದಾರೆ.

ದಯಾ ಮೂಲೋಭವೇಧರ್ಮೋ
ದಯಾಪ್ರಾಣಾನು ಕಂಪನಂ ।
ದಯಾಯಾ ಪರಿರಕ್ಷಾರ್ಥಂ
ಗುಣಾ ಶೇಷಾ ಪ್ರಕೀರ್ತಿತಾಂ ॥

ಅಂದರೆ ದಯೆಯೇ ಧರ್ಮದ ಮೂಲ ದಯೆ ಎಂದರೆ ಪ್ರಾಣಾನುಕಂಪನ, ಇಂತಹ ದಯೆಯನ್ನು ರಕ್ಷಿಸಿಕೊಳ್ಳಲು ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಾದಿ ಗುಣಗಳನ್ನು ಪಾಲಿಸಬೇಕು.

ಇಲ್ಲಿ ದಯೆ ಎಂದರೆ ಪ್ರಾಣಾನುಕಂಪನ ಅಂದರೆ ಅಹಿಂಸೆ. ಅಹಿಂಸೆ ಧರ್ಮದ ಮೂಲವಾಗಿದೆ. ಅಹಿಂಸೆಯು ಸರ್ವ ಜೀವಿಗಳ ಮೈತ್ರಿಯನ್ನೂ, ಬಂಧುತ್ವವನ್ನೂ ಉಂಟುಮಾಡುತ್ತದೆ. ಪರಸ್ಪರ ಭೇದಭಾವವನ್ನು ತೊಲಗಿಸಿ ಒಂದು ಗೂಡಿಸುತ್ತದೆ.

ಈ ಧರ್ಮಾಚರಣೆಯು ಬಾಯಲ್ಲಿ ಹೇಳುವಂತಹುದಲ್ಲ. ಕಾರ್ಯದಲ್ಲಿ ಅನುಷ್ಠಾನ ಗೊಳಿಸುವಂತಹುದು. ಇದರಿಂದ ಸರ್ವ ಸಮಾನತೆ ಸರ್ವರ ಏಳಿಗೆ ಆಗುತ್ತದೆ. ಇದನ್ನು ತಿಳಿಸಿದ ಪುರುಷೋತ್ತಮನಾದ, ಮಹಾನ್ ಕರುಣಾ ಶಾಲಿ, ಅಹಿಂಸಾ ಮೂರ್ತಿ, ಸರ್ವರ ಆತ್ಮ ಬಂಧು, ಜಿನೇಂದ್ರರು ಸರ್ವ ಮಾನ್ಯರಾಗಿದ್ದಾರೆ. ಇವರ ವಾಣಿಯೇ ಸರ್ವೋದಯ ತೀರ್ಥ. ಇದು ಉತ್ಕೃಷ್ಟವಾದುದೂ, ಮಂಗಲಕರವಾದುದೂ ಆಗಿದೆ. ಹೇಗೆಂದರೆ :

ಧಮ್ಮೋ ಮಂಗಲ ಮುಕ್ಕಿಟ್ಠಂ
ಅಹಿಂಸಾ ಸಂಜಮೋತವೋ
ದೇವಾವಿತಂ ನಮಸ್ಸಂತಿ
ಜಸ್ಸ ಧಮ್ಮೋ ಸಯಾಮಣೋ

ಅಂದರೆ ಅಹಿಂಸೆ, ಸಂಯಮ, ತಪಗಳಿಂದ ಕೂಡಿದುದೇ ಧರ್ಮ. ಅದು ಮಂಗಲಕರವೂ, ಉತ್ತಮವೂ, ಉತ್ಕೃಷ್ಟವೂ, ಶ್ರೇಷ್ಠವೂ ಆಗಿದೆ. ಇಂತಹ

ಪವಿತ್ರವಾದ ಧರ್ಮವನ್ನು ಪಾಲಿಸುವವನಿಗೆ ದೇವತೆಗಳೂ ನಮಸ್ಕರಿಸುತ್ತಾರೆ.

ಅಂದ ಮೇಲೆ ಇಂತಹ ಧರ್ಮ ಸಾಧನೆಯಿಂದ ಎಂತಹವನಾದರೂ ಉನ್ನತಿಯನ್ನು ಹೊಂದಿ ಪೂಜ್ಯನಾಗಬಹುದು.

ಇಂತಹ ಜಿನವಾಣಿ ಲೋಕ ಕಲ್ಯಾಣಕ್ಕಾಗಿ ಸರ್ವರ ಏಳಿಗೆಗಾಗಿ, ಎಲ್ಲರ ಉದ್ಧಾರಕ್ಕಾಗಿ ಇದೆ.

ಜಿನೇಂದ್ರರ ಧರ್ಮ ಸಭೆಯಲ್ಲಿ ಎಲ್ಲಾ ವರ್ಗದ ಜನರಿಗೂ, ಎಲ್ಲಾ ಜೀವಿಗಳಿಗೂ, ಪಶು-ಪಕ್ಷಿ ಮೊದಲಾದವರಿಗೂ ಅವಕಾಶವಿತ್ತು, ಅವೆಲ್ಲಾ ಭಗವಾನರು ಹರಿಸಿದ ಸರ್ವೋದಯ ಧರ್ಮತೀರ್ಥದಲ್ಲಿ ಮಿಂದು, ಪಾನ ಮಾಡಿ ಪಾವನರಾದರು.

ಈ ತೀರ್ಥಾಧೀಶರು ಹೇಳಿದ ತತ್ತ್ವ ಸಿದ್ಧಾಂತಗಳು ಗ್ರಂಥಗಳಲ್ಲಿ ಅಡಕವಾಗಿದೆ. ಅವರು ತೋರಿದ ಮಾರ್ಗದಲ್ಲಿ ಮುನಿಗಳೂ, ತ್ಯಾಗಿಗಳೂ, ಶ್ರಾವಕರೂ, ನಂಬಿ, ತಿಳಿದು ನಡೆಯುತ್ತಾ ಬಂದಿದ್ದಾರೆ. ಈ ಧರ್ಮ ತೀರ್ಥವು ಎಂದೂ ಬತ್ತಿ ಹೋಗಿಲ್ಲ. ಜೀವ ನದಿಯಂತೆ ಸದಾಕಾಲ ಜೀವಿಗಳ ಆತ್ಮೋನ್ನತಿಯನ್ನು ಮಾಡುತ್ತಾ ಹರಿಯುತ್ತಿದೆ.

ಮುನಿಗಳ, ಜ್ಞಾನಿಗಳ, ಉಪದೇಶ ಕೇಳುವುದು. ಅವರ ಸೇವೆ, ಸಾನಿಧ್ಯವನ್ನು ಹೊಂದುವುದು, ಶಾಸ್ತ್ರ ಸ್ವಾಧ್ಯಾಯ, ಮನನ, ಚಿಂತನ, ಧ್ಯಾನ ಧ್ಯಾಸ, ಅನುಭವಗಳಿಂದ ಜಿನದೇವರ ದರ್ಶನ, ಪೂಜೆ, ವಂದನೆ, ಸ್ತೋತ್ರ, ಸ್ತವನದಿಂದ, ಅವರು ಬೋಧಿಸಿದ ಧರ್ಮದ ತತ್ತ್ವಗಳ ವ್ರತನೇಮ ನಿಯಮಗಳ ಪರಿಪಾಲನೆಯಿಂದ ಅನಂತಾನಂತ ಜೀವಿಗಳು ಆತ್ಮಕಲ್ಯಾಣವನ್ನು ಮಾಡಿಕೊಂಡ ಉದಾಹರಣೆಗಳು ಪುರಾಣ ಪುಣ್ಯಕಥೆಗಳಲ್ಲಿ ದೊರೆಯುತ್ತವೆ. ಭಗವಾನರು ಮುಖ್ಯವಾಗಿ, ಅಹಿಂಸೆ-ಅಪರಿಗ್ರಹ ಅನೇಕಾಂತ ಸಿದ್ಧಾಂತವನ್ನು ನಿರೂಪಿಸಿ ಜೀವಿಗಳ ಕಲ್ಯಾಣಕ್ಕೆ ಮಹದುಪಕಾರ ಮಾಡಿದ್ದಾರೆ.

ಜಿನಧರ್ಮವು ಯಾವಾಗಲೂ ಯಾರನ್ನೂ ಬಲವಂತವಾಗಿ ಮತಾಂತರ ಮಾಡಿಲ್ಲ. ಕಾಡಿಸಿ ಪೀಡಿಸಿ, ಆಸೆ ಆಕಾಂಕ್ಷೆಗಳ ಆಮಿಷವನ್ನು ತೋರಿಸಿಲ್ಲ. ಜೀವಿಗಳು ತಾವಾಗಿಯೇ ಇಲ್ಲಿರುವ ಆದರ್ಶವಾದ, ಆತ್ಮಹಿತಕಾರಿಯಾದ, ಶ್ರೇಷ್ಠವಾದ ಸಿದ್ಧಾಂತ-ಮೌಲ್ಯಗಳಿಂದ, ಸರಳವಾದ ಉಪದೇಶದಿಂದ ಪ್ರಭಾವಿತರಾಗಿ ಧರ್ಮವನ್ನು ಶ್ರದ್ಧೆಯಿಂದ ನಂಬಿ, ತಿಳಿದು ಪಾಲಿಸಿ ಏಳಿಗೆ ಹೊಂದಿದ್ದಾರೆ.

ಜೀವನು ಜೀವನ್ಮುಕ್ತನಾಗಲು ಬೇಕಾದ ಮಾರ್ಗವು ಇಲ್ಲಿ ದೊರೆಯುತ್ತದೆ.



ಅನಾದಿಯಿಂದ ಜೀವನೊಂದಿಗೆ ಅಂಟಿಬಂದಿರುವ ಕರ್ಮದ ಕೊಳೆಯನ್ನು ತೊಳೆಯುವಂತಹ ಧರ್ಮತೀರ್ಥ ಇದಾಗಿದೆ.

ತಾಯಿಯ ಮಡಿಲಿನಲ್ಲಿ ಮಗುವು ಎಷ್ಟು ಸುಖವಾಗಿ ಮಲಗಿ ನೆಮ್ಮದಿಯನ್ನು ಹೊಂದುವುದೋ ಅಂತೆಯೇ ಜೀವಿಗಳಿಗೆ ಈ ಧರ್ಮದಲ್ಲಿ ಆಶ್ರಯ ದೊರೆಯುತ್ತದೆ. ಧರ್ಮವು ತರತಿ, ಧರತಿ, ಎಂಬ ಎರಡು ಸಾಧನಗಳಿಂದ ಕೂಡಿದೆ, ಒಂದನೆಯದು ಕರ್ಮಸಾಗರದಿಂದ, ಕಷ್ಟ, ಕಾರ್ಪಣ್ಯಗಳಿಂದ, ದುಃಖ ದುಮ್ಮಾನದಿಂದ ಭವ ಬಂಧನದಿಂದ ಬಿಡಿಸುತ್ತದೆ. ಇನ್ನೊಂದು ಉತ್ತಮವಾದ ಸುಖದಲ್ಲಿ ಇರಿಸುತ್ತದೆ. ಜೀವಿಗೆ ಇದಕ್ಕಿಂತ ಇನ್ನೇನು ಬೇಕು?

ಇದನ್ನೇ 'ಕ್ಷೇಮಂ ಸರ್ವ ಪ್ರಜಾನಾಂ' ಎಂಬ ಘೋಷಣೆಯು ಸರ್ವಹಿತಕಾರಿ ಯಾದುದು. ಇಂತಹ ಧರ್ಮವನ್ನು ಯಾರು ತಮ್ಮದನ್ನಾಗಿಸಿಕೊಂಡು ರಕ್ಷಿಸುತ್ತಾರೋ ಅಂತಹವರನ್ನು ಧರ್ಮವು ಕೈಬಿಡದೆ ರಕ್ಷಿಸುತ್ತದೆ.

ಆದರಿಂದ 'ಸರ್ವಮಂಗಲ ಮಾಂಗಲ್ಯ, ಸರ್ವ ಕಲ್ಯಾಣ ಕಾರಕಂ'' ಎನ್ನಿಸಿದೆ ಈ ಜಿನಧರ್ಮ.

ಇಂತಹ ವಿಶಾಲವಾದ ಧರ್ಮಗಳಿಂದ ಕೂಡಿದ ವಿಶ್ವಕಲ್ಯಾಣಕಾರಿಯಾದ ಸರ್ವೋಚ್ಚ ಉದ್ದೇಶ್ಯಗಳಿಂದ ಕೂಡಿದ ಅಹಿಂಸೆಯ ಬುನಾದಿಯನ್ನು ಹೊಂದಿರುವ ವಿಶಾಲದೃಷ್ಟಿಯಿಂದ ಕೂಡಿದ ಸರ್ವೋದಯ ತೀರ್ಥಕ್ಕೆ ಸಕಲರ, ಸರ್ವರ, ಎಲ್ಲರ, ಸರ್ವಜೀವಿಗಳ ಉದ್ಧಾರದ ಉದಾರ ಧ್ಯೇಯವಿದೆ.

ಇದನ್ನು ಓದಿರಿ :

ಸತ್ವೇಷು ಮೈತ್ರೀಂ ಗುಣಿಷುಪ್ರಮೋದಂ ।
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ।
ಮಾಧ್ಯಸ್ಥಭಾವಂ ವಿಪರೀತ ವೃತ್ತೌ ।
ಸದಾ ಮಮಾತ್ಮ ವಿದ ಧಾತು ದೇವಾ ॥

ಹೇ ಭಗವಾನ್! ಸಕಲ ಜೀವಿಗಳಲ್ಲೂ ನನ್ನ ಮೈತ್ರೀ, ಮಿತ್ರತ್ವವಿರಲಿ, ಗುಣಿಗಳೂ, ಗುರುಗಳೂ, ವಿದ್ವಾಂಸರು, ಸಜ್ಜನರೂ, ಹಿರಿಯರುಗಳಲ್ಲಿ ನಾನು ಅವರನ್ನು ಭಕ್ತಿ ಗೌರವಾದರದಿಂದ ವಿಧೇಯನಾಗಿರುವಂತೆಯೂ ಇರಲಿ, ಕಷ್ಟದಲ್ಲಿರುವ ಜೀವಿಗಳಿಗೆ ನನ್ನ ಕೈಲಾದ ಸಹಾಯ ಮಾಡುವಂತಹ ಕೃಪೆ, ಉದಾರತೆ, ಕರುಣಾಭಾವ ನನ್ನಲ್ಲಿ ಮೂಡಲಿ, ವಿಪರೀತ ವರ್ತನೆ, ವೃತ್ತಿಯುಳ್ಳವರಲ್ಲಿ ಮಾಧ್ಯಸ್ಥರೀತಿಯಲ್ಲಿ ವರ್ತಿಸುವಂತೆ ಆಗಲಿ ಎಂದು

ಧಾರ್ಮಿಕನಾದ ಜಿನಭಕ್ತನು ಭಗವಂತನಲ್ಲಿ ಪ್ರಾರ್ಥಿಸುತ್ತಾನೆ.

ಖಿಮ್ಮಾಮಿ ಸವ್ವ ಜೀವಾಣಾಂ
ಸವ್ವೇಜೀವಾ ಖಿಮಂತು ಮೇ
ಮೇತ್ತಿಮೇ ಸವ್ವ ಭೂದೇಸು
ವೇರಂ ಮಜ್ಝಂಣ ಕೇಣಚಿ ॥

ಅಂದರೆ ನಾನು ಎಲ್ಲರನ್ನೂ ಕ್ಷಮಿಸಿದ್ದೇನೆ. ನನ್ನನ್ನು ಎಲ್ಲರೂ ಕ್ಷಮಿಸಲೀ, ನನಗೆ ಎಲ್ಲರಲ್ಲಿಯೂ ಮೈತ್ರಿ ಇದೆ. ನಾನು ಯಾರನ್ನೂ ದ್ವೇಷಿಸುವುದಿಲ್ಲ.

ಎಂದಾಗ ಈ ಭಾವನೆ ಸರ್ವ ಹಿತಕಾರಿಯಾದುದು. ವಿಶ್ವ ಕುಟುಂಬದ ಸಂಕೇತವಾದುದು. ವಿಶ್ವಬಂಧುತ್ವ ಭಾವನೆಯು ಇಲ್ಲಿದೆ. ಇದೇ ಸರ್ವೋದಯ ಧರ್ಮತೀರ್ಥ.

ಎಷ್ಟೋ ಮಂದಿ ಪತಿತರು ಇದರ ಆಶ್ರಯದಿಂದ ಪಾವನರಾಗಿದ್ದಾರೆ.

ಪುರೂರವ, ಬಧಿರ, ದೀವರ ಮುಂತಾದ ದಲಿತರು ಈ ಧರ್ಮದ ಆಶ್ರಯ ಹೊಂದಿ ಪಾವನರಾಗಿದ್ದಾರೆ. ಕಪ್ಪೆ, ನಾಯಿ, ಮಾತಂಗ, ಹುಲಿ, ಸಿಂಹ, ನರಿ ಮುಂತಾದ ಪ್ರಾಣಿಗಳು ಈ ಧರ್ಮತೀರ್ಥದಲ್ಲಿ ಮಿಂದು, ಪಾನ ಮಾಡಿ ಪಾವನವಾಗಿವೆ. ಸದ್ಗತಿ ಹೊಂದಿವೆ.

ಇಲ್ಲಿ ಪ್ರತಿಯೋರ್ವರಿಗೂ ತನ್ನದೇ ಆದ ಜವಾಬ್ದಾರಿ ಇದೆ. ತಾನು ಹೊತ್ತ ಕರ್ಮದ ಫಲವಾದ ಸುಖ-ದುಃಖವನ್ನು ತಾನೇ ಹೊತ್ತು, ತಾನು ಮಾಡಿದ ಕರ್ಮಬಂಧನದ ಕಾರಣ ಗತಿ ಗತಿಗಳಲ್ಲಿ ಜನ್ಮ ಮರಣಗಳನ್ನು ಹೊಂದುತ್ತಾ ಸುತ್ತಾಡುತ್ತಾ ಈ ಜೀವನು ಅನಾದಿಯಿಂದ ದುಃಖಿಯಾಗಿದ್ದಾನೆ. ಹೀಗೆ ಸುಖ ದುಃಖವನ್ನು ನೀಡುತ್ತಿರುವ ವ್ಯಕ್ತಿ ಬೇರೊಂದಿಲ್ಲ. ಇದಕ್ಕೆ ತಾನೇ ಹೊಣೆ. 'ನಾ ಮಾಡಿದ ಕರ್ಮ ಬಲವಂತವಾದರೆ, ನೀ ಮಾಡುವುದೇನೋ ಹರಿಯೇ' ಎಂಬಂತೆ 'ಮಾಡಿದ್ದುಣ್ಣೋ ಮಹಾರಾಯ' ಎಂಬಂತೆ ತನ್ನ ಪ್ರಾರಬ್ಧ ಕರ್ಮಫಲವನ್ನು ತಾನೇ ಅನುಭವಿಸಬೇಕು. ಇದನ್ನು ತಿಳಿದು ಇದರಿಂದ ಬಿಡುಗಡೆಯ ಮಾರ್ಗದಲ್ಲಿ ತಾನೇ ನಡೆದು ಸಾಗಬೇಕು. ಆದರೂ ಕರ್ಮ ಮಾಡುವುದು ಅದರ ಫಲವನ್ನು ಅನುಭವಿಸುವುದಷ್ಟೆ ಅಲ್ಲ, ತನ್ನ ಪ್ರಯತ್ನದಿಂದ ಪುರುಷಾರ್ಥದಿಂದ ತಾನು ಹೊತ್ತ ಕರ್ಮವನ್ನು ಧರ್ಮಸಾಧನೆ ಯಿಂದ ಕಳೆದುಕೊಳ್ಳಬಹುದು ಎಂಬ ಬೋಧೆಯು ಈ ಧರ್ಮದಲ್ಲಿದೆ. ಹೀಗೆಂದು ತಿಳಿದು ತನ್ನ ಸುಖ ದುಃಖಗಳಿಗೆ, ಜನ್ಮ ಮರಣಗಳಿಗೆ ತಾನು ಹೊತ್ತ ಕರ್ಮವೇ ಕಾರಣವೆಂದು, ಹಿಗ್ಗದೆ-ಕುಗ್ಗದೆ ಧರ್ಮ ಜಾಗೃತನಾಗಿ



ಮುಂದೆ ದುಃಖಕ್ಕೆ ಕಾರಣವಾದ ಕರ್ಮದ ಕಾರ್ಯವನ್ನು ಮಾಡದೆ ಬಾಳಬೇಕೆಂಬ ಸದುಪದೇಶವನ್ನು ಈ ಸರ್ವೋದಯ ಧರ್ಮವು ಸಾರುತ್ತದೆ.

ಈ ಕಾರಣದಿಂದ ಸರ್ವವಿಧದಿಂದಲೂ ಜೈನಧರ್ಮವು ಸರ್ವೋದಯ ಧರ್ಮತೀರ್ಥವೇ ಆಗಿದೆ.

ಇದು ಅನೇಕಾಂತ ಸಿದ್ಧಾಂತದಿಂದ, ಸ್ಯಾದ್ವಾದ ನ್ಯಾಯದಿಂದ, ಸಮನ್ವಯ ದೃಷ್ಟಿಯಿಂದ ವಸ್ತುವಿನ, ತತ್ತ್ವದ, ದ್ರವ್ಯದ ಧರ್ಮದ ವಿಶ್ಲೇಷಣೆ, ವಿಮರ್ಶೆ, ನಿರ್ಣಯಗಳನ್ನು ಮಾಡಿ ಮತ-ಮತಾಂತರಗಳ-ವ್ಯಕ್ತಿ-ವ್ಯಕ್ತಿಗಳ ಧರ್ಮ-ಧರ್ಮಗಳ ವಾದ-ವಿವಾದ, ವಿರೋಧಗಳನ್ನು ತೊಡೆದು ಹಾಕಿ ನಿಜವಾದ ಜೀವನಮಾರ್ಗವನ್ನು, ವಸ್ತು ಸ್ವರೂಪವನ್ನೂ ನಿರೂಪಿಸುತ್ತದೆ. ಇದು ಯಾವುದೇ ಒಂದು ಪಂಥ, ಜಾತಿ, ವ್ಯಕ್ತಿ, ದೇಶಗಳಿಗೆ ಸೀಮಿತವಾಗಿರದೇ ವಿಶಾಲ ದೃಷ್ಟಿಯನ್ನು ಹೊಂದಿದೆ. ಇದು ಇಡೀ ಜೀವಕೋಟಿಯ ಉತ್ಥಾನದ ಮಾರ್ಗೋಪಾಯವನ್ನು ತಿಳಿಸಿದೆ.

'ಉಚ್ಚಾವಚ ಜನಪ್ರಾಃ ಸಮಯೋಽಯಂ ಜಿನೇಶಿನಮ್ ।' ಎಂಬಂತೆ ಜಿನಧರ್ಮವು ಉಚ್ಚ ನೀಚ ಭೇದಭಾವವಿಲ್ಲದೆ ಎಲ್ಲರಿಗೂ ಸಮಾನವಾದ ಆಶ್ರಯ ನೀಡಿದೆ.

ಇನ್ನೊಂದು ಕಡೆ ಹೇಳಿದ್ದಾರೆ.

'ಏಹು ಧಮ್ಮ ಜೋ ಆಯರ ಈ ಭಂಭಣು ಸದ್ದುವಿಕೋಇ'' ಅಂದರೆ ಧರ್ಮಪಾಲಕನು ಬ್ರಾಹ್ಮಣನಿರಲೀ ಶೂದ್ರನಿರಲೀ ಅವನೇ ಶ್ರಾವಕ, ಧಾರ್ಮಿಕ.

ಶ್ರಾವಕನೆಂದರೆ ಧರ್ಮದಲ್ಲಿ ಶ್ರದ್ಧೆಯುಳ್ಳವನೂ ವಿವೇಕಿಯೂ, ಕ್ರಿಯಾಶೀಲನೂ ಆದವನು ಇಲ್ಲಿ ಹೀಗೆ ಸರ್ವಜೀವೋನ್ನತಿಯ, ಸರ್ವರ ಏಳಿಗೆಯ, ಸರಳಸಾಧನೆಯೇ ಜಿನೇಂದ್ರೋಕ್ತವಾದ ಸರ್ವೋದಯ ಧರ್ಮತೀರ್ಥವಾಗಿದೆ.

ಜಿನೇಂದ್ರ ಭಗವಂತನಿಗೆ ಪೂಜಾಭಿಷೇಕವಾದ ಗಂಧೋದಕ ತೀರ್ಥಪ್ರಸಾದವು ನಿರ್ಮಲವಾದುದೂ, ನಿರ್ಮಲವನ್ನುಂಟು ಮಾಡುವುದೂ, ಪವಿತ್ರವೂ ಪಾಪನಾಶಕರವಾದುದೆಂದು ಭಕ್ತಿ ಗೌರವಗಳಿಂದ ಅದನ್ನು ಶಿರೋಧಾರ್ಯ ಮಾಡಿ ನಾವು ಪವಿತ್ರವಾದೆದು ಎಂದು ತಿಳಿದು ಭಕ್ತರು ಭಗವಂತನಿಗೆ ವಂದಿಸುತ್ತಾರೆ. ಹಾಗೆಯೇ ಈ ಸರ್ವೋದಯ ಧರ್ಮವೂ ನಿರ್ಮಲವೂ ನಿರ್ಮಲೀಕರಣವೂ, ಪವಿತ್ರವೂ, ಪಾಪನಾಶಕರವೂ, ಪುಣ್ಯ ದಾಯಕವೂ, ಸುಖಶಾಂತಿದಾಯಕವೂ, ಆತ್ಮೋನ್ನತಿಸಾಧನವೂ ಎಂದು ತಿಳಿದು ಇದನ್ನು ಶ್ರದ್ಧಾಭಕ್ತಿಯಿಂದ ನಂಬಿ, ತಿಳಿದು

ಪಾಲಿಸಬೇಕು. ಧರ್ಮವು ಧರ್ಮಾರಾಧಕನಿಗೆ ಸದಿಚ್ಛಾಫಲವನ್ನು ನೀಡುತ್ತದೆ. "ಧರ್ಮಂ ಧಾರ್ಮಿಕನಪ್ಪವಂಗೆ ಕೊಡುಗುಂ ನಿರ್ವಾಣ ಕಲ್ಯಾಣಮಂ." ಹೀಗೆ ಧರ್ಮವು ಧರ್ಮಾತ್ಮನಿಗೆ ಆತ್ಮಕಲ್ಯಾಣವನ್ನುಂಟುಮಾಡಿ ಚಿರ ಸೌಖ್ಯವನ್ನು ನೀಡುತ್ತದೆ, ಇದೇ ಸರ್ವೋದಯ ಧರ್ಮಪಾಲನೆಯ ಸತ್ಫಲ.

## 70. ನಾಲ್ಕು ಅನುಯೋಗಗಳು

ಕೇವಲ ಜ್ಞಾನವನ್ನು ಹೊಂದಿದ ಅರಹಂತರು ಸರ್ವವನ್ನೂ ಬಲ್ಲವರು. ಅವರು ಸರ್ವಜ್ಞರೂ ಹಿತೋಪದೇಶಿಗಳೂ, ರಾಗದ್ವೇಷಹಿತರೂ, ವೀತರಾಗಿಗಳೂ ಆಗಿರುತ್ತಾರೆ. ಅವರ ವಾಣಿ ಪ್ರಮಾಣವಾದುದು, ಸತ್ಯವಾದುದು. ಜೀವಿಗಳಿಗೆ ಸುಖಶಾಂತಿಯ ಮಾರ್ಗವನ್ನು ತಿಳಿಸುವಂತಹುದು. ಮುಮುಕ್ಷುಗಳಿಗೆ ಮೋಕ್ಷ ಮಾರ್ಗವನ್ನು ಬೋಧಿಸುವಂತಹುದು.

ಆತ್ಮನು ಪಾವನನಾಗಿ, ಮಹಾತ್ಮನಾಗಿ, ಪರಮಾತ್ಮನಾಗಲು ಬೇಕಾದ ಮಾರ್ಗೋಪಾಯವು ಜಿನವಾಣಿಯಲ್ಲಿದೆ. ಇದು ಬಹು ವಿಸ್ತಾರವಾದುದು. ಇದನ್ನು ವಾಙ್ಮಯ, ಆಗಮ, ಅಂಗಬಾಹ್ಯ, ಪೂರ್ವಿ, ಅನುಯೋಗ, ಪ್ರಾಭೃತ ಶಾಸ್ತ್ರ, ಪುರಾಣ, ಕಾವ್ಯ-ಸಾಹಿತ್ಯ ರೂಪವಾಗಿ ಪ್ರಕಟಿಸಲಾಗಿದೆ. ಜಿನವಾಣಿಯು ಹನ್ನೆರಡು ಅಂಗ ಹದಿನಾಲ್ಕು ಪೂರ್ವಿಗಳಲ್ಲಿ ವಿಸ್ತೃತವಾಗಿದೆ.

ಇವೆಲ್ಲವುಗಳೂ ನಾಲ್ಕು ಅನುಯೋಗಗಳಲ್ಲಿ ಸಾರರೂಪವಾಗಿ ಅಡಕವಾಗಿವೆ. ಅವುಗಳೆಂದರೆ ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ ಮತ್ತು ದ್ರವ್ಯಾನುಯೋಗ. ಇವುಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ವಿಸ್ತೃತ ವರ್ಣನೆ ಇದೆ. ಇವೇ ಜೈನ ಚತುರ್ವೇದಗಳು. ಇದೇ ಜಿನವಾಣಿಯ 4 ವಿಭಾಗಗಳು, ಜೈನ ಧರ್ಮದ ಸಾರ ಸರ್ವಸ್ವ.

**1) ಪ್ರಥಮಾನುಯೋಗ :** ಇದರಲ್ಲಿ ಉತ್ಸರ್ಪಿಣಿ ಅವಸರ್ಪಿಣೀಕಾಲ, ಕಲ್ಪಕಾಲದ ಒಂದೊಂದರಲ್ಲೂ ಇರುವ ವಿಭಾಗಗಳು. ಇವುಗಳಲ್ಲಿ ಭೋಗ ಭೂಮಿಯ ಕರ್ಮಭೂಮಿಯ, ನಿಕೃಷ್ಟ-ಉತ್ಕೃಷ್ಟವಾದ ಸ್ಥಿತಿಯ ಕಾಲದ ವಿವರ ಇರುತ್ತದೆ. ಭೂತ, ಭವಿಷ್ಯತ್ ವರ್ತಮಾನ ಕಾಲಗಳ ಸ್ಥಿತಿಯ ವರ್ಣನೆ ಇರುತ್ತದೆ.



ಕರ್ಮಭೂಮಿಕಾಲದಲ್ಲಿ ಅರವತ್ಮೂರು ಮಹಾಪುರುಷರು ಜನ್ಮತಾಳುವ ವಿಷಯ ಇರುತ್ತದೆ. 24 ಮಂದಿ ತೀರ್ಥಂಕರರೂ, 12 ಮಂದಿ ಚಕ್ರವರ್ತಿಗಳೂ 9 ಮಂದಿ ನಾರಾಯಣರೂ, 9 ಮಂದಿ ಪ್ರತಿನಾರಾಯಣರೂ, 9 ಬಲಭದ್ರರೂ ಸೇರಿ 63 ಮಂದಿ ಮಹಾಪುರುಷರನ್ನು ತ್ರಿಷಷ್ಟಿಶಲಾಕಾಪುರುಷ ರೆನ್ನುತ್ತಾರೆ. ಇವರಲ್ಲದೆ 14 ಮಂದಿ ಮನುಗಳು 9 ಮಂದಿ ನಾರದರು 24 ಮಂದಿ ಮನ್ಮಥರೂ, 11 ಮಂದಿ ರುದ್ರರೂ, 20 ಮಂದಿ ಕಲ್ಕಿಗಳೂ ಹಾಗೂ ಹಲವು ಮಂದಿ ಪುಣ್ಯಪುರುಷರ ಮುಕ್ತಿಗಾಮಿಗಳ ವಿಶೇಷ ವರ್ಣನೆ ಇರುತ್ತದೆ. ಕಲ್ಪವೃಕ್ಷಗಳ, ನವನಿಧಿಗಳ ವಿವರವೂ ಇರುತ್ತದೆ. ತೀರ್ಥಂಕರರ ಪಂಚಕಲ್ಯಾಣಗಳ ವರ್ಣನೆ ಇರುತ್ತದೆ. ಅವರ ಭವಾವಳಿಯ ವಿವರವೂ ಇರುತ್ತದೆ. ಕಥೋಪ ಕಥನಗಳು ಇರುತ್ತವೆ.

ಈ ಎಲ್ಲಾ ವಿವರವನ್ನು ತಿಳಿಸುವ ಗ್ರಂಥಗಳು ಹಲವು ಇವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಮಹಾಪುರಾಣ, ಹರಿವಂಶ ಪುರಾಣ, ಆದಿಪುರಾಣ, ನೇಮಿನಾಥ ಪುರಾಣ, ಚಂದ್ರನಾಥ ಪುರಾಣ, ಪಉಮಚರಿಯ, ಪದ್ಮಪುರಾಣ, ರವಿಷೇಣರಾಮಾಯಣ, ವಡ್ಡಾರಾಧನೆ, ಭರತೇಶವೈಭವ ಮುಂತಾದವು ಪ್ರಥಮಾನುಯೋಗದ ಗ್ರಂಥಗಳು.

**2) ಚರಣಾನುಯೋಗ :** ಇದರಲ್ಲಿ ಶ್ರಾವಕರ ಮತ್ತು ಮುನಿಗಳ ಆಚಾರ, ವಿಚಾರಗಳ ವಿವರಗಳು ಇರುತ್ತವೆ. ಪಂಚಲಬ್ಧಿಗಳು, ತ್ರಿಕರಣಗಳು, ಸಮ್ಯಕ್ತ್ವ, ರತ್ನತ್ರಯ, ಮಿಥ್ಯಾತ್ವಗಳ ವಿವರವು ಇರುತ್ತವೆ. ಅಷ್ಟಾಂಗ, ಶ್ರಾವಕರ ವಿಧಗಳು ಶ್ರಾವಕರ ಷಟ್‌ಕ್ರಿಯೆ ಹನ್ನೊಂದು ಪ್ರತಿಮಾ ವಿವರ, 12 ವ್ರತಗಳು, 8 ಮೂಲಗುಣಗಳು, ಸಲ್ಲೇಖನದ ವಿಷಯಗಳೂ ಇರುತ್ತವೆ. ಇವುಗಳ ಆಚಾರ, ಪ್ರತಿಕ್ರಮಣ, ಪ್ರಾಯಶ್ಚಿತ್ತಗಳ ವಿವರವೂ ಬ್ರಹ್ಮಚಾರಿ, ಕ್ಷುಲ್ಲಕರ, ಐಲಕರ, ಆರ್ಯಿಕೆಯರ ಆಚಾರ ವಿಚಾರಗಳೂ ಇರುತ್ತವೆ. ಅಣುವ್ರತ, ಗುಣವ್ರತ ಶಿಕ್ಷಾ ವ್ರತಗಳ ವಿಧಿ ವಿಧಾನಗಳೂ ಇರುತ್ತವೆ. ಹಾಗೆಯೇ ಮುನಿಗಳ ಪಂಚ ಮಹಾವ್ರತಗಳು, ಪಂಚಸಮಿತಿಗಳು, ತ್ರಿಗುಪ್ತಿ, 22 ಪರೀಷಹ, ನಾಲ್ಕು ವಿಧ ಧ್ಯಾನಗಳು, 12 ವಿಧ ತಪಗಳು, ಪಂಚಾಚಾರ, ಚತುರಾರಾಧನಾ, ಸಪ್ತಪರಮಸ್ಥಾನ ಮುಂತಾದ ಆಹಾರದಾನ, ಪೂಜೆ, ಶೀಲ, ಉಪವಾಸ, ಆರಾಧನೆ, 10 ಧರ್ಮ, 12 ಅನುಪ್ರೇಕ್ಷೆ, ಷೋಡಶ ಕಾರಣ ಭಾವನೆಗಳ ವರ್ಣನೆಗಳೂ ಇರುತ್ತವೆ. ಈ ವಿಷಯಗಳನ್ನು ತಿಳಿಸುವ ಗ್ರಂಥಗಳೆಂದರೆ ರತ್ನ ಕರಂಡ ಶ್ರಾವಕಾಚಾರ, ವಸುನಂದಿ ಶ್ರಾವಕಾಚಾರ, ಉಮಾಸ್ವಾಮಿ ಶ್ರಾವಕಾಚಾರ, ರಯಣಸಾರ, ಪುರುಷಾರ್ಥ ಸಿದ್ಧಿ ಉಪಾಯ, ಸಾಗಾರ ಧರ್ಮಾಮೃತ, ಅನಗಾರ ಧರ್ಮಾಮೃತ, ಮೂಲಾಚಾರ,

ಆಚಾರಸಾರ, ತ್ರೈವರ್ಣಿಕಾಚಾರ, ಉಪಾಸಾಕಾಧ್ಯಾಯನ ಮುಂತಾದವು.

**3) ಕರಣಾನುಯೋಗ** : ಇದು ಲೋಕದ ವಿವರವನ್ನು ಅವುಗಳ ಅಳತೆ, ಎತ್ತರ, ಉದ್ದಗಳನ್ನು ತಿಳಿಸುತ್ತದೆ. ಕಾಲಗಳ ಪರಿವರ್ತನೆ, ನಾಲ್ಕು ಗತಿಗಳು, ತ್ರಿಲೋಕದಲ್ಲಿ ಏಳು ನರಕಗಳು, ಅವುಗಳಲ್ಲಿರುವ ಪಟಲ, ಬಿಲಗಳ ನಾರಕಿಗಳ ವಿವರಗಳೂ ಇರುತ್ತವೆ. ಭೂಲೋಕದಲ್ಲಿ ಜಂಬೂ ದ್ವೀಪಾದಿ ಸ್ವಯಂ ಭೂರಮಣ ದ್ವೀಪದವರೆಗೆ ಇರುವ ದ್ವೀಪಸಮುದ್ರಗಳ ವಿವರ ಇರುತ್ತದೆ. ಎರಡೂವರೆ ದ್ವೀಪದಲ್ಲಿರುವ ಮಾನವರ ಸ್ಥಿತಿಗತಿಗಳ-ತಿರ್ಯಂಚರ ವಿವರ - ನದಿ, ಸಮುದ್ರ, ಗಿರಿ-ಶಿಖರ, ಪರ್ವತ-ಸರೋವರ, ಕರ್ಮ ಭೂಮಿಗಳೂ-ಭೋಗಭೂಮಿಗಳ ವಿವರ, ಸುಮೇರು ಪರ್ವತಗಳು ಅಷ್ಟಮ ನಂದೀಶ್ವರ ದ್ವೀಪದ ಕ್ಷೀರಸಮುದ್ರ ವರ್ಣನೆ ಇರುತ್ತದೆ. ಉರಗ, ವ್ಯಂತರ, ಜ್ಯೋತಿಷ್ಯ ಕಲ್ಪಾಮರರ ನಿವಾಸಸ್ಥಾನ, ಭವನವಾಸೀಲೋಕ, ವ್ಯಂತರ ಲೋಕ ಸಿದ್ಧಲೋಕ ವರ್ಣನೆ ಇರುತ್ತದೆ. ಅಧೋಲೋಕ ಮಧ್ಯಲೋಕ, ಊರ್ಧ್ವಲೋಕಗಳ ವರ್ಣನೆ ಇರುತ್ತದೆ.

ಕರಣಾನುಯೋಗದ ವಿಷಯವನ್ನು ತಿಳಿಸುವ ಗ್ರಂಥಗಳೆಂದರೆ ತ್ರಿಲೋಕಸಾರ ಸೂರ್ಯ ಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ, ಧವಳಾ, ತಿಲೋಯ ಪಣ್ಣತಿ ಮುಂತಾದವು.

**4) ದ್ರವ್ಯಾನುಯೋಗ** : ಇದರಲ್ಲಿ ಜೀವಾದಿ ಆರುದ್ರವ್ಯಗಳು, ಪಂಚಾಸ್ತಿಕಾಯ, ಸಪ್ತ ತತ್ತ್ವ ನವಪದಾರ್ಥ ಕರ್ಮದ ಬಂಧ ಮೋಕ್ಷಗಳ ಸ್ವರೂಪವನ್ನು, ಪಂಚಭಾವ, ತ್ರಿಕರಣ, ಪ್ರಮಾಣ, ನಯಾ, 8 ವಿಧ ಜ್ಞಾನ, ಸಪ್ತಭಂಗೀ ಸ್ಯಾದ್ವಾದ, ಅನೇಕಾಂತ, 14 ಗುಣಸ್ಥಾನ 14 ಮಾರ್ಗಣಸ್ಥಾನ, 14 ಜೀವ ಸಮಾಸಗಳ ವರ್ಣನೆ ಇರುತ್ತದೆ. ಸಮ್ಯಕ್ತ್ವದ ವಿಧಿವಿಧಾನ ಭೇದ ಪ್ರಭೇದಗಳು ಅಷ್ಟಕರ್ಮಗಳ ವಿವರ ಪಾಪಪುಣ್ಯಗಳ ವರ್ಣನೆ ಮೋಕ್ಷದಲ್ಲಿರುವ ಸಿದ್ಧಾತ್ಮರ ಸ್ಥಿತಿ, ಸ್ವರೂಪ, ವಿಧಗಳ ವರ್ಣನೆಇರುತ್ತದೆ.

ದ್ರವ್ಯಾನುಯೋಗದ ವಿಷಯವನ್ನು ತಿಳಿಸುವ ಗ್ರಂಥಗಳೆಂದರೆ:- ತತ್ತ್ವಾರ್ಥ ಸೂತ್ರ ದ್ರವ್ಯಸಂಗ್ರಹ, ಗೊಮ್ಮಟಸಾರ, ಆಲಾಪ ಪದ್ಧತಿ, ಸರ್ವಾರ್ಥಸಿದ್ಧಿ, ಸಮಯಸಾರ, ಪಂಚಾಸ್ತಿಕಾಯ ಷಟ್‌ಖಂಡಾಗಮ ಇತ್ಯಾದಿ.

ಈ ನಾಲ್ಕು ಅನುಯೋಗವನ್ನು ತಿಳಿಸುವ ಏಕೈಕ ಗ್ರಂಥವೆಂದರೆ ಶಾಸ್ತ್ರಸಾರ ಸಮುಚ್ಚಯ. ಇದರ ಅಧ್ಯಯನದಿಂದ ಜಿನವಾಣಿಯ ಸಾರವು ವೇದ್ಯವಾಗುತ್ತದೆ. ಇದೇ ಸಮ್ಯಜ್ಞಾನ.



# 71. ಮೋಕ್ಷಮಾರ್ಗ

"ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗ:" ಎಂಬುದು ತತ್ತ್ವಾರ್ಥ ಸೂತ್ರದಲ್ಲಿನ ಮೊದಲ ಸೂತ್ರವಾಗಿದೆ. ಸಮ್ಯಗ್ದರ್ಶನ, ಸಮ್ಯಜ್ಞಾನ ಮತ್ತು ಸಮ್ಯಕ್ಚಾರಿತ್ರಗಳು ಕೂಡಿ ಮೋಕ್ಷ ಮಾರ್ಗವಾಗಿದೆ. ಈ ಮಾರ್ಗವು ಸಂಸಾರದ ದುಃಖದ ನಾಶಕ್ಕೂ, ಕರ್ಮಬಂಧನದ ಬಿಡುಗಡೆಗೂ, ಮೋಕ್ಷಕ್ಕೂ ಕಾರಣವಾಗಿದೆ. ಇದು ಆಧ್ಯಾತ್ಮಿಕವಾದ ಅತ್ಯಂತ ಪ್ರಶಸ್ತವಾದ ಮಾರ್ಗವಾಗಿದೆ. ಜೀವಿಯು ಈ ಮಾರ್ಗದಲ್ಲಿ ಎಡೆಬಿಡದೆ ಸಾಗಿದರೆ ಆತ್ಮೋನ್ನತಿಯೂ, ಆತ್ಮ ಕಲ್ಯಾಣವೂ ಆಗುವುದು. ಅನಾದಿಕಾಲದಿಂದಲೂ ಜೀವನೊಂದಿಗೆ ಬಂಧವಾಗಿರುವ ಮತ್ತು ಸಂಸಾರದಲ್ಲಿ ಜನ್ಮ ಮರಣಗಳನ್ನು ಹೊಂದುವುದಕ್ಕೆ ಹಾಗೂ ಭವ ದುಃಖಕ್ಕೆ ಕಾರಣವಾದ ಕರ್ಮದಿಂದ ಬಿಡುಗಡೆ ಹೊಂದುವುದಕ್ಕೆ ಈ ಮಾರ್ಗದಲ್ಲಿಯೇ ಸಾಗಬೇಕು.

ಸಮ್ಯಗ್ದರ್ಶನ, ಸಮ್ಯಜ್ಞಾನ ಮತ್ತು ಸಮ್ಯಕ್ಚಾರಿತ್ರಕ್ಕೆ ರತ್ನತ್ರಯ ವೆನ್ನುವರು. ಈ ಮೂರು ಒಂದಾಗಿ ಮೋಕ್ಷಮಾರ್ಗವಾಗಿದೆ. ಇವುಗಳ ವಿರುದ್ಧ ವಾದ ಮಿಥ್ಯಾದರ್ಶನ, ಮಿಥ್ಯಾಜ್ಞಾನ ಮತ್ತು ಮಿಥ್ಯಾಚಾರಿತ್ರದಿಂದ ಜೀವಿಯು ಭವಭವದಲ್ಲಿ ಸುತ್ತುತ್ತಾ ದುಃಖಿಯಾಗುವುದು. ಈ ರತ್ನತ್ರಯ ಮಾರ್ಗದಲ್ಲಿ ಸಾಗಿದ ಜೀವಿಯು ತನ್ನ ಶುದ್ಧ ಸ್ವರೂಪದಲ್ಲಿ ಪರಿಣತನಾಗಿ ಕರ್ಮಬಂಧನದಿಂದ ಬಿಡುಗಡೆಯಾಗಿ ನಿಜವಾಗಿ ರತ್ನತ್ರಯಗಳ ಮಯನೇ ಆಗಿ ಪರಮ ಪಾವನ ಪರಂಜ್ಯೋತಿಯಾದ ಸಿದ್ಧ ಪರಮಾತ್ಮನಾಗುತ್ತಾನೆ. ಈ ಪದವಿಯ ಪ್ರಾಪ್ತಿಗೆ ನಿಜವನ್ನು ನಂಬಬೇಕು. ನಿಜವನ್ನು ತಿಳಿಯಬೇಕು. ನಿಜವಾದ ಆಚಾರ ವಿಚಾರಶೀಲನಾಗಬೇಕು. ಇವೇ ರತ್ನತ್ರಯಗಳು. ನಿಜ ಎಂದರೆ ಸತ್ಯ. ಸತ್ಯ ಅಂದರೆ ಮಿಥ್ಯೆ ಇಲ್ಲದಿರುವುದು. ಮಿಥ್ಯಾನಂಬಿಕೆ, ಮಿಥ್ಯಾ ತಿಳುವಳಿಕೆ, ಮಿಥ್ಯಾ ಆಚಾರಗಳಿಂದ ಜೀವಿಗೆ ನಿಜದ ಪರಿಚಯವಾಗುವುದಿಲ್ಲ. ನಿಜದ ಪರಿಚಯವಾಗದೆ ಆತ್ಮನಿಗೆ ನಿಜವಾದ ಸುಖ ಶಾಂತಿ ಆನಂದಗಳ ಅನುಭವವಾಗುವುದಿಲ್ಲ.

ಮಿಥ್ಯ ಎಂದರೆ ಮೂಢ ನಂಬಿಕೆ, ಕಂದಾಚಾರ, ದುರಾಚಾರ, ದುರ್ಬುದ್ಧಿ ಗಳಾಗಿವೆ. ಇವುಗಳಿಂದ ಆತ್ಮನು ವಿಕಾರಿಯಾಗಿ ಕರ್ಮದಿಂದ ಬಂಧಿತನಾಗುತ್ತಾನೆ.

ಈ ಮಿಥ್ಯೆಗೆ ಕಾರಣ ಅಜ್ಞಾನ, ಸಂಶಯ, ವಿನಯ, ವಿಪರೀತ, ಏಕಾಂತಗಳೇ ಕಾರಣ. ಅಂದರೆ ಆತ್ಮ ತತ್ತ್ವದ ಮತ್ತು ಸದ್ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೂ, ಇವುಗಳ ಬಗ್ಗೆ ಸಂಶಯ ಪಡುವುದು. ಯಾವುದಕ್ಕೆ ವಿನಯ ಮಾಡಬೇಕು, ಯಾವುದಕ್ಕೆ ವಿನಯ ಮಾಡಬಾರದೆಂದು ತಿಳಿಯದೆ ವಿನಯ ಮಾಡುವುದು ಮತ್ತು ಅತಿ ವಿನಯ ಮಾಡುವುದು. ಆತ್ಮ ಮತ್ತು ಧರ್ಮದ ಬಗ್ಗೆ ವಿಪರೀತವಾಗಿ ತಿಳಿಯುವುದು ತಾನು ತಿಳಿದಿದ್ದೇನೆ, ನಂಬಿದ್ದೇನೆ ಎಂದು ಅಸತ್ಯದ ಬಗ್ಗೆ ಹಟ ಮಾಡುವುದು ಎಂಬಿವೇ ಮಿಥ್ಯಾತ್ವ ಗಳು. ಇದರಿಂದ ಜೀವಿಯು ಶರೀರವೇ ನಾನೆಂದು ತಿಳಿದಿರುತ್ತಾನೆ. ಆತ್ಮನ ಅರಿವಿರುವುದಿಲ್ಲ. ಅನ್ಯಾಯ, ಅನಾಚಾರ, ಭ್ರಷ್ಟಾಚಾರ, ದುರಾಚಾರ, ಮೋಸ, ಸ್ವಾರ್ಥ, ಕೋಪ, ಮಾಯಾಚಾರ, ಗರ್ವ, ಲೋಭತ್ವ, ದುರಾಸೆ, ದುಷ್ಟ ಪದ್ಧತಿಗಳನ್ನು ಮಾಡುತ್ತಾ ಇರುತ್ತಾನೆ. ಹೀಗಾಗಲು ಕಾರಣವೆಂದರೆ ನಿಜವಾದ ಧರ್ಮದ, ಧರ್ಮ ಬೋಧಕರ, ಧರ್ಮಾಚಾರ್ಯರು ನಿರೂಪಿಸಿದ ಶಾಸ್ತ್ರಗಳ ಪರಿಚಯವಾಗಲೀ, ಅವುಗಳ ವಿಶ್ವಾಸವಾಗಲೀ, ಅವುಗಳ ಆದೇಶದಂತೆ ನಡವಳಿಕೆಯಾಗಲೀ ಆಗಿಲ್ಲ. ಎಲ್ಲಿಯವರೆಗೆ ಈ ಸತ್ಯ ಸಾಧನೆಗಳ ನಂಬಿಕೆ, ತಿಳುವಳಿಕೆ, ಆಚರಣೆ ಆಗುವುದಿಲ್ಲವೋ ಅಲ್ಲಿಯವರೆಗೆ ಈ ಭವ ಪರಂಪರೆಯ ದುಃಖದಿಂದ ಜೀವನಿಗೆ ಬಿಡುಗಡೆ ಇಲ್ಲ.

## ಒಂದನೇ ರತ್ನವಾದ ಸಮ್ಯಗ್ದರ್ಶನ :

ಈ ರತ್ನತ್ರಯಗಳಲ್ಲಿ ಮೊದಲನೆಯದು ಸಮ್ಯಗ್ದರ್ಶನ, ಅಂದರೆ ನಿಜವಾದ ನಂಬಿಕೆ. ನಿಜವಾದುದೆಂದರೆ ಸತ್ಯವಾದುದು, ಸತ್ಯವಾದುದು ಆತ್ಮ. ಈ ಆತ್ಮನ ಸ್ವರೂಪವನ್ನು ತೋರಿಸಿ ಕೊಡುವ ಬೋಧೆಯನ್ನು ನೀಡಿದ ಜಿನದೇವರ, ಜಿನವಾಣಿ ಮತ್ತು ಜಿನಗುರುಗಳನ್ನು ದೃಢವಾಗಿ, ಭಕ್ತಿಗೌರವ ಶ್ರದ್ಧೆಯಿಂದ ನಂಬುವುದೇ ಸಮ್ಯಗ್ದರ್ಶನ, ಈ ದರ್ಶನದಿಂದ ತನ್ನಾತ್ಮನ ದರ್ಶನವಾಗುವುದು. ಆತ್ಮದರ್ಶನದಿಂದಲೇ ನಿಜವಾದ ಸುಖ. ಅದಕ್ಕಾಗಿ ಮೊದಲು ತಾನು ಆತ್ಮಸತ್ಯವನ್ನೂ ಸುಖಾನಂದವನ್ನು ಹೊಂದಿ ಅದರ ವಿವರವನ್ನು ಲೋಕ ಕಲ್ಯಾಣಾರ್ಥವಾಗಿ ಉಪದೇಶ ಮಾಡಿದವರೇ ಜಿನೇಂದ್ರರು. ಇವರೇ ಪೂಜ್ಯರಾದ ದೇವರು. ಇವರು ನಿರ್ದೋಷರೂ ಸರ್ವಜ್ಞರೂ, ವೀತರಾಗಿಗಳೂ, ಹಿತೋಪದೇಶಿಗಳೂ ಆಗಿರುತ್ತಾರೆ. ಈ ಜಿನೇಂದ್ರರು ಹೇಳಿರುವ ಧರ್ಮ ಸೂತ್ರಗಳೂ ಆಚಾರವಿಚಾರಗಳೂ ಇರುವ ಗ್ರಂಥ-ಶಾಸ್ತ್ರ ಆಗಮಗಳೇ ಜಿನವಾಣಿ. ಈ ದೇವರು



ಶಾಸ್ತ್ರಗಳು ನಿರೂಪಿಸಿರುವ ನಿಯಮಾವಳಿಗಳ ಪ್ರಕಾರ ಆಚಾರ-ವಿಚಾರಗಳಿಗೆ ಅನುಸಾರವಾಗಿ ನಡೆಯುವ ಮಹಾವ್ರತಧಾರಿಗಳೂ, ಆರಂಭಾದಿ ಪರಿಗ್ರಹರಹಿತರೂ, ವಿಷಯ ಕಷಾಯಗಳಿಲ್ಲದವರೂ ಆತ್ಮಧರ್ಮಸಾಧಕರೂ ಆದ ದಿಗಂಬರ ಸಾಧುಗಳೇ ಜಿನಗುರುಗಳು. ಇವರುಗಳನ್ನು ಪೂರ್ಣ ರೂಪದಲ್ಲಿ ನಂಬುವುದೇ ಸಮ್ಯಗ್ದರ್ಶನ. ಇದನ್ನು ಧರಿಸಿದವನು ಸಮ್ಯಗ್ದೃಷ್ಟಿ ಎನಿಸುತ್ತಾನೆ. ಸಮ್ಯಗ್ದೃಷ್ಟಿಯು ಮಿಥ್ಯಾತ್ವವನ್ನು ಬಿಟ್ಟಿರುತ್ತಾನೆ. ನಿಜವಾದ ದೇವ, ಶಾಸ್ತ್ರ ಗುರು ಧರ್ಮಗಳನ್ನು ನಂಬಿರುತ್ತಾನೆ.

ಇವನು ಮೂರು ಮೂಢಗಳನ್ನು, ಎಂಟು ಮದಗಳನ್ನು ಎಂಟು ಭಯಗಳನ್ನು, ಆರು ಅನಾಯತನಗಳನ್ನು ಬಿಟ್ಟಿರುತ್ತಾರೆ.

**ಮೂರು ಮೂಢಗಳು :** ದೇವ ಮೂಢ, ಲೋಕ ಮೂಢ ಮತ್ತು ಪಾಖಂಡಿ ಮೂಢ.

**ದೇವ ಮೂಢ :** ದೇವ ಮೂಢವೆಂದರೆ ರಾಗ ದ್ವೇಷ ಮೋಹಗಳಿಂದ ಕೂಡಿದ ಬಲಿಯನ್ನು ಅಪೇಕ್ಷಿಸುವ ವಿಕಾರ, ಕರಾಳರೂಪಿಗಳಾದ ಭಯಂಕರ ಘೋರಾಕಾರಿಗಳಾದ ದೇವತೆಗಳನ್ನು ನಂಬುವುದು.

**ಲೋಕ ಮೂಢವೆಂದರೆ :** ನದಿ ಸ್ನಾನ ಗೋಪೂಜೆ ಮರ ಸುತ್ತುವುದು ಮುಂತಾದ ಮೂಢ ನಂಬಿಕೆ ಕಂದಾಚಾರಗಳನ್ನು ಮಾಡುವುದು ನಂಬುವುದು.

**ಪಾಖಂಡ ಮೂಢ :** ಎಂದರೆ ಪರಿಗ್ರಹಿಗಳೂ ಕಾಮಿಗಳೂ ಮೂಢ ವಿಶ್ವಾಸ,ಆಚಾರಗಳುಳ್ಳವರೂ ಆದ ಕುಗುರುಗಳು ಮಾಯಾವಿಗಳೂ ಭೋಗಾಸಕ್ತರಾದವರನ್ನು ಗುರುಗಳನ್ನು ನಂಬುವುದು.

**ಎಂಟು ಮದಗಳು :** ಜ್ಞಾನಮದ, ಪೂಜಾಮದ, ಕುಲಮದ, ಜಾತಿಮದ, ಐಶ್ವರ್ಯಮದ, ತಪೋಮದ ಬಲಮದ ಮತ್ತು ರೂಪಮದ.

**ಆರು ಅನಾಯತನಗಳು :** ಮಿಥ್ಯಾದೇವ, ಮಿಥ್ಯಾಶಾಸ್ತ್ರ, ಮಿಥ್ಯಾಗುರುಗಳ ಆರಾಧನೆ ಮತ್ತು ಇವುಗಳು ಇರುವ ಸ್ಥಳಗಳು.

**ಎಂಟು ದೋಷಗಳು :** ಧರ್ಮ ಮತ್ತು ಆತ್ಮನ ಬಗ್ಗೆ ಹಾಗೂ ಜಿನದೇವ, ಜಿನವಾಣಿ, ಜಿನಗುರುಗಳ ಬಗ್ಗೆ **ಶಂಕಾ** ಅಂದರೆ ಅನುಮಾನ ಪಡುವುದು. **ಕಾಂಕ್ಷೆ** ಅಂದರೆ ಸಾಂಸಾರಿಕ ವಿಷಯಗಳ ಬಗ್ಗೆ ದುರಾಸೆ ಪಡುವುದು. **ಮೂಢ ದೃಷ್ಟಿತ್ವ** ಮಿಥ್ಯೆಯನ್ನು ನಂಬುವುದು. **ವಿಚಿಕಿತ್ಸಾ** ಅಂದರೆ ದೇವರು, ಗುರು, ಶಾಸ್ತ್ರ,

ಧರ್ಮಗಳ ಬಗ್ಗೆ ಅಸಹ್ಯ ಪಡುವುದು. **ಅನುಪಗೂಹನ** ಅಂದರೆ ಧರ್ಮಕ್ಕೆಹಾನಿ ಮಾಡುವುದು. **ಅಸ್ಥಿತೀಕರಣ** ಎಂದರೆ ಧರ್ಮಾತ್ಮರು ಧರ್ಮ ಮಾರ್ಗ ಬಿಡುವಂತೆ ಮಾಡುವುದು. **ಅವಾತ್ಸಲ್ಯ** ಅಂದರೆ ಧರ್ಮದ, ಧರ್ಮಾತ್ಮರ ಬಗ್ಗೆ ತಿರಸ್ಕಾರ **ಅಪ್ರಭಾವನೆ** - ಧರ್ಮದ ಪ್ರಭಾವನೆಯ ಕಾರ್ಯಕ್ಕೆ ಅಡಚಣೆ ಮಾಡುವುದು ಎಂಬಿವೇ 8 ದೋಷಗಳು ಈ ರೀತಿ 3+8+6+8 ಸೇರಿ 25 ದೋಷಗಳಿಂದ ಸಮ್ಯಗ್ದೃಷ್ಟಿಯು ದೂರವಿರುತ್ತಾನೆ. ಹಾಗೆಯೇ ಈತ ಇಹಲೋಕಭಯ, ಪರಲೋಕಭಯ, ಆಕಸ್ಮಿಕ ಭಯ, ಆಗಂತುಕಭಯ, ಅಗುಪ್ತಿಭಯ, ಮರಣಭಯ ಅರಕ್ಷಕ ಭಯ ಮತ್ತು ರೋಗ ಭಯಗಳೆಂಬ ಎಂಟು ಭಯಗಳಿಂದ ರಹಿತನಾಗಿರುತ್ತಾನೆ ಮತ್ತು ನಿಃಶ್ಶಂಕಾ, ನಿಃಕಾಂಕ್ಷಾ, ನಿರ್ವಿಚಿಕಿತ್ಸಾ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತೀಕರಣ, ವಾತ್ಸಲ್ಯ ಮತ್ತು ಪ್ರಭಾವನಾ ಎಂಬ ಎಂಟು ಅಂಗ ಗುಣಗಳಿಂದ ಕೂಡಿರುತ್ತಾನೆ.

ಸಮ್ಯಗ್ದೃಷ್ಟಿಯು ಮಧು, ಮದ್ಯ, ಮಾಂಸಗಳನ್ನು ಐದು ಔದುಂಬರ ಫಲಗಳನ್ನು ಉಪಯೋಗಿಸದೆ ತನ್ನ ಶಕ್ತಿಗೆ ತಕ್ಕಂತೆ ಅಹಿಂಸಾದಿ ವ್ರತಗಳನ್ನು ಪಾಲಿಸುತ್ತಾನೆ. ತನ್ನಲ್ಲಿ ಒದಗಿ ಬಂದಿರುವ ಸಮ್ಯಕ್ತ್ವವೆಂಬ ಸಂಪತ್ತನ್ನು ಬಹು ಜೋಪಾನವಾಗಿ ನಿರ್ದೋಷವಾಗಿ ರಕ್ಷಿಸಿಕೊಳ್ಳುತ್ತಾನೆ.

ಸಮ್ಯಗ್ದೃಷ್ಟಿಯು ಪರಮಾಗಮದಲ್ಲಿ ನಿರೂಪಿತವಾಗಿರುವ 27 ತತ್ವಗಳನ್ನು ನಂಬಿ ತಿಳಿದಿರುತ್ತಾನೆ, ಅವುಗಳೆಂದರೆ :-

ಷಟ್‌ದ್ರವ್ಯ-6, ಪಂಚಾಸ್ತಿಕಾಯ-5, ಸಪ್ತತತ್ತ್ವ-7, ನವಪದಾರ್ಥ-9,

**ಷಡ್ದ್ರವ್ಯ:** 6- ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ.

ಜೀವ- ಜ್ಞಾನದರ್ಶನ, ಚೇತನದಿಂದ ಕೂಡಿದ ಆತ್ಮ.

ಪುದ್ಗಲ- ರೂಪ, ರಸ, ಗಂಧ, ಸ್ಪರ್ಶಗಳುಳ್ಳ ಜಡವಸ್ತು

ಧರ್ಮ- ಜೀವ ಪುದ್ಗಲಗಳ ಚಲನೆಗೆ ಸಹಕಾರಿಯಾಗಿರುವ ವಸ್ತು

ಅಧರ್ಮ- ಜೀವ ಪುದ್ಗಲಗಳು ಒಂದು ಕಡೆ ನಿಲುಗಡೆಯಾಗಿರಲು ಸಹಕಾರಿಯಾಗಿರುವ ವಸ್ತು.

ಆಕಾಶ- ಎಲ್ಲಾ ದ್ರವ್ಯಗಳೂ ಇರಲು ಅವಕಾಶ ನೀಡಿರುವ ವಸ್ತು.

ಕಾಲ- ಜೀವ ಪುದ್ಗಲಾದಿ ದ್ರವ್ಯಗಳಲ್ಲಿ ಪರಿವರ್ತನೆ ಬದಲಾವಣೆ ಪರ್ಯಾಯಗಳಾಗಲು ಸಹಕಾರಿಯಾಗಿರುವ ವಸ್ತು.



**ಪಂಚಾಸ್ತಿ ಕಾಯ : 5**

ಜೀವ ಪುದ್ಗಲಾದಿ ದ್ರವ್ಯಗಳು ಹಲವು ಪ್ರದೇಶವನ್ನು ಹೊಂದಿರುತ್ತವೆ. ತಮ್ಮದೇ ಆದ ಆಕಾರ - ಶರೀರಗಳನ್ನು ಹೊಂದಿ ಬಹು ಪ್ರದೇಶಿಯಾಗಿರುತ್ತವೆ.

ಅವು ಐದು ಇವೆ. ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಇವೇ ಪಂಚಾಸ್ತಿ ಕಾಯಗಳು. ಕಾಲವೆಂಬ ದ್ರವ್ಯವು ಬಹು ಪ್ರದೇಶಿಯಲ್ಲ. ಇದು ಸೂಕ್ಷ್ಮಾಣುಗಳಾಗಿರುವುದರಿಂದ ಪ್ರತಿಯೊಂದೂ ಪ್ರತ್ಯೇಕವಾದ ಏಕ ಪ್ರದೇಶಿತ್ವವನ್ನು ಹೊಂದಿರುವುದರಿಂದ ಇದು ಅಸ್ತಿಕಾಯವಲ್ಲ.

**ಸಪ್ತ ತತ್ತ್ವಗಳು :** 7 ಜೀವ, ಅಜೀವ, ಆಸ್ರವ, ಬಂಧ, ಸಂವರ ನಿರ್ಜರಾ, ಮೋಕ್ಷ.

**ಜೀವ :** ಜ್ಞಾನ ದರ್ಶನ ಚೇತನ ಸ್ವಭಾವದ ಆತ್ಮ ಇದು ಸಂಸಾರೀ ಜೀವ, ಮುಕ್ತ ಜೀವ ಎಂದು 2 ವಿಧ. ಸಂಸಾರೀ ಜೀವಿಯು ದೇವಗತಿ, ನರಕಗತಿ ಮನುಷ್ಯಗತಿ ಮತ್ತು ತಿರ್ಯಂಚಗತಿಗಳಲ್ಲಿ ಕರ್ಮ ಬಂಧನದ ಕಾರಣವಾಗಿ ಜನ್ಮ ಮರಣಗಳನ್ನು ಹೊಂದುತ್ತಾ ಶರೀರ ಧಾರಿಯಾಗಿ ಸುತ್ತುತ್ತಿರುತ್ತದೆ.

ಮುಕ್ತ ಜೀವವು ಈ ಕರ್ಮ ಬಂಧನದಿಂದ ಬಿಡುಗಡೆ ಹೊಂದಿ ಅಶರೀರಿಯಾಗಿ ಸಿದ್ಧ ಲೋಕದಲ್ಲಿ ನೆಲೆಸಿ ಅನಂತ ಸುಖ ಶಾಂತಿಯನ್ನು ಹೊಂದುತ್ತಾ ಸ್ಥಿರವಾಗಿರುವುದೇ ಮುಕ್ತಾತ್ಮ, ಸಂಸಾರೀ ಜೀವಗಳೂ, ಮುಕ್ತ ಜೀವಿಗಳು ಜಗತ್ತಿನಲ್ಲಿ ಅನಂತಾನಂತ ಇವೆ.

**ಅಜೀವ :** ಅಚೇತನ ವಸ್ತು, ಕರ್ಮಾಣು- ನೆರಳು, ಬೆಳಕು-ಬಿಸಿಲು, ಕಾಗದ, ಒಣ ಮರ, ಲೋಹ ಮುಂತಾದವು.

**ಆಸ್ರವ :** ಜೀವನಿಗೆ ಕರ್ಮವೆಂಬ ಅಜೀವವು ಬರುವ ಕಾರಣವೇ ಆಸ್ರವ. ಸಂಸಾರೀ ಜೀವನು ತನ್ನ ಮನ ವಚನ ಕಾಯಗಳ ಶುಭಾಶುಭ ಕ್ರಿಯೆಗಳಿಂದ ಕರ್ಮಾಣುಗಳನ್ನು ಆಕರ್ಷಿಸುತ್ತಾನೆ. ಕರ್ಮಗಳು ಆತ್ಮನತ್ತ ಬರುವ ದ್ವಾರವೇ ಆಸ್ರವ. ಮಿಥ್ಯಾತ್ವ, ಕಷಾಯ, ಯೋಗ, ಅವ್ರತ, ಪ್ರಮಾದಗಳೇ ಆಸ್ರವ ದ್ವಾರಗಳು.

**ಬಂಧ :** ಕರ್ಮಗಳು ಆತ್ಮನೊಂದಿಗೆ ಸೇರಿ ಆವೃತವಾಗುವುದು. ಆಗ ಆತ್ಮನ ಸ್ವಾಭಾವಿಕ ಸ್ವರೂಪ ಗುಣಗಳು ವಿಕಾರ ಹೊಂದಿ ಸುಖ ದುಃಖವನ್ನು ಜೀವಿಯು ಅನುಭವಿಸುತ್ತಾನೆ. ಇದರಿಂದ ಆತ್ಮನು ಕರ್ಮದಿಂದ ಬಂಧಿತನಾಗುತ್ತಾನೆ.

**ಸಂವರ :** ಕರ್ಮವು ಆತ್ಮನ ಕಡೆ ಬರುವುದನ್ನು ತಡೆಯುವುದು. ಸಮ್ಯಕ್ತ್ವ ಸಹಿತ ಧರ್ಮ ಪಾಲನೆ, ವ್ರತ, ನೇಮ, ಜಪ ಧ್ಯಾನಗಳಿಂದ ಇದು ಸಾಧ್ಯ.

**ನಿರ್ಜರೆ :** ತಪಸ್ಸು, ಧ್ಯಾನ-ಶುದ್ಧ ಭಾವದಿಂದ ಬಂಧವಾಗಿರುವ ಕರ್ಮವನ್ನು ಕಳೆದುಕೊಳ್ಳುವುದು.

**ಮೋಕ್ಷ:** ಕರ್ಮದಿಂದ ಬಿಡುಗಡೆ ಹೊಂದುವುದು. ಆಗ ಆತ್ಮನು ಪರಿಶುದ್ಧ ಸ್ವರೂಪನಾಗಿ ಮುಕ್ತಿ ಮಂದಿರ ಸೇರಿ ಸುಖಿಯಾಗುತ್ತಾನೆ.

**ನವ ಪದಾರ್ಥ :** ಸಪ್ತ ತತ್ತ್ವಗಳ ಜೊತೆಗೆ ಪಾಪ (ದುಃಖದ ಕಾರಣ) ಪುಣ್ಯ (ಸುಖದ ಕಾರಣ)ಗಳನ್ನು ಸೇರಿಸಿದರೆ ನವ ಪದಾರ್ಥಗಳಾಗುತ್ತವೆ.

ಹೀಗೆ ಸಮ್ಯಗ್ದೃಷ್ಟಿಯು 27 ತತ್ತ್ವಗಳನ್ನು ನಂಬಿ ತಿಳಿದಿರುತ್ತಾನೆ. ಸಮ್ಯಗ್ದೃಷ್ಟಿಯ ಚಿಹ್ನೆಗಳು ನಾಲ್ಕು ಇವೆ. 1)ಸಂವೇಗ 2)ಪ್ರಶಮ 3)ಅನುಕಂಪ 4)ಆಸ್ತಿಕ್ಯ.

**ಸಂವೇಗ :** ಧರ್ಮ ಮತ್ತು ಧರ್ಮಾತ್ಮರಲ್ಲಿ ಜಿನದೇವರು ಗುರು ಶಾಸ್ತ್ರಗಳಲ್ಲಿ ಪ್ರೀತಿ ವಾತ್ಸಲ್ಯ ಮತ್ತು ಸಂಸಾರ ಶರೀರ ಭೋಗದಲ್ಲಿ ಅನಾಸಕ್ತಿ.

**ಪ್ರಶಮ :** ಸದಾ ಶಾಂತ ಸ್ವಭಾವದಿಂದಿರುವುದು. ರಾಗ ದ್ವೇಷ ಮಾಡದೆ ಕ್ಷಮಾ ಭಾವದಿಂದ ಎಲ್ಲರಲ್ಲೂ ಮಿತ್ರನಂತೆ ವರ್ತಿಸುವುದು ವೈರಾಗ್ಯ ಭಾವನೆ.

**ಅನುಕಂಪ :** ಪ್ರಾಣಿದಯೆ, ಪರೋಪಕಾರ ಧರ್ಮ ಮತ್ತು ಧಾರ್ಮಿಕರ ರಕ್ಷಣೆ ಮಾಡುವುದು.

**ಆಸ್ತಿಕ್ಯ:** ಜಿನ ದೇವ ಗುರು ಧರ್ಮ, ಸ್ವರ್ಗ, ಮೋಕ್ಷ ಪಾಪ-ಪುಣ್ಯಗಳನ್ನು ನಂಬುವುದು, ಧರ್ಮ, ನೀತಿ, ನ್ಯಾಯ ಪ್ರಾಮಾಣಿಕತೆಯಿಂದ ಸರಳ, ಸಭ್ಯನಾಗಿ ಬಾಳುವುದು.

ಇಂತಹ ಸಮ್ಯಕ್ತ್ವವು ಪ್ರಾಪ್ತವಾಗಲು ಕೆಲವು ವಿಶೇಷ ಲಬ್ಧಿಗಳು ಒದಗಬೇಕು. ಕಾಲಲಬ್ಧಿ ಗುರೂಪದೇಶ, ಜಿನೇಂದ್ರರ ದರ್ಶನ, ಭವ್ಯತ್ವ ದಯಾಭಾವನೆ, ಪಂಚಪರಮೇಷ್ಠಿಗಳ ಭಕ್ತಿ. ದರ್ಶನ ಮೋಹನೀಯ ಕರ್ಮವು ಕಡಿಮೆ ಆಗಿರಬೇಕು.

ಸಮ್ಯಕ್ತ್ವವು ನಾಲ್ಕು ಗತಿಗಳಲ್ಲಿನ ಜೀವಿಗಳಿಗೆ, ಸಂಜ್ಞೀ ಪಂಚೇಂದ್ರಿಯರಿಗೆ, ಮಂದಕಷಾಯಿಗೆ, ಭವ್ಯಾತ್ಮರಿಗೆ ಮೋಹವನ್ನು ಕಮ್ಮಿ ಮಾಡಿಕೊಂಡವರಿಗೆ ಪ್ರಾಪ್ತವಾಗುತ್ತದೆ.



ಸಮ್ಯಕ್ತ್ವವು ಮೂರು ವಿಧವಿದೆ.

**ಉಪಶಮ ಸಮ್ಯಕ್ತ್ವ:** ಮಿಥ್ಯಾತ್ವದಿಂದ ದೂರವಿದ್ದು ಅನಂತಾನುಬಂಧಿ ಕ್ರೋಧ, ಮಾನ, ಮಾಯಾ, ಲೋಭ ಕಷಾಯಗಳನ್ನು ತೊರೆದವನಿಗೆ ಇದು ಪ್ರಾಪ್ತವಾಗುತ್ತದೆ. ಇದು ಬಹುಕಾಲ ಇರಲಾರದು.

**ಕ್ಷಯೋಪಶಮ ಸಮ್ಯಕ್ತ್ವ:** ಮಿಥ್ಯಾತ್ವವು ಇಲ್ಲವಾಗಿ ಕರ್ಮವು ಕಡಿಮೆಯಾಗಿ ಆಚಾರ ವಿಚಾರ ಶೀಲನಾದ ಮಹಾನ್ ಅಹಿಂಸಾವಾದಿ ಗುಣವುಳ್ಳವನಿಗೆ ಮತ್ತು ಧರ್ಮದ ಪೂರ್ಣ ವಿಶ್ವಾಸವುಳ್ಳವನಿಗೆ ಇದು ಲಭಿಸುತ್ತದೆ. ಇದು ಬಹುಕಾಲ ಇರುತ್ತದೆ.

**ಕ್ಷಾಯಿಕ ಸಮ್ಯಕ್ತ್ವ:** ಮಿಥ್ಯಾತ್ವ, ಮೋಹ ಕಷಾಯಗಳು ಪೂರ್ಣ ಇಲ್ಲವಾಗಿ ದೇವ, ಗುರು, ಧರ್ಮದ ಬಗ್ಗೆ- ಆತ್ಮತತ್ವಗಳ ಬಗ್ಗೆ ಪೂರ್ಣ ನಂಬಿಕೆ ಶ್ರದ್ಧೆ, ಇರುವವರಿಗೆ ಇದು ಲಭಿಸುತ್ತದೆ. ಇದು ಪ್ರಾಪ್ತವಾದರೆ ಬಿಟ್ಟು ಹೋಗುವುದಿಲ್ಲ. ಮುಕ್ತನಾಗುವವರೆಗೂ ಇರುವುದು.

ಮತ್ತೆ ಸಮ್ಯಗ್ದರ್ಶನವು-2-ವಿಧ 1) ನಿಸರ್ಗಜ ಸಮ್ಯಕ್ತ್ವ 2) ಅಧಿಗಮಜ ಸಮ್ಯಕ್ತ್ವ.

ಯಾರ ಉಪದೇಶವೂ ಇಲ್ಲದೆ ತಾನೇ ತಾನಾಗಿ ಪೂರ್ವಭವದ ಸಂಸ್ಕಾರದಿಂದ ಉಂಟಾಗುವುದು **ನಿಸರ್ಗಜ ಸಮ್ಯಕ್ತ್ವ**

ಗುರುಗಳ ಉಪದೇಶ ಜಿನ ಬಿಂಬದ ದರ್ಶನ, ಕಾಲಲಬ್ಧಿ ಮುಂತಾದ ಬಾಹ್ಯಕಾರಣದಿಂದ ಪ್ರಾಪ್ತವಾಗುವ ಸಮ್ಯಕ್ತ್ವವು **ಅಧಿಗಮಜ ಸಮ್ಯಕ್ತ್ವ**ವೆನಿಸುತ್ತದೆ.

ಸಮ್ಯಗ್ದರ್ಶನದ 2ವಿಧ 1) ವ್ಯವಹಾರ 2) ನಿಶ್ಚಯ.

**ವ್ಯವಹಾರ ಸಮ್ಯಗ್ದರ್ಶನ:** ಜಿನದೇವ ಗುರು ಧರ್ಮ ಶಾಸ್ತ್ರಗಳಲ್ಲಿ ದೃಢವಾದ ನಂಬಿಕೆ ಇಟ್ಟು 27 ತತ್ತ್ವಗಳನ್ನು ನಂಬಿ ತಿಳುವಳಿಕೆ ಮಾಡಿಕೊಂಡು ಯಥಾಶಕ್ತಿ ವ್ರತ ನೇಮ ಪಾಲಿಸುವುದು.

**ನಿಶ್ಚಯ ಸಮ್ಯಗ್ದರ್ಶನ:** ರತ್ನತ್ರಯಮಯನಾದ ದಶಧರ್ಮಗುಣನಾದ. ಅನಂತ ಜ್ಞಾನ ದರ್ಶನ ಸುಖ ಶಾಂತಿ ಶಕ್ತನಾದ ಚೇತನ ತತ್ತ್ವನಾದ ತನ್ನಾತ್ಮನಲ್ಲಿ ದೃಢವಾದ ನಂಬಿಕೆ ಇಡುವುದು.

ಸಮ್ಯಗ್ದರ್ಶನದಲ್ಲಿ ಹಲವು ವಿಧಗಳುಂಟು ಅವನ್ನೆಲಾ ಇಲ್ಲಿ ವಿವರಿಸಲಾಗುವುದಿಲ್ಲ. ಸಮ್ಯಗ್ದೃಷ್ಟಿಯು ಮರಣಹೊಂದಿದ ಮೇಲೆ ದುರ್ಗತಿಗೆ ಹೋಗುವುದಿಲ್ಲ. ಸ್ತ್ರಿ ಜನ್ಮ ತಾಳುವುದಿಲ್ಲ. ದರಿದ್ರನಾಗುವುದಿಲ್ಲ. ವಿಕಲಾಂಗ, ಸೋಮಾರಿಯಾಗುವುದಿಲ್ಲ. ನಪುಂಸಕನಾಗುವುದಿಲ್ಲ. ನೀಚಕುಲದಲ್ಲಿ ಹುಟ್ಟುವುದಿಲ್ಲ. ಅಲ್ಪಾಯುವಾಗುವುದಿಲ್ಲ. ನಿಯಮದಿಂದ ಸ್ವರ್ಗದಲ್ಲೇ ಜನಿಸುತ್ತಾನೆ. ಸಮ್ಯಕ್ತ್ವವು ಪ್ರಾಪ್ತವಾಗುವ ಮೊದಲೇ ನರಕಾಯು ಕಟ್ಟಿದ್ದರೆ ಅದರ ಗತಿ ಬದಲಾಗದಿದ್ದರೂ ಅದರ ಸ್ಥಿತಿ ಆಯುಷ್ಯ-ದುಃಖ ಕಡಿಮೆಯಾಗುತ್ತದೆ. ಒಂದನೇ ನರಕದಲ್ಲೇ ಹುಟ್ಟುವರು.

ಸಮ್ಯಕ್ತ್ವದ ಮಹಿಮೆ ಅಪಾರವಾದುದು. ಸಮ್ಯಗ್ದೃಷ್ಟಿಯು ನಿಯಮದಿಂದ ಅಣುವ್ರತ ಮಹಾವ್ರತಗಳನ್ನು ಪಾಲಿಸಿ ತಪೋ ಧ್ಯಾನದಿಂದ ಕರ್ಮಕ್ಷಯ ಮಾಡಿ ಮುಕ್ತನಾಗುವುನು.

**ಎರಡನೇ ರತ್ನವಾದ ಸಮ್ಯಜ್ಞಾನ:**

ಸಮ್ಯಗ್ದರ್ಶನ ಪ್ರಾಪ್ತವಾದ ಮೇಲೆ ತನ್ನಲ್ಲಿದ್ದ ಜ್ಞಾನವು ಸಮ್ಯಜ್ಞಾನವಾಗಿ ಮಾರ್ಪಾಡಾಗುತ್ತದೆ. ಈ ಜ್ಞಾನವನ್ನು ವೃದ್ಧಿ ಮಾಡಿ ಕೊಳ್ಳುವುದಕ್ಕಾಗಿ ತತ್ತ್ವ ಚರ್ಚೆ, ಶಾಸ್ತ್ರ ಜ್ಞಾನ ಸ್ವಾಧ್ಯಾಯ ಮಾಡಬೇಕು. ಧರ್ಮೋಪದೇಶ ಪಡೆಯಬೇಕು ಇವುಗಳಿಂದ ಆತ್ಮಜ್ಞಾನ ಹೆಚ್ಚಾಗುತ್ತದೆ. ತತ್ತ್ವಗಳನ್ನು ಅರ್ಥ ಸಹಿತ ತಿಳಿಯಬೇಕು.

ಜ್ಞಾನಗಳು 8 ಇವೆ.

1) ಕುಮತಿ, 2)ಕುಶ್ರುತ 3)ವಿಭಂಗ 4)ಮತಿ 5)ಶ್ರುತಿ, 6)ಅವಧಿ 7)ಮನಃಪರ್ಯಾಯ 8)ಕೇವಲ.

ಇವುಗಳಲ್ಲಿ ಕುಮತಿ, ಕುಶ್ರುತ, ವಿಭಂಗ ಜ್ಞಾನಗಳು ಮಿಥ್ಯಾದೃಷ್ಟಿಗೆ ಉಂಟಾಗುತ್ತವೆ. ಇವು ಮಿಥ್ಯಾಜ್ಞಾನಗಳು.

ಮತಿಜ್ಞಾನ, ಶ್ರುತ ಜ್ಞಾನ, ಅವಧಿ ಜ್ಞಾನ, ಮನಃ ಪರ್ಯಾಯ ಜ್ಞಾನ ಮತ್ತು ಕೇವಲ ಜ್ಞಾನಗಳು ಸಮ್ಯಜ್ಞಾನಗಳು.

ಮಿಥ್ಯಾ ಜ್ಞಾನಗಳು: ಕುಮತಿಜ್ಞಾನ: ಅಜ್ಞಾನ



ಕುಶ್ರುತ: ಕುಶಾಸ್ತ್ರಗಳ ಜ್ಞಾನ, ಕಲ್ಪನಾ ಶಾಸ್ತ್ರಗಳ ತಿಳುವಳಿಕೆ ರಚನೆ.

ವಿಭಂಗ: ಕುಅವಧಿ, ಕೆಟ್ಟದ್ದನ್ನು ಊಹಿಸಿ ತಿಳಿಯುವುದು.

**ಸಮ್ಯಜ್ಞಾನಗಳು:** ಮತಿಜ್ಞಾನ- ಇಂದ್ರಿಯ ಮತ್ತು ಮನಸ್ಸಿನಿಂದ ತಿಳಿಯುವುದು. ಜಿನದೇವ ಗುರು-ಶಾಸ್ತ್ರಗಳ ನಂಬಿಕೆಯಿಂದ ಧರ್ಮದ ವಿಷಯವನ್ನು ಕೇಳುವುದು ತಿಳಿಯುವುದು.

ಶ್ರುತಜ್ಞಾನ: ಜಿನವಾಣಿ ಶಾಸ್ತ್ರದ ಜ್ಞಾನ.

ಅವಧಿ ಜ್ಞಾನ: ಇಂತಿಷ್ಟು ದೇಶ-ಕಾಲ-ದೂರದ ವಿಷಯವನ್ನು ತಿಳಿಯುವುದು.

ಮನಃ ಪರ್ಯಾಯಜ್ಞಾನ : ಇನ್ನೊಬ್ಬರ ಮನಸ್ಸಿನಲ್ಲಿರುವುದನ್ನು ತಿಳಿಯುವುದು.

ಕೇವಲ ಜ್ಞಾನ: ಜಗತ್ತಿನ ಎಲ್ಲಾ ವಿಷಯಗಳನ್ನು ತ್ರಿಕಾಲದ ವಿವರವನ್ನು ಒಮ್ಮೆಲೇ ತಿಳಿಯುವುದು. ಇದು ಸರ್ವಜ್ಞತ್ವ.

ಸಮ್ಯಗ್ದರ್ಶನವು ಜಿನವಾಣಿಯ ಅಧ್ಯಯನದಿಂದ, ಗುರೂಪದೇಶದಿಂದ, ಸ್ವಾನುಭವದಿಂದ ಉಂಟಾಗುತ್ತದೆ. ಮೊದಲು ಸಮ್ಯಗ್ದೃಷ್ಟಿಯಾಗಿರಬೇಕು. ಸಮ್ಯಜ್ಞಾನವು ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ, ದ್ರವ್ಯಾನುಯೋಗಗಳ ಗ್ರಂಥ, ಆಗಮ ಪುರಾಣ, ಪುಸ್ತಕಗಳಿಂದ ದೊರೆಯುತ್ತದೆ. ಜಿನವಾಣಿ 11 ಅಂಗ 14 ಪೂರ್ವಗಳಲ್ಲಿ ಅಡಕವಾಗಿದೆ. ಇದು ಭಗವಂತನ ವಾಣಿಯಾದುದರಿಂದ ಇವು ಪ್ರಮಾಣವೂ ಸತ್ಯವೂ ಆಗಿದೆ. ಇವುಗಳ ಸ್ವಾಧ್ಯಾಯ ಅಭ್ಯಾಸ ಮಾಡುತ್ತ ಸಮ್ಯಗ್ದರ್ಶನದ ವೃದ್ಧಿಯಾಗುತ್ತದೆ.

ಸರಿಯಾದ, ನಿಜವಾದ, ಪ್ರಶಸ್ತವಾದ, ವಿಕಸಿತವಾದ, ತಿಳುವಳಿಕೆಯೇ ಸಮ್ಯಜ್ಞಾನ.

**ಮೂರನೇ ರತ್ನವಾದ ಸಮ್ಯಕ್ಚಾರಿತ್ರ:**

ಸಮ್ಯಕ್ಚಾರಿತ್ರವೆಂದರೆ ಸಮ್ಯಗ್ದರ್ಶನ ಸಮ್ಯಜ್ಞಾನ ಸಹಿತ ಮಾಡುವ ಉತ್ತಮವಾದ ಆಚರಣೆ ನಡತೆ ಎಂದರ್ಥ. ಆತ್ಮೋನ್ನತಿಗೆ ಅನುಕೂಲವಾದ ಜಿನೇಂದ್ರ ಭಗವಂತನು ಹೇಳಿರುವ ಜಿನವಾಣಿಯಲ್ಲಿ ನಿರೂಪಿತವಾಗಿರುವ ಆಚರಣೆಯೇ ಸಮ್ಯಕ್ಚಾರಿತ್ರ.

ಸಮ್ಯಕ್ಚಾರಿತ್ರದಲ್ಲಿ 2 ವಿಧ.

1 ಶ್ರಾವಕಾಚಾರ 2)ಮುನಿಗಳು, ತ್ಯಾಗಿಗಳ, ಯತಿಗಳ ಆಚಾರ, ಶ್ರಾವಕಾಚಾರವು ಅಣುವ್ರತ. ಗುಣವ್ರತ ಮತ್ತು ಶಿಕ್ಷಾವ್ರತಗಳೆಂಬ 12 ವ್ರತಗಳನ್ನು ಪಾಲಿಸುತ್ತ ದಾರ್ಶನಿಕಾದಿ 11 ನೆಲೆಗಳನ್ನು ಹಂತ. ಹಂತವಾಗಿ ಏರುವುದು.

ಶ್ರಾವಕನು ಪಾಕ್ಷಿಕ ಶ್ರಾವಕನೆಂದೂ, ನೈಷ್ಠಿಕ ಶ್ರಾವಕ ನೆಂದೂ ಸಾಧಕ ಶ್ರಾವಕನೆಂದೂ ಮೂರು ವಿಧ.

ಪಾಕ್ಷಿಕ ಶ್ರಾವಕನು ಅಷ್ಟಮೂಲಗುಣಗಳನ್ನು ಪಾಲಿಸುತ್ತಾ ನೀರು ಸೋಸಿ ಕುಡಿಯುವುದು, ರಾತ್ರಿ ಭೋಜನ ತ್ಯಾಗ ಮಾಡಿರುವುದೂ, ಸರಳ-ಸಾತ್ವಿಕ ಸಭ್ಯನಾಗಿ ಬಾಳುತ್ತಾ ದೇವ ಪೂಜಾದಿ 6 ಕ್ರಿಯೆಗಳನ್ನು ಪಾಲಿಸುತ್ತಾನೆ.

ನೈಷ್ಠಿಕ ಶ್ರಾವಕನು 5 ಅಣುವ್ರತ, 3 ಗುಣ ವ್ರತ, 4 ಶಿಕ್ಷಾವ್ರತಗಳನ್ನು ಪಾಲಿಸುವನು ಮತ್ತು ಕ್ರಮವಾಗಿ 11 ನೆಲೆಗಳನ್ನು ಪಾಲಿಸುವನು. ಸಾಧಕ ಶ್ರಾವಕನು ಆತ್ಮಕಲ್ಯಾಣಕ್ಕಾಗಿ ವ್ರತ ನೇಮ ನಿಯಮ ಪೂಜೆ ಆರಾಧನೆ ನೊಂಪಿಗಳನ್ನು ಮಾಡುತ್ತಾನೆ. ಕೊನೆಗೆ ಶಾಂತಿಯಿಂದ ಸಮಾಧಿ ಮರಣವನ್ನು ಹೊಂದುತ್ತಾನೆ.

ಶ್ರಾವಕಾಚಾರವು ಮುನಿಗಳ ಆಚಾರಕ್ಕೆ ಭದ್ರವಾದ ಬುನಾದಿಯಾಗಿರುವುದು. ಯಾರು ಸಂಸಾರ ಶರೀರ ಭೋಗಗಳನ್ನು ತ್ಯಾಗ ಮಾಡಿ ಗುರುಗಳಿಂದ ದೀಕ್ಷೆಯನ್ನು ತೆಗೆದುಕೊಂಡು ಪರಿಶುದ್ಧವಾದ ಆಚಾರವನ್ನು ಪಾಲಿಸುತ್ತಾರೋ ಅವರು ಮುನಿಗಳು. ಅವರು 5 ಮಹಾವ್ರತಗಳು, 5 ಸಮಿತಿಗಳು, ಪಂಚಾಚಾರ, ದಶಧರ್ಮಗಳನ್ನು ಪಾಲಿಸುತ್ತಾರೆ. ತ್ರಿಗುಪ್ತಿಗಳ ಸಹಿತ 22 ಪರೀಷಹಗಳನ್ನು ಸಹಿಸುತ್ತಾ ತಪೋಧ್ಯಾನಗಳಲ್ಲಿ ತೊಡಗಿರುತ್ತಾರೆ.

ಮುನಿಗಳಲ್ಲಿ 28 ಗುಣವುಳ್ಳವರು ಸಾಧುಗಳು 25 ಗುಣವುಳ್ಳವರು ಉಪಾಧ್ಯಾಯರು, 36 ಗುಣವುಳ್ಳವರು ಆಚಾರ್ಯರೂ ಆಗಿ ಆತ್ಮೋನ್ನತಿಯ ಕ್ರಿಯಾಶೀಲರಾಗಿರುತ್ತಾರೆ.

ಹೀಗೆ ಶ್ರಾವಕರು ಮುನಿಗಳು ತಮ್ಮ ತಮ್ಮ ಪದವಿಗಳಿಗೆ ಅನುಸಾರವಾಗಿ ನಿರತಿಚಾರವಾಗಿ ವಿಚಾರ ಸಹಿತ ಆಚಾರವನ್ನು ಪಾಲಿಸುತ್ತಾ ಆತ್ಮ ಕಲ್ಯಾಣದತ್ತ ಸಾಗುವುದೇ ಸಮ್ಯಕ್ಚಾರಿತ್ರ.

ಹೀಗೆ ಈ ರತ್ನತ್ರಯಗಳನ್ನು ಧರಿಸಿದ ಭವ್ಯಾತ್ಮರುಗಳು ಸ್ವರ್ಗಾದಿ



ಮೋಕ್ಷವನ್ನು ಹೊಂದುತ್ತಾರೆ. ಆದ್ದರಿಂದ ರತ್ನತ್ರಯಗಳು ಕೂಡಿ ಮೋಕ್ಷ ಮಾರ್ಗವಾಗಿದೆ.


ವ್ಯವಹಾರ ರತ್ನತ್ರಯವು ಆತ್ಮ ಸಾಧನೆಗೆ ಸಹಕಾರಿಯಾಗುವುದು. ನಿಶ್ಚಯ ರತ್ನತ್ರಯವು ಆತ್ಮ ಕಲ್ಯಾಣ ಮೋಕ್ಷಕ್ಕೆ ಕಾರಣವಾಗಿರುವುದು. ಈ ಮಾರ್ಗ ಒಂದೇ ಆಗಿದೆ. ಶ್ರಾವಕನು ಒಂದು ಹಂತದವರೆಗೆ ಸಾಗುತ್ತಾನೆ. ಮುನಿಗಳು ಮೋಕ್ಷದವರೆಗೆ ಸಾಗಿ ಆತ್ಮಕಲ್ಯಾಣ ಮಾಡಿಕೊಳ್ಳುತ್ತಾರೆ.

ರತ್ನತ್ರಯವೂ ಧರ್ಮವೇ ಆಗಿದೆ. "ಸದ್ದೃಷ್ಟಿಜ್ಞಾನ ವೃತ್ತಾನಿ ಧರ್ಮ" ಎಂದು ಭಗವಾನರು ಹೇಳಿದ್ದಾರೆ.

ಈ ರತ್ನತ್ರಯ ಧರ್ಮದಿಂದ ಜೀವನಿಗೆ ಸುಖ ಶಾಂತಿಯೂ ಮೋಕ್ಷ ಸಾಧನೆಯೂ ಆಗುತ್ತದೆ. ಇದನ್ನು ಧರಿಸಿದವರು ನಿಯಮದಿಂದ ಮುಕ್ತ ರಾಗುತ್ತಾರೆ.

# 72. ತ್ರಿಲೋಕ ವಿಚಾರ

ಅನಂತಾಕಾಶದ ನಡುವೆ ತ್ರಿಲೋಕ ಇದೆ. ಇದೇ ವಿಶ್ವ. ಈ ಲೋಕವನ್ನು ಘನೋದಧಿ, ಘನವಾತ ಮತ್ತು ತನುವಾತಗಳೆಂದು ದಪ್ಪದಪ್ಪನೆಯ ಗಾಳಿಗಳು ಆವರಿಸಿವೆ. ಈ ಗಾಳಿಗಳ ಗಾತ್ರ 20-20 ಸಾವಿರ ಯೋಜನ. ಈ ಲೋಕ ಅಕೃತ್ರಿಮವಾದುದು. ಒಬ್ಬ ಮನುಷ್ಯನು ತನ್ನ ಎರಡೂ ಕಾಲುಗಳನ್ನು ಅಗಲಿಸಿ ನಿಂತು ತನ್ನ ಸೊಂಟದ ಮೇಲೆ ಎರಡೂ ಕೈಗಳನ್ನು ಇಟ್ಟುಕೊಂಡಾಗ ಹೇಗೆ ಕಾಣುವುದೋ ಅದೇ ಆಕೃತಿಯಲ್ಲಿ ಈ ಲೋಕವಿದೆ. ಈ ಲೋಕದ ತುಂಬಾ ಜೀವ, ಪುದ್ಗಲ, ಧರ್ಮ ಅಧರ್ಮ, ಆಕಾಶ ಮತ್ತು ಕಾಲಗಳೆಂಬ ಆರು ದ್ರವ್ಯಗಳು ತುಂಬಿವೆ. 'ಷಡ್ದ್ರವ್ಯಭರಿತೋಲೋಕಃ' ಎಂಬಂತೆ. ಈ ಲೋಕವು ಕೆಳಭಾಗದಲ್ಲಿ ಅಗಲವಾಗಿ ಮೇಲೆ ಹೋಗುತ್ತಾ ಹೋಗುತ್ತಾ ಕಡಿಮೆಯಾಗುತ್ತಾ ಮಧ್ಯದಿಂದ ಮತ್ತೆ ಅಗಲವಾಗುತ್ತಾ ಮೇಲೆ ಮಧ್ಯದಿಂದ ಕಡಿಮೆಯಾಗುತ್ತಾ ತುದಿಯಲ್ಲಿ ಮಧ್ಯ ಲೋಕದಷ್ಟು ಅಗಲವಿರುತ್ತದೆ. ಈ ಲೋಕವು ಬಲ ತಬಲವಾದ್ಯದ ಮೇಲೆ ಎಡದ ತಬಲವನ್ನು ಬೋರಲು ಹಾಕಿದರೆ ಹೇಗೆ ಕಾಣುವುದೋ ಹಾಗೆ ಈ ಲೋಕವಿದೆ.






**ಲೋಕ ವಿಭಾಗ:–**

ಈ ಲೋಕವು ಮೂರುವಿಭಾಗದಿಂದ ಕೂಡಿ, ಕೆಳಭಾಗ ಅಧೋಲೋಕ, ಮಧ್ಯಭಾಗವು ಮಧ್ಯಲೋಕ ಮೇಲಿನ ಭಾಗವು ಊರ್ಧ್ವ ಲೋಕವಾಗಿದೆ. ಇದನ್ನೇ ತ್ರಿಲೋಕವೆಂದು ಹೇಳುವರು.

ಅಧೋ ಲೋಕದಿಂದ ತಳಭಾಗದಿಂದ ಊರ್ಧ್ವಲೋಕದ ತುದಿಯವರೆಗೂ ಹದಿನಾಲ್ಕು ರಜ್ಜು ಎತ್ತರವಿದೆ. ಅಧೋಲೋಕದ ತಳಭಾಗದ ಅಗಲ 7 ರಜ್ಜು ಈ ಅಗಲವು ಮೇಲೆ ಹೋಗುತ್ತಾ ಹೋಗುತ್ತಾ ಮಧ್ಯಲೋಕವು 1 ರಜ್ಜು ಮಾತ್ರ ವಿರುತ್ತದೆ. ಮತ್ತೆ ಮೇಲೆ ಹೋಗುತ್ತಾ ಅಗಲವಾಗುತ್ತಾ ಮಧ್ಯದಲ್ಲಿ 5 ರಜ್ಜು ಅಗಲವಿದ್ದು ಮತ್ತೆ ಮೇಲೆ ಹೋಗುತ್ತಾ ಕಡಿಮೆಯಾಗುತ್ತಾ ಊರ್ಧ್ವಲೋಕದ ತುದಿಯು 1 ರಜ್ಜು ಮಾತ್ರವಿರುತ್ತದೆ. ರಜ್ಜು ಎಂದರೆ ಅದು ಅಸಂಖ್ಯಾತ ಯೋಜನದ ಒಂದು ಅಳತೆ. ಈ ಲೋಕದ ನಟ್ಟನಡುವೆ ತಳದಿಂದ ತುದಿಯವರೆಗೆ ತ್ರಸನಾಳಿ ಇದೆ. ಇದುಮರದ ಮಧ್ಯೆ ತಿರುಳಿನಭಾಗವಿದ್ದಂತೆ. ಅಥವಾ ಪರಂಗೀಗಿಡದ ಮಧ್ಯೆ ಟೊಳ್ಳುಇದ್ದಂತೆ ಇದೆ. ಇದರ ಉದ್ದಗಲವು ಒಂದು ರಜ್ಜು ಚೌಕಾಕಾರವಾಗಿ 14 ರಜ್ಜು ಎತ್ತರವಿದೆ. ಈ ತ್ರಸನಾಳಿಯಲ್ಲಿ ಏಕೇಂದ್ರಿಯದಿಂದ ಸಂಜ್ಞಿ ಪಂಚೇಂದ್ರಿಯ ತ್ರಸ ಜೀವಿಗಳು ಇರುತ್ತವೆ. ಇದರಿಂದ ಹೊರ ಭಾಗದ ಲೋಕಾ ಕಾಶದಲ್ಲಿ ಕೇವಲ ಏಕೇಂದ್ರಿಯ ಜೀವಿಗಳುಮಾತ್ರ ಇರುತ್ತವೆ. ಇವು ಸ್ಥಾವರ ಜೀವಿ ಗಳು. ಈ ಮೂರು ಲೋಕಗಳನ್ನು ಅಧೋಲೋಕವನ್ನು ನರಕಲೋಕವೆಂದೂ, ಮಧ್ಯಲೋಕವನ್ನು ಮರ್ತ್ಯ ಅಂದರೆ ಮನುಷ್ಯ-ತಿರ್ಯಂಚಲೋಕವೆಂದೂ, ಊರ್ಧ್ವಲೋಕವನ್ನು ಸ್ವರ್ಗಲೋಕವೆಂದೂ ಹೇಳುವರು. ಈ ಲೋಕವು ೭ ರುಜ್ಜು ದಪ್ಪವಾಗಿದೆ.

**ಅಧೋಲೋಕ :–**

ಅಧೋಲೋಕದಲ್ಲಿ ಏಳು ನರಕಗಳಿವೆ ಅವು ಮೇಲಿನಿಂದ ಕೆಳಕಳಕ್ಕೆ ಕ್ರಮವಾಗಿ ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮ ಪ್ರಭೆ, ತಮಃ ಪ್ರಭೆ ಮತ್ತು ಮಹಾತಮಃ ಪ್ರಭೆ ಎಂದೂ ಮತ್ತು ಅವಕ್ಕೆ ಕ್ರಮವಾಗಿ ಘರ್ಮಾ, ವಂಶಾ, ಮೇಘಾ, ಅಂಜನಾ, ಅರಿಷ್ಟಾ, ಮಘವೀ, ಮಾಘವೀ ಎಂದು ಹೆಸರುಂಟು. ಈ ಏಳೂ ನರಕಗಳಲ್ಲಿ ಒಟ್ಟು 84 ಲಕ್ಷ ಬಿಲಗಳಿವೆ. ರತ್ನಪ್ರಭೆಯಲ್ಲಿ 30 ಲಕ್ಷ, ಶರ್ಕರಾಪ್ರಭೆಯಲ್ಲಿ 25 ಲಕ್ಷ, ವಾಲುಕಾಪ್ರಭೆಯಲ್ಲಿ 15 ಲಕ್ಷ,

ಪಂಕಪ್ರಭೆಯಲ್ಲಿ 10 ಲಕ್ಷ, ಧೂಮಪ್ರಭೆಯಲ್ಲಿ 3 ಲಕ್ಷ, ತಮಃ ಪ್ರಭೆಯಲ್ಲಿ 5 ಕಡಿಮೆಯಿಂದ 1 ಲಕ್ಷ, ಮಹಾತಮಃ ಪ್ರಭೆಯಲ್ಲಿ ಕೇವಲ 5 ಬಿಲಗಳಿವೆ. ರತ್ನ ಪ್ರಭೆಯ ಮೆಲ್ಭಾಗದಲ್ಲಿ ಖರಭಾಗವಿದೆ. ಅದರಕೆಳಗೆ ಪಂಕಭಾಗವನ್ನು ಬಿಟ್ಟು ಅದರ ಕೆಳಭಾಗ, ಅಂದರೆ ಅಬ್ಬಹುಲ ಭಾಗದಲ್ಲಿಂದ ಕಳಗೆ ಏಳೂ ನರಕಗಳು ಇರುತ್ತವೆ. ಒಂದನೇ ನರಕದಿಂದ ಐದನೇ ನರಕದ ಮುಕ್ಕಾಲುಭಾಗದವರೆಗೆ ಉಷ್ಣವೂ ಅಲ್ಲಿಂದ ಏಳನೇ ನರಕದವರೆಗೆ ಶೀತವೂ ಇರುತ್ತವೆ. ಮೊದಲನೇ ನರಕದ ನಾರಕಿಗಳು 3 ಮೊಳ ಕ್ರಮವಾಗಿ ಹೆಚ್ಚುತ್ತ ಏಳನೇನರಕದಲ್ಲಿ 500 ಧನುಷ್ಟ ಎತ್ತರವಿರುತ್ತದೆ.

ಬಹುಪಾಪ ಕರ್ಮ ಹೊತ್ತ ಜೀವಿಗಳು ತಿರ್ಯಂಚ ಮತ್ತು ಮನುಷ್ಯಗತಿ ಯಿಂದ ಬಂದು ನರಕದಲ್ಲಿ ತಲೆಕೆಳಗೆ ಚಂಡಿನಂತೆಬಿದ್ದು ಅಲ್ಲಿ ಉಷ್ಣಶೀತದ ಬಾಧೆಯಿಂದ ಪುಟನೆದ್ದು ಕೂಡಲೇ ಪೂರ್ಣ ವಿಕೃತ ರೂಪದ ಶರೀರವನ್ನು ಹೊಂದಿ ದುಃಖವನ್ನು ಅನುಭವಿಸುತ್ತವೆ. ಅಲ್ಲಿ ಲವಲೇಶವೂ ಸುಖವಿಲ್ಲ. ಪರಸ್ಪರವಾಗಿ ಪೂರ್ವಜನ್ಮದ ಸ್ಮರಣೆಯಾಗಿ ಕಾದಾಡಿ ದುಃಖವನ್ನು ಅನುಭವಿಸುತ್ತಾರೆ. ಅಷ್ಟೇ ಅಲ್ಲದೇ ಅಸುರರೆಂಬ ವ್ಯಂತರರು ಮೇಲಿನ 3 ನರಕಗಳಿಗೆ ಹೋಗಿ ಅಲ್ಲಿರುವ ನಾರಕಿಗಳಿಗೆ ಪೂರ್ವ ಭವದ ಶತ್ರುತ್ವವನ್ನು ಜ್ಞಾಪಿಸಿ ಕಾದಾಡುವಂತೆ ಮಾಡುತ್ತಾರೆ. ಹುಟ್ಟಿದ ಕ್ಷಣದಿಂದ ಸಹಸ್ರ ಚೇಳುಗಳು ಒಮ್ಮಲೇ ಕುಟುಕಿದಷ್ಟು ವೇದನೆಯಾಗುತ್ತದೆ. ಅಲ್ಲಿ ಅತಿ ಬಾಯಾರಿಕೆ, ಅತಿ ಹಸಿವು. ಆದರೂ ಒಂದು ಹನಿ ನೀರಿಲ್ಲ, ಒಂದು ಕಾಳು ಧಾನ್ಯವಿಲ್ಲ. ಅಲ್ಲಿ ದುಃಖವೇ ಆಹಾರ. ಅಲ್ಲಿಸದಾ ಅಶುಭ ಪರಿಣಾಮ, ವೇದನೇ ಹೆಚ್ಚು. ಮೈ ಹರಿದರೂ ಅವರ ಮೈ ವೈಕ್ರಿಯಿಕವಾದ್ದರಿಂದ ಮತ್ತೆಕೂಡಿಕೊಂಡು ನೋವನ್ನು ಅನುಭವಿಸುತ್ತಾರೆ. ಧರ್ಮವಿರೋಧಿಗಳೂ, ಅನಾಚಾರಿಗಳೂ ಮಿಥ್ಯಾದೃಷ್ಟಿಗಳೂ, ಕೋಪಿಷ್ಟರೂ, ಆರ್ತ ರೌದ್ರಧ್ಯಾನಿಗಳೂ, ಹಿಂಸಕರೂ, ಪಾಪಾತ್ಮರೂ ನರಕದಲ್ಲಿ ಜನಿಸಿ ದುಃಖಿಗಳಾಗುತ್ತಾರೆ.

ಮಧ್ಯಲೋಕ :-

ಮಧ್ಯಲೋಕದಲ್ಲಿ ಮಾನವರೂ ತಿರ್ಯಂಚಪ್ರಾಣಿಗಳೂ ಜೀವಿಸುತ್ತಾರೆ. ಮಧ್ಯಲೋಕವು ಅಸಂಖ್ಯಾತ ದ್ವೀಪ ಸಮುದ್ರಗಳು ಒಂದನ್ನೊಂದು ಸುತ್ತುವರಿದಿವೆ. ಅತ್ಯಂತ ಮಧ್ಯೆ ಜಂಬೂ ದ್ವೀಪ ಇದೆ. ಅದರಸುತ್ತಳತೆ 1 ಲಕ್ಷಯೋಜನ. ಇದರ ಮಧ್ಯೆ ಮೇರುಪರ್ವತವಿದೆ. ಇದರ ಎತ್ತರ ನೂರು ಯೋಜನ ಈ ದ್ವೀಪದಲ್ಲಿ



ಏಳು ಕ್ಷೇತ್ರಗಳಿವೆ. ಇವುಗಳ ಮಧ್ಯೆ ಆರು ಪರ್ವತಗಳಿವೆ. ಇವು ಕ್ಷೇತ್ರಗಳನ್ನು ಬೇರ್ಪಡಿಸುತ್ತವೆ.

ಜಂಬೂದ್ವೀಪದಲ್ಲಿ ಕ್ರಮವಾಗಿ ದಕ್ಷಿಣೋತ್ತರವಾಗಿ ಭರತ, ಹೈಮವತ, ಹರಿ, ವಿದೇಹ, ರಮ್ಯಕ್ಯ, ಹೈರಣ್ಯವತ ಮತ್ತು ಐರಾವತ ಎಂಬ ಏಳುಕ್ಷೇತ್ರಗಳು ಇವೆ. ಇವುಗಳ ಮಧ್ಯೆ ಕ್ರಮವಾಗಿ ದಕ್ಷಿಣೋತ್ತರವಾಗಿ ಹಿಮವನ್, ಮಹಾ ಹಿಮವನ್ ನಿಷಧ, ನೀಲ, ರುಕ್ಮಿ, ಶಿಖರಿ ಎಂಬ ಆರು ಪರ್ವತಗಳು ಪೂರ್ವ ಪಶ್ಚಿಮವಾಗಿ ಹಬ್ಬಿವೆ. ಈ ಪರ್ವತಗಳಲ್ಲಿ ಒಂದೊಂದು ಸರೋವರಗಳಿವೆ. ಅವು ಕ್ರಮವಾಗಿ ಪದ್ಮ, ಮಹಾಪದ್ಮ, ತಿಗಿಂಛ, ಕೇಸರಿ, ಪುಂಡರೀಕ, ಮಹಾಪುಂಡರೀಕ ಎಂಬ ಆರು ಸರೋವರಗಳಲ್ಲಿ ಕ್ರಮವಾಗಿ ಶ್ರೀ ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿ, ಎಂಬ ದೇವಿಯರು ನೆಲೆಸಿದ್ದಾರೆ. ಭರತಾದಿ ಏಳು ಕ್ಷೇತ್ರಗಳಲ್ಲಿ ಕ್ರಮವಾಗಿ ಗಂಗಾ, ಸಿಂಧೂ, ರೋಹಿತಾ-ರೋಹಿತಾಸ್ಯ, ಹರಿತ್-ಹರಿಕಾಂತ, ಶೀತಾ-ಶೀತೋದಾ,ನಾರಿ-ನರಕಾಂತ, ಸುವರ್ಣಕೂಲ-ರೂಪ್ಯಕೂಲ, ರಕ್ತಾ- ರಕ್ತೋದ ಎಂಬ ಹದಿನಾಲ್ಕು ನದಿಗಳು ಇವೆ. ಒಂದೊಂದು ಕ್ಷೇತ್ರದಲ್ಲಿ ಎರಡೆರಡರಂತೆ ಹರಿದು ಪೂರ್ವ-ಪಶ್ಚಿಮ ಸಮುದ್ರಕ್ಕೆ ಸೇರುತ್ತವೆ. ಪ್ರತಿ ಯೊಂದೂ ಕ್ಷೇತ್ರದ ಮಧ್ಯೆ ವಿಜಯಾರ್ಧ ಪರ್ವತಗಳಿವೆ. ಈ ವಿಜಯಾರ್ಧ ಪರ್ವತ, ನದಿಗಳ ನಡುವಿನ ಭೂಭಾಗವು ಆರು ಖಂಡಗಳಾಗುತ್ತವೆ. ಇವುಗಳ ದಕ್ಷಿಣದಲ್ಲಿ ಎರಡೂ ನದಿಗಳ ನಡುವಿನ ಭಾಗವೇ ಆರ್ಯಾಖಂಡವೆಂದೂ, ಉಳಿದವುವೆಲ್ಲ ಮ್ಲೇಂಛಖಂಡವೆಂದೂ ಹೇಳುವರು. ಇಲ್ಲಿ ಒಂದೊಂದು ಕಾಲದಲ್ಲಿ 63 ಮಂದಿ ಶಲಾಕಾಪುರುಷರು ಹುಟ್ಟುತ್ತಾರೆ. ಇಲ್ಲಿ ಕಾಲವಿಭಾಗ ಉಂಟು. ಈ ಸ್ಥಿತಿ ಭರತ-ಐರಾವತ ಕ್ಷೇತ್ರಗಳಲ್ಲಿ ಮಾತ್ರ ಉಂಟು. ಮಿಕ್ಕ ಕ್ಷೇತ್ರಗಳಲ್ಲಿ, ವಿದೇಹಕ್ಷೇತ್ರದ ದೇವಕುರು, ಉತ್ತರ ಕುರುಭಾಗವು ಭೋಗ ಭೂಮಿಗಳಾಗಿವೆ. ವಿದೇಹ ಕ್ಷೇತ್ರದ ನಟ್ಟನಡುವೆ ಮೇರುಪರ್ವತವಿದೆ. ವಿದೇಹ ಕ್ಷೇತ್ರದಲ್ಲಿ ದೇವಕುರು, ಉತ್ತರಕುರುಗಳ ಭೋಗಭೂಮಿಗಳನ್ನು ಬಿಟ್ಟು ಪೂರ್ವದಲ್ಲಿ, ಪಶ್ಚಿಮದಲ್ಲಿ ಒಟ್ಟು 32 ಕ್ಷೇತ್ರಗಳಿವೆ. ಆ ಕ್ಷೇತ್ರಗಳಲ್ಲಿ ಕಾಲ ಬೇಧವಿಲ್ಲ. ಸದಾ ತೀರ್ಥಂಕರರೂ, ಚಕ್ರವರ್ತಿಗಳೂ ಜನಿಸುತ್ತಾರೆ. ಅಲ್ಲಿ ಸದಾ ಮುನಿಗಳು ಕರ್ಮಕ್ಷಯ ಮಾಡಿ ಮುಕ್ತಿಗೆ ಹೋಗುತ್ತಲೇ ಇರುತ್ತಾರೆ. ಹೀಗೆ ಭರತ ಐರಾವತಕ್ಷೇತ್ರಗಳಲ್ಲಿ ದುಷಮ ಸುಷಮಾ ಎಂಬ ಕಾಲ ವಿಭಾಗದಲ್ಲಿ ಮಾತ್ರ ಮುಕ್ತಿ ಹೊಂದಬಹುದಾಗಿದೆ. ಹೀಗಾಗಿ ವಿದೇಹ, ಭರತ, ಐರಾವತ ಕ್ಷೇತ್ರಗಳು ಕರ್ಮಭೂಮಿಗಳು. ಮಿಕ್ಕವು ಭೋಗ ಭೂಮಿಗಳು. ಜಂಬೂ ದ್ವೀಪದಲ್ಲಿ ಜಂಬೂವೃಕ್ಷವಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ದ್ವೀಪದ ಸುತ್ತಾ ಲವಣ ಸಮುದ್ರವಿದೆ. ಅದರ ಸುತ್ತಾ ಧಾತಕೀಖಂಡ

ದ್ವೀಪವಿದೆ. ಅದರ ಸುತ್ತ ಕಾಲೋದ ಸಮುದ್ರವಿದೆ. ಅದರ ಸುತ್ತಾ ಪುಷ್ಕರ ದ್ವೀಪವಿದೆ. ಈ ದ್ವೀಪದ ನಟ್ಟ ನಡುವೆ ಮಾನುಷೋತ್ತರಪರ್ವತವಿದೆ. ಅದರಿಂದಾಚೆ ಇರುವ ದ್ವೀಪ ಸಮುದ್ರಗಳಲ್ಲಿ ಕೇವಲ ತಿರ್ಯಂಚ ಪ್ರಾಣಿಗಳು ಮಾತ್ರ ಇರುತ್ತವೆ. ಮಾನವರು ಜನ್ಮ ತಾಳುವುದಿಲ್ಲ. ಹೀಗೆ ಜಂಬೂದ್ವೀಪ ಧಾತಕೀಖಂಡದ್ವೀಪ ಮತ್ತು ಪುಷ್ಕರ ಅರ್ಧ ದ್ವೀಪದಲ್ಲಿ ಮಾತ್ರ ಮನುಷ್ಯರು ಜನ್ಮ ತಾಳುತ್ತಾರೆ. 2 $^1/_2$ ದ್ವೀಪದ ವಿಸ್ತಾರ 45 ಲಕ್ಷ ಯೋಜನ.

ಜಂಬೂದ್ವೀಪದ 2ರಷ್ಟು ಲವಣ ಸಮುದ್ರವಿದೆ. ಅದರ 2ರಷ್ಟು ಧಾತಕೀಖಂಡ ದ್ವೀಪ. ಹೀಗೆ ಒಂದಕ್ಕಿಂತ ಒಂದು ಅದರ 2-2 ರಷ್ಟು ವಿಸ್ತಾರವಾಗಿ ಅಸಂಖ್ಯಾತ ದ್ವೀಪ ಸಮುದ್ರ ಇವೆ. 8ನೇ ದ್ವೀಪವೇ ನಂದೀಶ್ವರ ದ್ವೀಪ. ಕೊನೆಯ ದ್ವೀಪ ಸ್ವಯಂಭೂರಮಣ ದ್ವೀಪ. ಅದರ ಸುತ್ತಾ ಕೊನೆಯದಾಗಿ ಸ್ವಯಂಭೂ ರಮಣ ಸಮುದ್ರವಿದೆ. 2$^1/_2$ ದ್ವೀಪದಲ್ಲಿ 5 ಭರತ, ಐದು ಐರಾವತ ಮತ್ತು 5 ವಿದೇಹಕ್ಷೇತ್ರಗಳ 160 ಕ್ಷೇತ್ರಗಳೂ ಸೇರಿ 170 ಕರ್ಮಭೂಮಿಗಳಾಗುತ್ತವೆ. ಒಂದು ಕಾಲಕ್ಕೆ ಅಲ್ಲೆಲ್ಲಾ ತೀರ್ಥಂಕರರು ಇರುತ್ತಾರೆ. 2$^1/_2$ ದ್ವೀಪದಲ್ಲಿ 5 ಮೇರು ಪರ್ವತಗಳಿವೆ. ಇವುಗಳ ಎತ್ತರ 1 ಲಕ್ಷ ಯೋಜನ.

ಮನುಷ್ಯರಲ್ಲಿ ಆರ್ಯರು, ಮ್ಲೇಂಛರು, ಭೋಗ ಭೂಮಿಜರೂ ಎಂದು ಮೂರು ವಿಧ. ಆರ್ಯಾ ಖಂಡದಲ್ಲಿರುವವರು ಆರ್ಯರು. ಮ್ಲೇಂಛ ಖಂಡದಲ್ಲಿರುವವರು ಮ್ಲೇಂಛರು, ಭೋಗಭೂಮಿಯಲ್ಲಿರುವವರು ಭೋಗ ಭೂಮಿಜರು, ಆರ್ಯರು ಮಾತ್ರ ಒಂದು ಕಾಲಕ್ಕೆ ಕರ್ಮಕ್ಷಯ ಮಾಡಿ ಮುಕ್ತರಾಗಬಹುದು.

**ಕಾಲವಿಭಾಗ :-** ಕಾಲದ ಅತ್ಯಂತ ಚಿಕ್ಕಭಾಗವೆಂದರೆ ಸಮಯ. ಅಸಂಖ್ಯಾತ ಸಮಯಗಳು ಸೇರಿ ಒಂದು ಆವಲಿ ಆಗುತ್ತದೆ (ಒಂದು ಸಾರಿ ರೆಪ್ಪೆ ಹೊಡೆಯುವಷ್ಟು ಕಾಲ) ಅಸಂಖ್ಯಾತ ಆವಲಿಗಳಿಗೆ ಒಂದು ಉಚ್ಛ್ವಾಸ, ಏಳು ಉಚ್ಛ್ವಾಸಕ್ಕೆ 1 ಸ್ತೋಕ, ಏಳು ಸ್ತೋಕಗಳಿಗೆ ಒಂದು ಲವ, 38 ಲವಗಳಿಗೆ 1 ಘಳಿಗೆ (24 ನಿಮಿಷ) 2 ಘಳಿಗೆಗೆ 1 ಮುಹೂರ್ತ, ಮೂವತ್ತು ಮುಹೂರ್ತ 1 ದಿನ, ಹೀಗೆಯೇ ವಾರ, ಪಕ್ಷ, ಮಾಸ, ವರ್ಷ, ಋತು, ಅಯನ, ಸಂವತ್ಸರ, ಯುಗಗಳ ಗಣನೆಯಾಗಿದೆ. ಎಣಿಕೆಗೆ ಏಕ, ದಶ, ಶತ, ಸಹಸ್ರ, ಆಯತ, ಲಕ್ಷ, ಪ್ರಯತ, ಕೋಟಿ, ಅರ್ಬುದ, ಪದ್ಮ, ಖರ್ವ, ನಿಖರ್ವ, ಮಹಾಪದ್ಮ, ಶಂಖ, ಸಾಗರ, ಮಧ್ಯ, ಅಂತ್ಯ, ಪರಮಾಂತ್ಯ, ಪರಮಕೋಟಿ, ಸಂಖ್ಯಾತ, ಅಸಂಖ್ಯಾತ, ಅನಂತ, ಅನಂತಾನಂತ ಎಂಬ ಕಾಲದ ಎಣಿಕೆ ಇದೆ. 84 ಲಕ್ಷ ವರ್ಷಕ್ಕೆ ಒಂದು ಪೂರ್ವ. ಹೀಗೆ ಅದನ್ನು 84 ರಿಂದ ಗುಣಿಸಿಕೊಂಡು ಹೋದರೆ ಕ್ರಮವಾಗಿ ಪರ್ವಾಂಗ ಸರ್ವಣಕಾರಾಂಗ, ಣಕಾರ,



ಕುಮುದಾಂಗ, ಕುಮುದ, ಪದ್ಮಾಂಗ, ಪದ್ಮ, ನಳಿನಾಂಗ, ನಳಿನ, ಕಮಲಾಂಗ, ಕಮಲ, ತಾಟ್ಯಾಂಗ, ತಟ್ಯ, ಅಟಟಾಂಗ, ಅಟಟ, ಅಮಮಾಂಗ, ಅಮಮ, ಹಾಹಾಂಗ, ಹಾಹಾ, ಹೂಹ್ವಾಂಗ, ಹೂಹೂ, ಲತಾಂಗ, ಲತಾ, ಮಹಾಲತಾಂಗ, ಮಹಾಲತೆ ಎಂಬ ಕಾಲದ ಗಣನೆ ಬೆಳೆದುಕೊಂಡು ಹೋಗುತ್ತದೆ. ಕಾಲದಗಣನೆಯಲ್ಲಿ ಮುಖ್ಯವಾಗಿ ಸಮಯ, ಆವಲಿ, ಅಂತರ್ ಮುಹೂರ್ತ, ಮುಹೂರ್ತ, ಗಂಟೆ, ದಿನ, ಪಕ್ಷ, ತಿಂಗಳು, ವರ್ಷ, ನೂರು, ಸಹಸ್ರ, ಲಕ್ಷ, ಕೋಟಿ, ಕೋಟಾಕೋಟಿ, ಪಲ್ಯ, ಪಲ್ಯೋಪಮ, ಪೂರ್ವ, ಸಾಗರ, ಎಂಬ ಎಣಿಕೆ ಜೈನಾಗಮದಲ್ಲಿ ಪ್ರಚಲಿತವಿದೆ.

ಈ ಎಲ್ಲಾ ಕಾಲಗಳೂ ಕರ್ಮಭೂಮಿಯ 2 $^1/_2$ ದ್ವೀಪದ ಭರತ-ಐರಾವತ ಕ್ಷೇತ್ರದಲ್ಲಿ ಮಾತ್ರ ಗಣನೆಯಲ್ಲಿವೆ. ಆದರೆ ಆಯುಷ್ಯದ ಸ್ಥಿತಿಯನ್ನು ತಿಳಿಸುವಾಗ ಎಲ್ಲಾ ಕಡೆಯೂ ಎಲ್ಲಾ ಕಾಲದ ಬಳಕೆ ಇದೆ. ಎಲ್ಲಾ ಗತಿಯಲ್ಲಿಯೂ ಇದೆ.

ಒಟ್ಟು ಕಾಲವು ಉತ್ಸರ್ಪಿಣಿ, ಅವಸರ್ಪಿಣೀಕಾಲವೆಂದು ಎರಡು ವಿಧ. ಹತ್ತು ಕೋಟಾಕೋಟಿ ಸಾಗರವರ್ಷಗಳು ಉತ್ಸರ್ಪಿಣೀ ಕಾಲವೂ ಮತ್ತೆ ಅಷ್ಟೇ ಪ್ರಮಾಣದ್ದು ಅವಸರ್ಪಿಣೀ ಕಾಲವಾಗಿರುತ್ತದೆ. ಇವೆರಡೂ ಸೇರಿ ಒಂದು ಕಲ್ಪಕಾಲವಾಗುತ್ತದೆ. ಪ್ರತಿಯೊಂದು ಉತ್ಸರ್ಪಿಣೀ ಅವಸರ್ಪಿಣೀಕಾಲವು ಆರು, ಆರು ಭಾಗಗಳಾಗಿವೆ. ಉತ್ಸರ್ಪಿಣೀ ಕಾಲದಲ್ಲಿ ಜೀವಿಗಳ ಆಯುಷ್ಯ, ಸುಖ, ಎತ್ತರ ಬಲಗಳು ಹೆಚ್ಚುತ್ತಾ ಹೋಗುತ್ತವೆ. ಅವಸರ್ಪಿಣಿಯಲ್ಲಿ ಕಡಿಮೆಯಾಗುತ್ತಾ ಬರುತ್ತವೆ.

**ಉತ್ಸರ್ಪಿಣೀಕಾಲದ 6 ವಿಧ :**

1) ದುಷಮದುಷಮಾ 2) ದುಷಮಾ 3) ದುಷಮಸುಷಮಾ 4) ಸುಷಮದುಷಮಾ 5) ಸುಷಮಾ 6) ಸುಷಮಸುಷಮಾ

**ಅವಸರ್ಪಿಣೀ ಕಾಲದ 6 ವಿಧ :**

1) ಸುಷಮ ಸುಷಮಾ 2) ಸುಷಮಾ 3) ಸುಷಮದುಷಮಾ 4) ದುಷಮಸುಷಮಾ 5) ದುಷಮಾ 6) ದುಷಮದುಷಮಾ

ಸುಷಮಸುಷಮಾ ಎಂದರೆ ಸುಖವೇ ಸುಖದ ಕಾಲ. ಸುಷಮಾ ಎಂದರೆ

ಸುಖದ ಕಾಲ. ಸುಷಮ ದುಷಮಾ ಎಂದರೆ ಸುಖದ ನಂತರ ದುಃಖದ ಕಾಲ. ದುಷಮ ಸುಷಮಾ ಎಂದರೆ ದುಃಖದ ನಂತರ ಸುಖದ ಕಾಲ. ದುಷಮ ಎಂದರೆ ದುಃಖದ ಕಾಲ. ದುಷಮ ದುಷಮಾ ಎಂದರೆ ದುಃಖವೇ ದುಃಖದ ಕಾಲ.

ಒಂದೊಂದು ಕಾಲಕ್ಕೂ ಇಂತಿಷ್ಟು ಕಾಲದ ಪರಿಮಾಣ ಉಂಟು.

1) ಸುಷಮಸುಷಮಾ ಕಾಲವು ನಾಲ್ಕು ಕೋಟಾಕೋಟಿ ಸಾಗರ ವರ್ಷ ಪರಿಮಿತಿ. ಆಗ ಉತ್ತಮ ಭೋಗಭೂಮಿಯ ಸ್ಥಿತಿ ಇರುತ್ತದೆ.

2) ಸುಷಮಾ ಕಾಲವು ಮೂರು ಕೋಟಾಕೋಟಿ ಸಾಗರವರ್ಷ ಪರಿಮಿತಿ. ಆಗ ಮಧ್ಯಮ ಭೋಗ ಭೂಮಿಯ ಸ್ಥಿತಿ ಇರುತ್ತದೆ.

3) ಸುಷಮ ದುಷಮಾ ಕಾಲವು ಎರಡು ಕೋಟಾಕೋಟಿ ಸಾಗರ ವರ್ಷ ಪರಿಮಿತಿ. ಆಗ ಜಘನ್ಯ ಭೋಗಭೂಮಿಯ ಸ್ಥಿತಿ ಇರುತ್ತದೆ.

4) ದುಷಮ ಸುಷಮಾ ಕಾಲವು ನಲವತ್ತೆರಡು ಸಾವಿರ ವರ್ಷ ಕಮ್ಮಿಯಾದ ಒಂದು ಕೋಟಾಕೋಟಿ ಸಾಗರ ಕಾಲ ಪರಿಮಿತಿ ಇರುತ್ತದೆ. ಈ ಸಮಯದಲ್ಲಿ ಕರ್ಮಭೂಮಿಯ ಸ್ಥಿತಿ ಇರುತ್ತದೆ. ಆಗಲೇ ಅರವತ್ಮೂರು ಮಂದಿ ಶಲಾಕಾಪುರುಷರ ಜನ್ಮವಾಗುತ್ತದೆ. ಭವ್ಯಾತ್ಮರು ಮುನಿಗಳಾಗಿ ಕರ್ಮಕ್ಷಯ ಮಾಡಿ ಮುಕ್ತಿ ಹೊಂದುತ್ತಾರೆ.

5) ದುಷಮ ಕಾಲ, ದುಃಖದ ಕಾಲ. 21 ಸಾವಿರ ವರ್ಷ ಪರಿಮಿತಿ ಇರುತ್ತದೆ. ಸಮಗ್ದೃಷ್ಟಿಗಳೂ ಇರುತ್ತಾರೆ. ಧರ್ಮ ಪ್ರಭಾವನೆಯೂ ಆಗುತ್ತದೆ. ಶ್ರಾವಕರೂ, ಮುನಿಗಳೂ ಇರುತ್ತಾರೆ. ಆದರೆ ಪೂರ್ಣ ಕರ್ಮಕ್ಷಯ ಮಾಡಲಾಗುವುದಿಲ್ಲ. ಮುಕ್ತಿಗೆ ಯಾರೂ ಹೋಗುವುದಿಲ್ಲ.

6) ದುಷಮದುಷಮಾಕಾಲದಲ್ಲಿ ಅತ್ಯಂತ ದುಃಖವೇ ದುಃಖ. ಇದು 21 ಸಾವಿರ ವರ್ಷ ಪರಿಮಿತಿ ಇರುತ್ತದೆ. ಅತ್ಯಂತ ನಿಕೃಷ್ಟವಾದ ಕಾಲ. ಪಾಪಕರ್ಮ ಕಾರ್ಯದಿಂದ ಜನರು ಮಿಥ್ಯಾದೃಷ್ಟಿಗಳಾಗಿ ದುಃಖಿಗಳಾಗಿರುತ್ತಾರೆ. ಇದಿಷ್ಟೂ ಅವಸರ್ಪಿಣೀಕಾಲ. ಈಗ ಈ ನಮ್ಮ ಭರತಕ್ಷೇತ್ರದಲ್ಲಿ ದುಷಮವೆಂಬ ಪಂಚಮ ಕಾಲ ನಡೆಯುತ್ತಿದೆ.

ಹೀಗೆಯೇ ಉತ್ಸರ್ಪಿಣಿಯು ದುಷಮದುಷಮ ಕಾಲದಿಂದ ಮೇಲೇರುತ್ತಾ ಸಾಗುತ್ತದೆ.



ಅವಸರ್ಪಿಣಿಯ 4ನೆಯದೂ, ಉತ್ಸರ್ಪಿಣಿಯ 3ನೆಯದೂ ಆದ ದುಷಮ ಸುಷಮಾ ಕಾಲದಲ್ಲಿ ಕರ್ಮಭೂಮಿ, ತೀರ್ಥಾಧೀಶರಾದಿ ಮಹಾಪುರುಷರ ಜನ್ಮವಾಗುತ್ತದೆ.

**ಊರ್ಧ್ವಲೋಕ** : ಊರ್ಧ್ವಲೋಕ ಎಂದರೆ ದೇವಲೋಕ. ದೇವತೆಗಳಲ್ಲಿ ನಾಲ್ಕು ವಿಧ.

1) ಭವನವಾಸೀ 2) ವ್ಯಂತರ 3) ಜ್ಯೋತಿಷ್ಕ 4) ವಿಮಾನವಾಸಿ ದೇವತೆಗಳು. ಎಲ್ಲರೂ ವೈಕ್ರಿಯಿಕಶರೀರಿಗಳು. ಅಮೃತಾಹಾರಿಗಳು. ಎಲ್ಲರಿಗೂ ಅವಧಿ ಜ್ಞಾನವಿರುತ್ತದೆ. ಭವನವಾಸೀ ದೇವತೆಗಳು ಮಧ್ಯಲೋಕದ ಕೆಳಭಾಗದಲ್ಲಿರುವ ಖರಭಾಗವೆಂಬಲ್ಲಿ ಇರುತ್ತಾರೆ. ಇವರು ಪಾತಾಳವಾಸೀ ದೇವತೆಗಳು. ಇವರಲ್ಲಿ ಅಸುರಕುಮಾರ, ನಾಗಕುಮಾರ, ವಿದ್ಯುತ್ಕುಮಾರ ಸುವರ್ಣ ಕುಮಾರ, ಅಗ್ನಿ ಕುಮಾರ, ವಾಯುಕುಮಾರ, ಸ್ತನಿತಕುಮಾರ ಉದಿತಕುಮಾರ, ದ್ವೀಪಕುಮಾರ ಮತ್ತು ದಿಕ್ಕುಮಾರರೆಂದು ಹತ್ತು ವಿಧ. ಇವರೆಲ್ಲಾ ವೈಕ್ರಿಯಿಕಶಕ್ತಿಯುಳ್ಳವರು. ಇಲ್ಲಿಯೂ ಸಮ್ಯಗ್ದೃಷ್ಟಿಗಳೂ, ಮಿಥ್ಯಾದೃಷ್ಟಿಗಳೂ ಇರುತ್ತಾರೆ. ಇವರ ಆಯುಷ್ಯವು ಒಂದು ಸಾಗರದಿಂದ ಒಂದೂವರೆ ಪಲ್ಯ ಕಾಲದವರೆಗೂ ಇರುತ್ತದೆ. ಇವರು ಬಹುಶಕ್ತಿಶಾಲಿಗಳೂ, ಸುಂದರರೂ ಇರುತ್ತಾರೆ. ಇವರು ಮನುಷ್ಯರಂತೆ ತಮ್ಮ ಲೋಕದ ತಮಗೇ ಮೀಸಲಾದ ಸ್ತ್ರೀಯರಲ್ಲಿ ಕಾಯಪ್ರವಿಚಾರವಾಗಿರುತ್ತಾರೆ. ಸಮ್ಯಗ್ದೃಷ್ಟಿ ಭವನವಾಸಿಗಳಲ್ಲಿ ಕೆಲವರು ಯಕ್ಷ ಯಕ್ಷಿಯರಾಗಿ ಧರ್ಮ ಸೇವೆ ಮಾಡುತ್ತಾರೆ. ಭವನವಾಸೀ ಲೋಕದಲ್ಲಿ ಪ್ರತಿಯೊಂದು ವಿಭಾಗದಲ್ಲೂ ಇಂದ್ರ, ಪ್ರತೀಂದ್ರ ಪರಿವಾರದವರು ಇರುತ್ತಾರೆ. ಭವನವಾಸೀ ಲೋಕದಲ್ಲಿ ಒಟ್ಟು ಏಳು ಕೋಟಿ ಎಪ್ಪತ್ತೆರಡು ಲಕ್ಷ ಅಕೃತಿಮ ಜಿನಭವನಗಳಿವೆ. ಧರಣೇಂದ್ರ ಪದ್ಮಾವತಿಯರು ಭವನವಾಸಿಗಳು.

**ವ್ಯಂತರರು** : ಅಧೋಲೋಕದ ಪಂಕಭಾಗದಲ್ಲೂ ಭೂಲೋಕದ ವಿವಿಧ ಕಡೆಗಳಲ್ಲೂ ಇರುತ್ತಾರೆ. ಇವರಲ್ಲಿ 8 ವಿಧ. 1) ಕಿನ್ನರ, 2) ಕಿಂಪುರುಷ, 3) ಮಹೋರಗ, 4) ಗಂಧರ್ವ, 5) ಯಕ್ಷ 6) ರಾಕ್ಷಸ 7) ಭೂತ 8) ಪಿಶಾಚ. ಇವರಲ್ಲೂ ಪ್ರತಿ ವಿಭಾಗದಲ್ಲೂ ಇಂದ್ರ, ಪ್ರತೀಂದ್ರರು ಇರುತ್ತಾರೆ. ಇವರು ಕಮ್ಮಿ ಎಂದರೆ 10 ಸಾವಿರ ವರ್ಷ, ಹೆಚ್ಚು ಎಂದರೆ ಒಂದು ಪಲ್ಯ ಕಾಲ. ಇವರೂ ಅಪಾರ

ಶಕ್ತಿಶಾಲಿಗಳು, ಬಹುರೂಪಿಗಳು, ಇವರಲ್ಲೂ ಸಮ್ಯಗ್ದೃಷ್ಟಿಗಳು ಇರುತ್ತಾರೆ. ಮತ್ತು ಯಕ್ಷ ಯಕ್ಷಿಯರಾಗಿ ಧರ್ಮಸೇವೆ ಮಾಡುತ್ತಾರೆ. ಮಧ್ಯಲೋಕದ ಸರೋವರ, ನಿರ್ಜನಪ್ರದೇಶ, ಹಳೆಮನೆ-ಮರ, ಕಾಡು, ಪರ್ವತ, ಸ್ಮಶಾನಗಳ ಗುಹೆಗಳಲ್ಲಿರುತ್ತಾರೆ. ಶ್ರೀ ಹ್ರೀ ಮುಂತಾದವರು ವ್ಯಂತರರು. ಇವರ ಲೋಕದಲ್ಲಿ ಅಸಂಖ್ಯಾತ ಅಕೃತ್ರಿಮ ಚೈತ್ಯಾಲಯಗಳಿವೆ. ಇವರೂ ಕಾಯ ಪ್ರವೀಚಾರರು. ಅಂದರೆ ತಮ್ಮ ಸ್ತ್ರೀಯರನ್ನು ಮನುಷ್ಯರಂತೆಯೇ ಭೋಗಿಸುತ್ತಾರೆ.

**ಜ್ಯೋತಿಷ್ಕ ಲೋಕ** : ಇಲ್ಲಿ ಜ್ಯೋತಿರ್‌ದೇವತೆಗಳು ವಾಸಿಸುತ್ತಾರೆ. ಭೂಲೋಕದ ಮೇಲೆ ಮೇರುಪರ್ವತದ ಅರ್ಧಮಟ್ಟದಲ್ಲಿ ಅಂದರೆ ಭೂಮಿಯಿಂದ 790 ಯೋಜನ ಎತ್ತರದಲ್ಲಿ ಜ್ಯೋತಿರ್‌ಲೋಕವಿದೆ. ಜ್ಯೋತಿಷ್ಕರಲ್ಲಿ ಸೂರ್ಯ, ಚಂದ್ರ, ಗ್ರಹ, ನಕ್ಷತ್ರ, ಪ್ರಕೀರ್ಣಕ (ತಾರೆ) ಎಂದು 5 ಭೇದಗಳಿವೆ : ಇವರಲ್ಲಿ ಚಂದ್ರನೇ ಇಂದ್ರ, ಸೂರ್ಯನೇ ಪ್ರತೀಂದ್ರ. ಇನ್ನಿತರರು ಇವರ ಪರಿವಾರದವರು. ಇವರೆಲ್ಲರೂ ಮೇರು ಪರ್ವತವನ್ನು ಸದಾ ಸುತ್ತುತ್ತಿರುತ್ತಾರೆ. $2^1/_2$ ದ್ವೀಪದ ಹೊರಭಾಗದ ಜೋತಿಷ್ಕರು ಸ್ಥಿರವಾಗಿರುತ್ತಾರೆ. ಇವರ ಸುತ್ತಾಟದಿಂದ $2^1/_2$ ದ್ವೀಪ ಹಗಲು ರಾತ್ರಿಗಳಾಗುತ್ತವೆ. ಇವರೂ ತಮ್ಮ ತಮ್ಮ ವಿಮಾನದಲ್ಲಿ ಸಂಚರಿಸುತ್ತಾರೆ. ವೈಕ್ರಿಯಿಕರು, ಅಮೃತಾಹಾರಿಗಳು, ಕಾಯ ಪ್ರವೀಚಾರರು, ಪ್ರಭಾಯುತರು, ಇವರಲ್ಲೂ ಸಮ್ಯಗ್ದೃಷ್ಟಿಗಳಿರುತ್ತಾರೆ. ಈ ಲೋಕದಲ್ಲಿ ಅಸಂಖ್ಯಾತವಾಗಿ ಅಕೃತ್ರಿಮ ಚೈತ್ಯಾಲಯಗಳಿರುತ್ತವೆ. ಇವರಲ್ಲಿ ಕಮ್ಮಿ ಎಂದರೆ ಒಂದು ಲಕ್ಷದಿಂದ, ಹೆಚ್ಚೆಂದರೆ 1 ಪಲ್ಯ ಕಾಲ ಆಯುಷ್ಯವಿರುತ್ತದೆ.

**ವೈಮಾನಿಕ ದೇವತೆಗಳು** : ಜ್ಯೋತಿರ್‌ಲೋಕದ ಮೇಲೆ ಮಹಾಮೇರುವಿನ ತುದಿಯ ಮೇಲೆ ಊರ್ಧ್ವಲೋಕದಲ್ಲಿ ವೈಮಾನಿಕ ದೇವತೆಗಳು ತಮ್ಮ ತಮ್ಮ ವಿಮಾನಗಳಲ್ಲಿ ಇರುತ್ತಾರೆ. ಇವೇ ಸ್ವರ್ಗಗಳು. ಇವರಲ್ಲಿ 1) ಕಲ್ಪವಾಸಿಗಳು 2) ಕಲ್ಪಾತೀತರು ಎಂದು 2 ವಿಧ.

ಕಲ್ಪವಾಸಿಗಳು 16 ಸ್ವರ್ಗಗಳಲ್ಲಿದ್ದಾರೆ. ಎರಡೆರಡರಂತೆ ಒಂದರ ಮೇಲೊಂದು ಕ್ರಮವಾಗಿ 1) ಸೌಧರ್ಮ-ಈಶಾನ 2) ಸನತ್ಕುಮಾರ-ಮಾಹೇಂದ್ರ 3) ಬ್ರಹ್ಮ-ಬ್ರಹ್ಮೋತ್ತರ 4) ಲಾಂತವ-ಕಾಪಿಷ್ಟ 5) ಶುಕ್ರ-ಮಹಾಶುಕ್ರ 6) ಶತಾರ-ಸಹಸ್ರಾರ 7) ಆನತ-ಪ್ರಾಣತ 8) ಆರಣ-ಅಚ್ಯುತ. ಎಂದು 16 ಸ್ವರ್ಗಗಳಿವೆ. ಇಲ್ಲಿ ಮೇಲೆ ಹೋದಂತೆ ಅಲ್ಲಿರುವ ದೇವತೆಗಳಿಗೆ ಆಯುಷ್ಯ, ಸುಖ,



ಅಧಿಕಾರ, ವೈಭವ, ಅವಧಿ ಹೆಚ್ಚಾಗಿರುತ್ತದೆ. ಎಲ್ಲರೂ ಅವಧಿ ಜ್ಞಾನಿಗಳು, ಅಮೃತಾಹಾರಿಗಳು. ಇವರಲ್ಲಿ 16 ಸ್ವರ್ಗಕ್ಕೆ 12 ಮಂದಿ ಇಂದ್ರರೂ, ಪ್ರತೀಂದ್ರರೂ ಇರುತ್ತಾರೆ. ದೇವತೆಗಳ ಆಯುಷ್ಯ 1 ಪಲ್ಯಕಾಲದಿಂದ 22 ಸಾಗರ ಕಾಲದವರೆಗೆ ಇರುತ್ತದೆ.

ಇವರಲ್ಲಿ ಸಾಮಾನಿಕ, ತ್ರಾಯಂತ್ರಿಂಶ, ಸೋಮ, ಯಮ, ವರುಣ, ಕುಭೇರ, ಲೋಕಪಾಲ, ಸಮತ್, ಚಂದ್ರಾ, ಜಿತು ಎಂಬ ಪರಿವಾರ-ಪರಿಷತ್ ದೇವತೆಗಳಿರುತ್ತಾರೆ.

ಇವರಲ್ಲಿ 5ನೇ ಸ್ವರ್ಗದ ಅಂತ್ಯಭಾಗದಲ್ಲಿ ಲೋಕಾಂತಿಕ ದೇವತೆಗಳಿರುತ್ತಾರೆ. ಇವರು ಬ್ರಹ್ಮಚಾರಿಗಳು, ತೀರ್ಥಂಕರರ ವೈರಾಗ್ಯ ಸಮಯದಲ್ಲಿ ಬಂದು ಅವರಿಗೆ ವೈರಾಗ್ಯಬೋಧನೆ ಮಾಡುತ್ತಾರೆ. ಸೌಧರ್ಮ ಈಶಾನದೇವತೆಗಳು ಕಾಯಪ್ರವಿಚಾರರು. ಸನತ್ಕುಮಾರ ಮಾಹೇಂದ್ರದವರು ಸ್ಪರ್ಶದಿಂದ, ಬ್ರಹ್ಮಾದಿ ನಾಲ್ಕು ಸ್ವರ್ಗದವರು ಸ್ತ್ರೀಯನ್ನು ನೋಡುವುದರಿಂದ, ಶುಕ್ರಾದಿ ನಾಲ್ಕು ಸ್ವರ್ಗದವರು ಸ್ತ್ರೀಯ ಗೀತಾದಿಗಳನ್ನು ಕೇಳುವುದರಿಂದ ಆನತಾದಿ ನಾಲ್ಕು ಸ್ವರ್ಗದವರು ತಮ್ಮ ಸ್ತ್ರೀಯರನ್ನು ಸ್ಮರಣ ಮಾತ್ರದಿಂದ ತೃಪ್ತರಾಗುತ್ತಾರೆ. ಅಲ್ಲಿಂದ ಮುಂದಿನ ಸ್ವರ್ಗಗಳಲ್ಲಿ ಸ್ತ್ರೀಯರೇ ಇಲ್ಲ. ಎಲ್ಲರೂ ಬ್ರಹ್ಮಚಾರಿಗಳೇ.

**ಕಲ್ಪಾತೀತರು** :– 16ನೇ ಸ್ವರ್ಗದಿಂದ ಮೇಲಿರುವ ದೇವತೆಗಳು ಕಲ್ಪಾತೀತರು. ಅಲ್ಲಿ ಪ್ರತಿಯೋರ್ವರು ಅಹಮಿಂದ್ರರು, ಇಲ್ಲಿ ಮೇಲು ಕೀಳುಗಳಿಲ್ಲ.

ಈ ಸ್ವರ್ಗಗಳೂ ಮೂರು ಹಂತಗಳು ಒಂದರ ಮೇಲೊಂದರಂತೆ ಇವೆ.

1) ನವಗ್ರೈವೇಯಿಕ ಅಂದರೆ 3-3ರಂತೆ 3 ಅಂತಸ್ತುಗಳು. 2) ನವಾಣುದಶ, ಇವೂ 3-3ರಂತೆ 3 ಅಂತಸ್ತುಗಳೂ ಮತ್ತು 3) ಪಂಚಾಣುತ್ತರೆ. ಇವು ನಾಲ್ಕು ದಿಕ್ಕಿನಲ್ಲಿ ಒಂದೊಂದರಂತೆಯು ಮಧ್ಯೆ ಒಂದೂ ಇವೆ.

1) ಇವು ಕ್ರಮವಾಗಿ, ನವಗ್ರೈವೇಯಿಕದಲ್ಲಿ ಸುದರ್ಶನ, ಅಮೋಘ, ಸುಪ್ರಬುದ್ಧ - 3, ಯಶೋಧರ, ಸುಭದ್ರ, ವಿಶಾಲ - 3, ಸಮನಸ, ಸೌಮನಸ, ಪ್ರೀತಿಂಕರ - 3.

2) ನವಾಣುದಿಶಾದಲ್ಲಿ 3-3-ರಂತೆ 9 ಇವೆ. ಆದಿತ್ಯ-ಅರ್ಚಿ, ಅರ್ಚಿಮಾಲಾ - 3, ವೈರೋಚನ - ಪ್ರಭಾಸ - ಅರ್ಚಿಪ್ರಭಾ - 3, ಅರ್ಚಿಮಧ್ಯ - ಅರ್ಚಿರಾವರ್ತ - ಅರ್ಚಿವಿಶಿಷ್ಟ - 3

3) ಅನುತ್ತರೆಯಲ್ಲಿ - 5 ಇವೆ.

ವಿಜಯ, ವೈಜಯಂತ, ಜಯಂತ, ಅಪರಾಜಿತ ಮತ್ತು ಸರ್ವಾರ್ಥಸಿದ್ಧಿ ಎಂಬ ಸ್ವರ್ಗಗಳಿವೆ.

ಸರ್ವಾರ್ಥಸಿದ್ಧಿಯ ಅಹಮಿಂದ್ರರ ಆಯುಷ್ಯ 33 ಸಾಗರವಿರುತ್ತದೆ.

ಕಲ್ಪಾತೀತರೆಲ್ಲಾ ಸಮ್ಯಗ್ದೃಷ್ಟಿಗಳು.

ಸೌಧರ್ಮ ಈಶಾನೇಂದ್ರರು, ಶಚೀದೇವಿಯರು, ಸೋಮ, ಯಮ, ವರುಣ, ಕುಭೇರ, ಸನತ್ಕುಮಾರ, ದಕ್ಷಿಣೇಂದ್ರರೂ, ಲೋಕಾಂತಿಕ ದೇವತೆಗಳೂ, ಸರ್ವಾರ್ಥಸಿದ್ಧಿಯ ಅಹಮಿಂದ್ರರೂ, ತೀರ್ಥಂಕರರ ಯಕ್ಷ ಯಕ್ಷಿಯರೂ, ತಂದೆ ತಾಯಿಯರೂ ಮುಂದಿನ ಭವದಲ್ಲಿ ಮುಕ್ತರಾಗುತ್ತಾರೆ.

ದೇವತೆಗಳಿಗೆ ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಈಶತ್ವ, ವಶಿತ್ವ, ಪ್ರಾಪ್ತಿ, ಪ್ರಾಕಾಮ್ಯ ಎಂಬ ಎಂಟು ರೀತಿಯ ವೃದ್ಧಿಗಳಿರುತ್ತವೆ. ದೇವತೆಗಳೆಲ್ಲಾ ಪುಣ್ಯವಿಶೇಷದಿಂದ ದೇವಲೋಕದಲ್ಲಿ ಜನ್ಮ ತಾಳಿರುತ್ತಾರೆ. ಮರಣ ಹೊಂದುವಾಗ 6 ತಿಂಗಳು ಮುಂಚೆಯೇ ಗೊತ್ತಾಗುತ್ತದೆ. ಅವರವರ ಭಾವನೆಗಳಿಗೆ ತಕ್ಕಂತೆ ತಿರ್ಯಂಚ ಮಾನವ ಗತಿಗಳಲ್ಲಿ ಜನ್ಮ ತಾಳುತ್ತಾರೆ.

ದೇವತೆಗಳು ಸೀದಾ ನರಕದಲ್ಲೂ, ನಾರಕಿಗಳು ಸೀದಾ ಸ್ವರ್ಗದಲ್ಲೂ ಹುಟ್ಟುವುದಿಲ್ಲ. ಮಾನವರೂ ಮತ್ತು ತಿರ್ಯಂಚರು ಕರ್ಮಾನುಸಾರ ಯಾವ ಗತಿಯಲ್ಲಿಯಾದರೂ ಹುಟ್ಟಬಹುದು.

**ಸಿದ್ಧಲೋಕ** :- ಇದು ಲೋಕದ ಅತ್ಯಂತ ಮೇಲೆತ್ತುತ್ತ ತುದಿಯಲ್ಲಿ ಇರುತ್ತದೆ. ಇದರ ವಿಸ್ತಾರ 45 ಲಕ್ಷ ಯೋಜನ. ಇದು ಅರ್ಧ ಚಂದ್ರನ ಆಕಾರದಂತೆ ಇದೆ. ಇಲ್ಲಿ ಮುಕ್ತಾತ್ಮರಾದ ಸಿದ್ಧಪರಮೇಷ್ಠಿಗಳು ಇದ್ದಾರೆ. ಇಲ್ಲಿ ಅನಂತಾನಂತ ಸಿದ್ಧಾತ್ಮರಿದ್ದಾರೆ. ಇವರೆಲ್ಲಾ ಅಶರೀರಿಗಳು. ಪರಿಶುದ್ಧಾತ್ಮರು. ಇವರೆಲ್ಲಾ ಮನುಷ್ಯಭವದಲ್ಲಿ ಮುನಿಗಳಾಗಿ ತಪೋಧ್ಯಾನಗಳಿಂದ ಕರ್ಮಕ್ಷಯ ಮಾಡಿ ಸಿದ್ಧಾತ್ಮರಾಗಿ ಮುಕ್ತಿ ಲೋಕವನ್ನು ತಲುಪಿರುತ್ತಾರೆ. ಮತ್ತೆ ಇವರು ಯಾವ ಜನ್ಮವನ್ನೂ ತಾಳುವುದಿಲ್ಲ. ಇವರಿಗೆ ಅನಂತಜ್ಞಾನ, ಅನಂತದರ್ಶನ, ಅನಂತ ಸುಖ, ಅನಂತಶಕ್ತಿ, ಅವ್ಯಾಬಾಧತ್ವ, ಸೂಕ್ಷ್ಮತ್ವ, ಅವಗಾಹನತ್ವ, ಅಗುರುಲಘುತ್ವ ಎಂಬ ಎಂಟು ಗುಣಗಳಿರುತ್ತವೆ. ಇವೆಲ್ಲಾ ಆತ್ಮೀಕವಾದ ಸ್ವಾಭಾವಿಕ ಗುಣಗಳು.



ಈ ಮೂರೂ ಲೋಕದ ಹೊರಭಾಗದಲ್ಲಿ ಕೇವಲ ಅನಂತಾಕಾಶ ಮಾತ್ರ ಇದೆ.

ಇದಿಷ್ಟೂ ಸಂಕ್ಷೇಪವಾದ ತ್ರಿಲೋಕದ ವಿಚಾರವಾಗಿದೆ. ವಿವರವನ್ನು ತ್ರಿಲೋಕಸಾರಾದಿ ಗ್ರಂಥಗಳನ್ನು ಸ್ವಾಧ್ಯಾಯ ಮಾಡಬೇಕು.

# 73. ನೋಂಪಿಗಳು

'ರಾಗದ್ವೇಷ ವಿನಿವೃತ್ತೈ ಚರಣಂ ಪ್ರತಿಪದ್ಯತೇ' ಎಂದು ಸ್ವಾಮಿ ಸಮಂತ ಭದ್ರಾಚಾರ್ಯರು ಹೇಳಿದ್ದಾರೆ. ಅಂದರೆ ರಾಗದ್ವೇಷಗಳ ನಿವಾರಣೆಗಾಗಿ ಚಾರಿತ್ರ್ಯವನ್ನು ಪಾಲಿಸುತ್ತೇನೆ. ವಿಶಾಲವಾದ ಅರ್ಥವ್ಯಾಪ್ತಿಯಿಂದ ಕೂಡಿರುವ ಈ ಮಾತನ್ನು ಮಾನವರ ಸುಖಶಾಂತಿಯ ಸಂದೇಶವೆಂದು ಹೇಳಿದ್ದಾರೆ. ರಾಗದ್ವೇಷಗಳು ಕಡಿಮೆಯಾಗುತ್ತಾ ಹೋದಂತೆ ದುಃಖಾದಿಗಳಿಗೆ ಮೂಲಕಾರಣವಾದ ಹಿಂಸಾದಿ ಪಾಪಕೃತ್ಯಗಳಿಂದ ದೂರವಾಗುತ್ತಾ ಅಹಿಂಸಾದಿ ಮಾನವೀಯ ಗುಣಗಳು ಪ್ರಕಟವಾಗುತ್ತವೆ. ಆಗ ಮನ, ವಚನ, ಕಾಯಗಳ ಕ್ರಿಯೆಯು ಶುಭವಾಗುತ್ತಾ ಹೋಗಿ ಪುಣ್ಯಪ್ರಾಪ್ತಿಯೂ, ತನ್ಮೂಲಕ ಸುಖಶಾಂತಿನೆಮ್ಮದಿಗಳೂ ದೊರೆಯುತ್ತವೆ. ದುಃಖಾದಿಗಳಿಗೆ ಕಾರಣವಾದ ರಾಗದ್ವೇಷವನ್ನು ದೂರ ಮಾಡಲು ಆಚಾರಶೀಲನಾಗ ಬೇಕೆಂಬ ಆಚಾರ್ಯರವಾಣಿ ನಿರ್ವಿವಾದವಾದುದು.

'ಚರಣಂ' ಎಂಬ ಶಬ್ದದಲ್ಲಿ ಆಚಾರ, ವಿಚಾರ, ಶೀಲ, ಸಮ್ಯಮ, ತಪ, ನೇಮ ನಿಯಮ, ನಿಷ್ಠೆ, ವ್ರತ ನೋಂಪಿ ಎಂಬ ಅರ್ಥವೂ ಅಡಕವಾಗಿದೆ. ಇಹಪರಗಳಲ್ಲಿ ಸುಖಶಾಂತಿಯನ್ನು ದೊರೆಕಿಸುವ, ಪ್ರಸಿದ್ಧವೂ ಪುಣ್ಯದಾಯಕವೂ ಆದ ವಿಧಿ ವಿಧಾನವೇ ನೋಂಪಿ. ವ್ರತಾಚಾರಣೆಯೆಂಬುದರ ಮತ್ತೊಂದು ಹೆಸರು 'ನೋಂಪಿ' ಅಚ್ಚ ಕನ್ನಡ ಪದ.

ರಾಗ, ದ್ವೇಷ, ದುಃಖ, ದಾರಿದ್ರ್ಯ, ಕಷ್ಟಕಾರ್ಪಣ್ಯ, ರೋಗ ರುಜಿನಾದಿಗಳೂ ಉತ್ಪತ್ತಿಯಾಗುವ, ಪಾಪ ಕರ್ಮಗಳನ್ನು ನಾಶಮಾಡುವ, ಹಾಗೂ ಸುಖಶಾಂತಿ, ತೃಪ್ತಿ, ಸಾತ್ವಿಕತೆ, ಆರೋಗ್ಯ ಮುಂತಾದುವುಗಳನ್ನು ದೊರಕಿಸುವ ದಿವ್ಯವಾದ

ಔಷಧಿಯೇ ನೋಂಪಿ. ಇದು ಆಚರಿಸಬೇಕಾದುದು. ಬರೀ ಹೇಳಿ ಮುಗಿಸುವಂತಹುದಲ್ಲ. ನೋಂಪಿಯೆಂಬುದು ಆಚರಣೆಯ ಮುಖಾಂತರ ಪ್ರಕಟವಾಗುವ ಧರ್ಮದ ಸ್ವರೂಪ. ಪೂಜಾರಾಧನೆಗಳು ಒಂದು ನಿರ್ದಿಷ್ಟವಾದ ಪರ್ವಗಳಲ್ಲಿ ಶಾಸ್ತ್ರೋಕ್ತವಾಗಿ ಕಟ್ಟುನಿಟ್ಟಿನಿಂದ ಆಚರಿಸಲ್ಪಡುತ್ತವೆ. ಇದು ಸತ್ಕಾಲಕ್ಷೇಪದ, ಸಜ್ಜನ ಸಂಗತಿಯ ಹಾಗೂ ಸುಸಂಸ್ಕೃತಿಯ ಪರಮಾವಧಿಯಾಗಿದೆ.

ನೋಂಪಿಯ ಆಚರಣೆಯಲ್ಲಿ ದೇವದರ್ಶನ, ಪೂಜೆ, ಆರಾಧನೆ, ಜಪ, ಧ್ಯಾನ, ಉಪವಾಸ, ಸ್ವಾಧ್ಯಾಯ, ದಾನ, ಮಂತ್ರಪಠಣ. ಇವುಗಳ ಜೊತೆಗೆ ಭಕ್ತಿ, ನಿಷ್ಠೆ, ಸಾತ್ವಿಕತೆ, ಶುಭ್ರತೆ, ಸರಳವೃತ್ತಿ, ಸಹಕಾರ, ಬ್ರಹ್ಮಚರ್ಯಾದಿ ಶೀಲ ಪಾಲನೆ ಮುಂತಾದ ಸತ್ ಕ್ರಿಯೆಗಳು ಇದ್ದೇಇರುತ್ತವೆ. ಇಂಥಹ ಶುಭವಾತಾವರಣದಲ್ಲಿ ಕೆಲಕಾಲವಾದರೂ ಇರುವುದರಿಂದ ಮನ ವಚನಕಾಯಗಳ ಕ್ರಿಯೆಯೂ ಶುಭವಾಗಿರುತ್ತದೆ. ಇಲ್ಲಿ ರಾಗದ್ವೇಷಕ್ಕೆ ಎಡೆಯಿಲ್ಲವಾಗಿ ಏಕಕಾಲದಲ್ಲಿ ಪಾಪ ಕರ್ಮಗಳ ನಿರ್ಜರೆಯೂ, ಪುಣ್ಯಾಸ್ರವವೂ ಸಹಜವಾಗಿಯೇ ಆಗುವುದು. ಹೀಗಾಗಿ ನೋಂಪಿಯೂ ಒಂದು ರೀತಿಯಿಂದ ವೈಜ್ಞಾನಿಕ ಕ್ರಿಯೆಯೇ ಆಗಿದೆ. ಆಗ ತಾನಾಗಿಯೇ ದುಃಖನಿವಾರಣೆ, ಶಾಂತಿ ಸಮಾಧಾನಗಳು ದೊರೆಯುತ್ತವೆ. ಇವು ತಾವು ಮಾಡುವ ಭಕ್ತಿ, ಭಾವನೆ, ನಿಷ್ಠೆನಿಯಮಗಳನ್ನು ಅವಲಂಬಿಸುತ್ತದೆ. ಏನೇ ಆದರೂ ಇದು ವ್ಯರ್ಥವಾಗುವುದಿಲ್ಲ. ಇವುಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಸತ್ಫಲ ಉಂಟಾಗಿಯೇ ತೀರುತ್ತದೆ.

ಇಂದು ಯಾರಾದರೂ ಸುಖವಾಗಿ ನೆಮ್ಮದಿಯಿಂದ ನಗುತ್ತಾ ನಲಿಯುತ್ತಾ ಇದ್ದರೆ ಅವರು ಹಿಂದೊಂದು ಜನ್ಮದಲ್ಲಿ ಪೂಜೆ, ನೋಂಪಿಗಳನ್ನು ಮಾಡಿಯೇ ಇರುತ್ತಾರೆ. ಅಂಥಹವರನ್ನು ಕಂಡು 'ಇದು ಪೂಜೆಯ ಫಲ' ಎಂದು ಜನ ಅಂದುಕೊಳ್ಳುವುದುಂಟು. ಇದನ್ನು ಬಹು ಹಿಂದೆಯೇ ಕುಂದ ಕುಂದಾ ಚಾರ್ಯರು 'ದಾಣಂ ಪೂಯು ಮೋಕ್ಖಂ' ಎಂದು ದಾನ ಪೂಜೆಗಳೇ ಜೀವನದಲ್ಲಿ ಮುಖ್ಯವಾದ ಕ್ರಿಯೆಗಳೆಂದು ಸಾರಿದ್ದಾರೆ. ಈ ಎರಡನ್ನು ಮುಖ್ಯವಾಗಿ ನೋಂಪಿಗಳ ಆಚರಣೆಯಲ್ಲಿ ಕಾಣಬಹುದು. ಇದನ್ನೇ ಇನ್ನೋರ್ವ ಆಚಾರ್ಯರು ಹೀಗೆ ಹೇಳಿದ್ದಾರೆ:-

ಪುಣ್ಯಂ ಜಿನೇಂದ್ರ ಚರಣಾರ್ಚನ ಸಾಧ್ಯ ಮಾದ್ಯಂ।
ಪುಣ್ಯಂ ವ್ರತಾನು ಚರಣಾದುಪವಾಸ ಯೋಗಾತ್॥
ಪುಣ್ಯಂ ಸುಪಾತ್ರಗತ ದಾನ ಸಮಿತ್ಥಮೇತತ್।
ಪುಣ್ಯಾರ್ಥಿನಾಂ ಇತಿಚತುಷ್ಟಯಮರ್ಜನೀಯಂ॥



ಪುಣ್ಯ ಸಂಪಾದನೆಗೆ ಜಿನೇಂದ್ರ ಪೂಜೆ. ವ್ರತ. ಉಪವಾಸ, ಸತ್ಪಾತ್ರಕ್ಕೆ ದಾನ ಎಂಬ ನಾಲ್ಕು ಮುಖ್ಯ ಕ್ರಿಯೆಗಳು ಅತ್ಯಾವಶ್ಯಕ ಎಂದು ಸಾರಿದ್ದಾರೆ. ಈ ನಾಲ್ಕು ಕ್ರಿಯೆಗಳು ನೋಂಪಿಯ ಆಚರಣೆಯಲ್ಲಿ ಸಮಾವೇಶವಾಗಿವೆಯಾದ್ದರಿಂದ ನೋಂಪಿ ಎಂಬುದು ಪುಣ್ಯ ಸಂಪಾದನೆಗೆ ಅತ್ಯುತ್ತಮ ಸಾಧನ.

ತೀರ್ಥಂಕರರ ಪದವಿಯ ಪ್ರಾಪ್ತಿಗೂ, ಹಿಂದಿನ ಒಂದು ಭವದಲ್ಲಿ "ಶೋಡಶ ಕಾರಣ ಭಾವನಾ' ಎಂಬ ನೋಂಪಿಯನ್ನು ಮಾಡಿಯೇ ಇರಬೇಕು, ಎಂದಿರುವುದರಿಂದ ಅನಾದಿಕಾಲದಿಂದಲೂ ತೀರ್ಥಂಕರರ ಜನ್ಮವಾಗುತ್ತಾ ಇದ್ದು ಅವರು ಜಗತ್ತಿಗೆ ಧರ್ಮ ಮಾರ್ಗದ ಬೋಧನೆ ಮಾಡಿ ಮುಕ್ತಿ ಮಂದಿರದತ್ತ ಸಾಗುತ್ತಾ ಇರುವುದರಿಂದ ಈ ನೋಂಪಿಯ ಕ್ರಿಯಾ ಚರಣೆಯೂ ತುಂಬಾ ಪ್ರಾಚೀನವಾದುದು. ಇವುಗಳ ಉಲ್ಲೇಖ, ಶಾಸನಗಳಲ್ಲಿ, ಪುರಾಣಗಳಲ್ಲಿ ಇತಿಹಾಸ ಗಳಲ್ಲಿ ಇಂದಿಗೂ ದೊರೆಯುತ್ತವೆ.

ದೇವೇಂದ್ರನು ಜಿನಶಿಶುವಿಗೆ ಜನ್ಮಾಭಿಷೇಕವನ್ನು ಮಾಡಿ ಬಾಲ ಲೀಲೋತ್ಸವವಾದ ನಂತರ ಶಿಶುವನ್ನು ಮಾತಾಪಿತರ ವಶಕ್ಕೊಪ್ಪಿಸುವಾಗ, 'ದೊರೆ ನಿಮಗಿಲ್ಲ ಈ ಭುವನದೊಳ್ ಪೆರರಾರ್‌ಸಮರ್ ನೀವೀರ್ವರೇ ನೋಂತಿರೀ ಜಗದ್ಗುರುವಿಗೆ, ಪಿತೃದ್ವಯಂಗಳೆನಿಸಲ್ ಅದರಿಂದ ನೀವೇ ಪೂಜ್ಯರೆಮಗಿಂದು' ಎಂದು ಅವರನ್ನು ಕೊಂಡಾಡಿ ಪೂಜೆಮಾಡಿ ವರ್ಣಿಸಿದ್ದಾನೆಂದ ಮೇಲೆ ನೋಂಪಿಯ ಮಹಿಮೆ ಅಸಾಧಾರಣವಾದುದು. ಅಪಾರವಾದುದು. ಅಚಿಂತ್ಯವಾದುದು. ಅಮರವಾದುದು.

ನೋಂಪಿಯ ವಿಧಿ ವಿಧಾನಗಳು ಮಹಾಪುರಾಣ, ಶ್ರಾವಕಾಚಾರ, ವ್ರತಕಥಾಕೋಶ, ಆರಾಧನಾಕಥಾ-ಕೋಶ, ಕಥಾಸರಿತ್ಸಾಗರ, ಹರಿವಂಶ, ವಡ್ಡಾರಾಧನೆ ಮುಂತಾದ ಗ್ರಂಥಗಳಲ್ಲಿ ಸಿಗುತ್ತದೆ. ಅವುಗಳಿಂದ ಕೆಲವು ನೋಂಪಿಗಳನ್ನು ಸಂಗ್ರಹಿಸಿ ಪದ್ಮರಾಜ ಪಂಡಿತರೂ, ಪದ್ಮನಾಭಶರ್ಮರೂ, ಹಂಪನಾರವರೂ ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ. ಅನಂತ ನೋಂಪಿ, ಶುಕ್ರವಾರ ನೋಂಪಿ, ಶೋಡಶ ಕಾರಣನೋಂಪಿ, ದಶಲಕ್ಷಣ, ಶ್ರೀಫಲ, ಸೂತಕಪರಿಹಾರ, ಸಿದ್ಧಚಕ್ರ, ಇತ್ಯಾದಿ ಇತ್ಯಾದಿ ಹಲವುತರದ ನೋಂಪಿಗಳುಂಟು. ಪ್ರತಿಯೊಂದಕ್ಕೂ ಒಂದೊಂದು ಹಿನ್ನೆಲೆಯುಂಟು. ಮಾಡುವ ವಿಧಾನವುಂಟು. ಆ ವಿಧಾನದಲ್ಲಿ ಪ್ರಾರಂಭ, ಅನುಷ್ಠಾನ, ಅವಧಿ, ಅಂತ್ಯ-ಉದ್ಯಾಪನೆ ಎಂಬ ಹಂತಗಳುಂಟು. ಒಂದೊಂದು ಇಂತಹ ದಿನಗಳಲ್ಲೇ ಪ್ರಾರಂಭಿಸಬೇಕು. ಇಂತಿಷ್ಟು ದಿನ, ಇಂತಿಷ್ಟು ತಿಂಗಳು ಅಥವಾ ವರ್ಷ ಮಾಡಬೇಕು. ಅನಂತರ ಉದ್ಯಾಪನೆ ಎಂಬ ಕಾರ್ಯಮಾಡಿ ನೋಂಪಿಯನ್ನು

ಒಪ್ಪಿಸಬೇಕು. ಆಗ ಸಾಮೂಹಿಕವಾಗಿ ಈ ಕ್ರಿಯೆ ಮಾಡಿ ದಾನ ಧರ್ಮ ಪ್ರಭಾವನೆಯನ್ನೂ ಮಾಡಬೇಕು. ಈಗಿರುವ ಹಲವು ಜಿನಮಂದಿರಗಳೂ, ಹಲವು ಜಿನಬಿಂಬಗಳೂ ಶಾಸ್ತ್ರಗಳೂ ಇಂತಿಂತಹ ಉದ್ಯಾಪನಾಕಾಲದಲ್ಲಿ ತಾವು ನಿರ್ವಿಘ್ನವಾಗಿ ನೋಂಪಿಯನ್ನು ಮಾಡಿಮುಗಿಸಿ ನೆಮ್ಮದಿ ತೃಪ್ತಿಪಟ್ಟುದರ ಸಂಕೇತ, ಸ್ಮಾರಕಗಳಾಗಿವೆ. ಇಂಥಹ ಪ್ರಭಾವನೆಗಳನ್ನು ಕಂಡ ಹಲವು ಮಂದಿ ನಾಸ್ತಿಕರೂ ಸಹ, ದೇವಗುರುಧರ್ಮಗಳಲ್ಲಿ ವಿಶ್ವಾಸ ವಿಟ್ಟು ಪಾಲಿಸುವ ಪ್ರೇರಣೆಗೊಂಡಿರುವ ಹಲವು ಉದಾಹರಣೆಗಳೂ ಇವೆ.

ಈ ಹಲವು ನೋಂಪಿ ಕಥೆಗಳನ್ನು ಅವಲೋಕಿಸಿದಾಗ ಗೊತ್ತಾಗುವುದೇನೆಂದರೆ, ತಮ್ಮ ತಮ್ಮ ದುರಿತ ದುಃಖಾದಿಗಳು ದೂರವಾಗಲೂ, ಜೀವನದಲ್ಲಿ ಸುಖ ಶಾಂತಿ ಕಾಣಲೂ, ಜೀವನ ಸಾರ್ಥಕವಾಗಲೂ ಇಹಪರಗಳಲ್ಲಿ ಆತ್ಮನ ಉನ್ನತ ಗುಣಗಳು ಪ್ರಕಟವಾಗಲೆಂದೂ ಮಾಡಿರುವ ಸತ್ಕ್ರಿಯೆಗಳೇ ಆಗಿವೆ.

ನೋಂಪಿಗಳನ್ನು ತನ್ನ ಶಕ್ತಿಗೆ ತಕ್ಕಂತೆ ಮಾಡಲು ಅವಕಾಶವಿದೆ ಇವುಗಳಲ್ಲಿ ಕೆಲವು ಒಂದೇ ದಿನ ಆಚರಿಸುವಂತಹವುಗಳಾದರೆ ಮತ್ತೆ ಕೆಲವು ಜೀವನಾವಧಿ ಹಾಗೂ ಕೆಲವು ವರ್ಷಗಳು ಒಂದು ನಿರ್ದಿಷ್ಟವಾದ ಪರ್ವತಿಥಿಗಳಲ್ಲಿ ಆಚರಿಸುವಂತಹವುಗಳಾಗಿವೆ. ಕೆಲವಂತೂ ತಾವು ಮಾಡಿಮುಗಿಸಿದನಂತರ ತಮ್ಮ ಮಕ್ಕಳು ಅನಂತರ ಅವರ ಮಕ್ಕಳು ಹೀಗೆ ವಂಶ ಪಾರಂಪರ್ಯವಾಗಿ ನೋಂಪಿ ದಾರವನ್ನು ಕೊಟ್ಟು ಮಾಡಿಸುವಂತಹವೂ ಇವೆ. ಅನಂತ ನೋಂಪಿ ಇದಕ್ಕೆ ಉದಾಹರಣೆಯಾಗಿದೆ. ಶ್ರೇಣಿಕ ಮಹಾರಾಜನ ಪತ್ನಿ ಚೇಳಿನೀದೇವಿ ವರ್ಷವಿಡೀ ಒಂದಲ್ಲ ಒಂದು ನೋಂಪಿಯನ್ನು ಮಾಡುತ್ತಲೇ ಇದ್ದಳಂತೆ. ಶ್ರೇಣಿಕನೂ ಮಹಾವೀರ ತೀರ್ಥಂಕರರ ಸನ್ನಿಧಿಯಲ್ಲಿ ಶೋಡಷಕಾರಣ ಭಾವನಾ ನೋಂಪಿಯನ್ನು ಭಾವಿಸಿ ಮುಂದಿನ ಪ್ರಥಮ ತೀರ್ಥಾಧೀಶನಾಗುವ ಪುಣ್ಯಗಳಿಸಿ ಮುಂದಿನ ಪ್ರಥಮ ತೀರ್ಥಾಧೀಶನಾಗುವ ಪುಣ್ಯಗಳಿಸಿದನು 'ಭಾವನಂ ಭವನಾಶನಂ' ಅಲ್ಲವೆ?

ಒಂದು ನಿದರ್ಶನ: ಕರ್ಮವಶಾತ್ ಮದನ ಸುಂದರಿ ಎಂಬ ರಾಜಕುಮಾರಿ ತಂದೆಯ ಕೋಪಕ್ಕೆ ಈಡಾಗಿ ಶ್ರೀಪಾಲನೆಂಬ ಕುಷ್ಠರೋಗಿಯನ್ನು ಮದುವೆಯಾಗಬೇಕಾಗುತ್ತದೆ. ಆಕೆ ಸಹನೆಯಿಂದ ಪತಿಸೇವೆ ಮಾಡುತ್ತಾಳೆ. ತನ್ನಪತಿ ಹಾಗೂ ಅವನ ಏಳುನೂರು ಮಂದಿ ಕುಷ್ಠರೋಗೀ ಪರಿವಾರಕ್ಕೆ ಒದಗಿರುವ ಕಷ್ಟ ನಿವಾರಣೆಗೆ ಉಪಾಯವನ್ನು ಅರಸುತ್ತಾ ಅವರೊಂದಿಗೆ ದೇಶವಿದೇಶಗಳಲ್ಲಿ ಅಲೆಯುತ್ತಾಳೆ, ಕಡೆಗೊಮ್ಮೆ ಒಂದು ಜಿನ ಮಂದಿರದಲ್ಲಿದ್ದ ಓರ್ವ ಜಿನ ಮುನಿಗಳಲ್ಲಿ ತನ್ನ ಸ್ಥಿತಿಯನ್ನು ಹೇಳಿಕೊಳ್ಳುತ್ತಾಳೆ. ಕಾಲಲಬ್ಧಿ ಒದಗಿತ್ತು, ಗುರುಗಳ ಆಶೀರ್ವಾದ



ಹಾಗೂ ಮಾರ್ಗದರ್ಶನ ಸಿಕ್ಕಿತು. ಆಗ ಮಂದಿರದಲ್ಲಿ ಪ್ರಾರಂಭವಾಗುವ ಅಷ್ಟಾಹ್ನಿಕದಲ್ಲಿ ಸಿದ್ಧಚಕ್ರಾರಾಧನೆಯೂ ನಡೆಯುವುದಿತ್ತು. ಆ ನೋಂಪಿಯನ್ನು ಹಿಡಿದು, ಭಾವ ಸಹಿತ ಯಥಾಶಕ್ತಿ ಪಾಲಿಸಲು ಗುರುಗಳು ಹೇಳಿ ಶ್ರಾವಕರಿಂದ ವ್ಯವಸ್ಥೆ ಮಾಡಿಸುತ್ತಾರೆ. ಅದರಂತೆ ಆಕೆ ನೋಂಪಿಯನ್ನು ಯಥಾವಿಧಿಪೂರ್ವಕ ಭಕ್ತಿಭಾವದಿಂದ ಮಾಡುತ್ತಾ ನಿತ್ಯವೂ ಜಿನ ಗಂಧೋದಕವನ್ನು ತೆಗೆದುಕೊಂಡುಹೋಗಿ ತನ್ನಪತಿಗೂ ಆತನ ಪರಿವಾರದವರಿಗೂ ಲೇಪಿಸುತ್ತಾ ಇದ್ದಳು. ಚಮತ್ಕಾರವೆಂಬಂತೆ ಅವರೆಲ್ಲರ ಕುಷ್ಠರೋಗ ನಿವಾರಣೆಯಾಯಿತು. ಜೊತೆಗೆ ಅವರ ಕಷ್ಟನಿವಾರಣೆಯೂ ಆಗಿ ಇಹಪರಗಳಲ್ಲಿ ಸುಖಶಾಂತಿ ನೆಲಸಿದುವು. ತಮ್ಮ ಆತ್ಮಕಲ್ಯಾಣವನ್ನು ಮಾಡಿ ಕೊಂಡರು. ಇದು ಸಿದ್ಧ ಚಕ್ರಾರಾಧನಾ ನೋಂಪಿಯ ಫಲ.

ನೋಂಪಿಯ ಫಲ ಅಸಾಧಾರಣವಾದುದು. ಅಷ್ಟಾಹ್ನಿಕ ಅನಂತನೋಂಪಿ, ಜೀವದಯಾಷ್ಟಮಿ ನೋಂಪಿಗಳು ಬಹುಪ್ರಸಿದ್ಧವಾದವುಗಳು, ಆದರೂ ಸಿದ್ಧಚಕ್ರಾರಾಧನೆ, ಶೋಡಶಕಾರಣ ಭಾವನಾ, ದಶ ಧರ್ಮ ಇವು ಪ್ರಾಚೀನವೂ ಆತ್ಮ ಕಲ್ಯಾಣಕ್ಕೆ ಅನು ಕೂಲವೂ ಆಗಿವೆ.

ನೋಂಪಿಗಳ ಆಚರಣೆಯಲ್ಲಿ ದೇವಪೂಜಾದಿ ಷಟ್ ಕ್ರಿಯೆಗಳೂ ಸಮಾವೇಶವಾಗಿವೆ. ಗೃಹಸ್ಥನು ತನ್ನ ಶಕ್ತಿಗೆ ಅನುಸರಿಸಿ, ವ್ರತನೋಂಪಿಗಳನ್ನು ಮಾಡಿ, ಅವಕಾಶ ದೊರೆತಾಗ ತ್ಯಾಗಿಯಾಗಿ ಅಲ್ಲಿಯೂ ಆಚಾಮ್ಲ ವರ್ಧನಾದಿ ಹಲವು ನೋಂಪಿಗಳನ್ನು ಮಾಡುವ ಅವಕಾಶವಿದೆ. ಅವನ್ನು ಮಾಡಿ ತಮ್ಮ ಆತ್ಮಕಲ್ಯಾಣ ಮಾಡಿಕೊಳ್ಳಬಹುದು. ಪರಮ ಪೂಜ್ಯ ಚಾರಿತ್ರ ಚಕ್ರವರ್ತಿ ಶ್ರೀ ಶಾಂತಿಸಾಗರ ಮುನಿಮಹಾರಾಜರು ಹಲವು ಅಂಥಹ ನೋಂಪಿಗಳನ್ನು ಮಾಡಿದ್ದರಂತೆ. ಈಗಲೂ ಹಲವುಮಂದಿ ಶ್ರಾವಕರೂ, ತ್ಯಾಗಿಗಳೂ, ತಮ್ಮ ಶಕ್ತ್ಯಾನುಸಾರ ಬಹುಭಕ್ತಿ ಭಾವನೆಯಿಂದ ಸಂತೋಷವಾಗಿ ನೋಂಪಿಗಳನ್ನು ಮಾಡುತ್ತಿರುವುದನ್ನು ಕಣ್ಣಾರೆ ಕಾಣಬಹುದು. ಹೀಗಾಗಿ ವ್ರತನೋಂಪಿಗಳು. ಆತ್ಮಕಲ್ಯಾಣದ ಸಾಧನಗಳಾಗಿವೆ. ಈ ಲಬ್ಧಿಯನ್ನು ಒದಗಿಸಿಕೊಂಡವರ ಜನ್ಮ ಸಾರ್ಥಕ. ಈ ವ್ರತ ನೋಂಪಿಗಳಿಗೆಲ್ಲಾ ವೈಜ್ಞಾನಿಕವಾದ ಹಿನ್ನೆಲೆಯಿದೆ. ಆದ್ದರಿಂದ ಆರೋಗ್ಯದಾಯಕ, ಮನೋನೆಮ್ಮದಿ ಉಂಟಾಗುತ್ತವೆ. ಇವಾವೂ ಮೂಢ ನಂಬಿಕೆಯಿಂದಾಗಲೀ. ಅಂಧಶ್ರದ್ಧೆಯಿಂದಾಗಲೀ ಮಾಡುವಂತಹವುಗಳಲ್ಲ, ಇವನ್ನು ನಂಬಿ ತಿಳಿದು ಆಚರಿಸುವಂತಹವುಗಳೇ ಆಗಿವೆ. ಶ್ರದ್ಧಾ ಭಕ್ತಿಭಾವನೆಗಳಿಲ್ಲದಿದ್ದರೆ ಇವು ಕೇವಲ ಆಡಂಬರದ ಪ್ರದರ್ಶನವಾಗಿ ನಿರರ್ಥಕ ವಾಗುತ್ತವೆ.

# 74. ಒಂದು ಅಪೂರ್ವ ಸಂವಾದ

ಅಂತಿಮ ತೀರ್ಥಾಧೀಶರಾದ ಭಗವಾನ್ ಮಹಾವೀರರು ತಮ್ಮ ಮೂವತ್ತನೇ ವಯಸ್ಸಿನಲ್ಲಿ ಸಂಸಾರ, ಶರೀರಭೋಗಗಳಲ್ಲಿ ವೈರಾಗ್ಯವನ್ನು ಹೊಂದಿ ಅರಮನೆಯ ವೈಭವಾದಿಗಳನ್ನು ತೊರೆದು ತಪೋವನದತ್ತ ಹೊರಟಾಗ ಅವರ ತಾಯಿ ತ್ರಿಶಲಾ ದೇವಿಯು ಅವರ ಎದುರಿಗೆ ಬಂದು ನಿಂತು ಕಣ್ಣಲ್ಲಿ ನೀರು ಸುರಿಸುತ್ತಾ ಹೇಳಿದಳು- 'ಮಗೂ ನೀನು ಒಮ್ಮೆ ನನ್ನ ಮುಖದ ಕಡೆ ನೋಡು, ನಾನು ಹರಿಸುತ್ತಿರುವ ಕಣ್ಣೀರಿನ ಕೋಡಿಯನ್ನು ನೋಡು, ಆಗ ನಿನಗೆ ತಿಳಿಯುತ್ತದೆ. ನನಗೆ ಎಷ್ಟು ದುಃಖವಾಗುತ್ತಿದೆ ಎಂದು' ಎಂದಾಗ ಮಹಾವೀರರು ನಿಶ್ಚಲಚಿತ್ತರಾಗಿಯೇ ಉದ್ವೇಗವಿಲ್ಲದೆ ಹೇಳುತ್ತಾರೆ.

'ಅಮ್ಮಾ ನಿನ್ನ ಕಣ್ಣೀರಿನ ಕೋಡಿಯನ್ನು ನೋಡಿ ನಿನ್ನ ತಾಯ್ತನದ ಮಮತೆಯಿಂದ ನಾನು ವಿಚಲಿತನಾದರೆ, ಮರುಳಾದರೆ ನನ್ನ ಉದ್ದೇಶಕ್ಕೆ, ನನ್ನಾತ್ಮಕಲ್ಯಾಣಕ್ಕೆ ಅಡ್ಡಿಯಾಗುತ್ತದೆ. ಅಷ್ಟೇ ಅಲ್ಲ ಕೇಳು, ನನಗೆ ಈವರೆಗೆ ಆಗಿರುವ ತಾಯಿ ನೀವೊಬ್ಬರೇ ಅಲ್ಲ' ಎಂದಾಗ ತಾಯಿ ತ್ರಿಶಲಾದೇವಿಯು 'ಅಂದರೆ...' ನಾನೊಬ್ಬಳೇ ಅಲ್ಲವೆ? ನನ್ನ ತಾಯ್ತನವನ್ನೇ ಮರೆತೆಯಾ ಮಗು' ಎಂದಳು. ಹಾಗಲ್ಲಮ್ಮಾ, ನಾನು ಈವರೆಗೆ ಎತ್ತಿರುವ ಜನ್ಮ-ಜನ್ಮಾಂತರಗಳಲ್ಲಿ ಎಷ್ಟೋ ಮಂದಿ ತಾಯಂದಿರು ಆಗಿಹೋಗಿದ್ದಾರೆ. ಅವರು ಅತ್ತಾಗಲೆಲ್ಲಾ ನಾನು ಅವರ ಕಣ್ಣೀರನ್ನು ಒರೆಸುತ್ತಾ ಅದಕ್ಕೆ ಮಾರುಹೋಗಿ ಮೋಹಗೊಂಡು ನನ್ನ ಆತ್ಮಕಲ್ಯಾಣವನ್ನು ಈವರೆಗೂ ಮಾಡಿಕೊಳ್ಳಲಾಗಲಿಲ್ಲ. ಇಷ್ಟೇ ಅಲ್ಲ ತಾಯೇ ನೀವೂ ಕೂಡ ನನ್ನಂತಹ ಎಷ್ಟೋ ಮಂದಿ ಮಕ್ಕಳಿಗೆ ಜನ್ಮ-ಜನ್ಮಾಂತರಗಳಲ್ಲಿ ತಾಯಿಯಾಗಿದ್ದೀರಿ. ಅವರ ಮೇಲಿನ ಮೋಹವನ್ನು ಬಿಡಲಿಲ್ಲ. ಅದಕ್ಕಾಗಿ ಮತ್ತೆ ಮತ್ತೆ ತಾಯಿಯಾಗ ಬೇಕಾಯಿತು' ಎಂದರು ಮಹಾವೀರರು.

'ಇರಬಹುದು ಮಗೂ, ಆದರೆ ಯಾವ ಜನ್ಮದಲ್ಲೂ ನಿನ್ನಂತಹ ಮಗನನ್ನು ಹಡೆಯಲಿಲ್ಲ, ಎಂದಳು ತ್ರಿಶಲಾ. ಹೌದಮ್ಮಾ ಹೌದು, ಈ ನನ್ನಂತಹ ಮಗನಿಗೆ ತಾಯಿಯಾದುದರಿಂದ ನೀನು ಇನ್ನು ಮುಂದಿನ ಜನ್ಮದಲ್ಲಿ ಯಾರಿಗೂ



ತಾಯಿಯಾಗುವುದು ಬೇಡ. ಆಗ ನೀನು ನನ್ನ ತಾಯಿಯಾದುದಕ್ಕೆ ಸಾರ್ಥಕ.

ತಾಯೇ ಈ ಪರ್ಯಾಯದ ಮೇಲೆ ಮೋಹ ಮಾಡಬೇಡ. ಈ ಜನ್ಮ-ಜನ್ಮಗಳಲ್ಲಿ ಕೇವಲ ತಾಯಿ-ಮಗ ಆಗಿ ಜನ್ಮತಾಳಿ ಈ ಸಂಸಾರದಲ್ಲಿ ಸುತ್ತುವುದು ಇನ್ನು ಮುಂದೆ ಬೇಡ. ಈ ಮೋಹಬಂಧವನ್ನು ಕಿತ್ತು ಬಿಡೋಣ' ಎಂದರು ಮಹಾವೀರರು. 'ಮಗೂ ನಿನ್ನ ಮೇಲಿನ ಪ್ರೀತಿ ಅತಿಯಾಗಿದೆ, ನಿನ್ನನ್ನು ಕಷ್ಟಕರ ವಾದ ತಪಸ್ಸಿಗೆ ಕಳುಹಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ' ಎಂದಳು ತ್ರಿಶಲಾ.

ಹೌದೇ ತಾಯಿ; ಕೇಳೀ-ಪ್ರೀತಿ, ಮೋಹ, ರಾಗ ಇವುಗಳ ಬಂಧನ ದಿಂದಲೇ 'ಪುನರಪಿ ಜನನಂ ಪುನರಪಿ ಮರಣಂ' ಎಂಬ ಸಂಕೋಲೆಗೆ ಸಿಕ್ಕಿ ಜೀವಿಗಳು ಸುತ್ತ ಬೇಕಾಗಿದೆ. ತಪಸ್ಸು ಕಷ್ಟಕರವೆಂದು ಈ ಸಂಸಾರದ ಶರೀರ ಭೋಗದ ಮಮತೆಯಿಂದ ಬಂಧನಕ್ಕೆ ಸಿಕ್ಕಿ ಆತ್ಮಕಲ್ಯಾಣದ ಕಡೆ ಈವರೆಗೂ ಹೋಗಲಾಗಿಲ್ಲ ಎಂದು ಮಹಾವೀರರು ಹೇಳುತ್ತಾ ತಮ್ಮ ಮಾತನ್ನು ಮುಂದುವರಿಸುತ್ತಾ "ಕೇಳೀ! ನರಕದ ವೇದನೆ, ತಿರ್ಯಂಚಗತಿಯ ದುಃಖ, ದೀನದಲಿತನಾಗಿ ನೊಂದ ನೋವಿಗಿಂತಲೂ ಈ ತಪಸ್ಸಿನ ಕಷ್ಟ ಹೆಚ್ಚಿನದಲ್ಲ. ಮತ್ತೆ ಇನ್ನು ಜನ್ಮತಾಳದಂತೆ ಗತಿಚಕ್ರಕ್ಕೆ ಸಿಕ್ಕಿಸುತ್ತಾಡದಂತೆ ಇರಬೇಕೆಂದು ನಾನು ತಪೋವನದತ್ತ ಸಾಗುತ್ತಿದ್ದೇನೆ. ಈ ಮೋಹ, ಮಮತೆ, ಪರಿಗ್ರಹ, ಬಂಧು, ಪರಿವಾರಗಳನ್ನು ತೊರೆದು ಜಿತೇಂದ್ರಿಯನಾಗಿ ಹೋಗುತ್ತಿದ್ದೇನೆ."

"ಆಯಿತು ಮಗೂ ಈಗಲೇ ಏನು ಅವಸರ ಮುಂದೆ ಮುಪ್ಪಾದಾಗ ಅತ್ತ ಕಡೆ ಹೋಗಬಹುದಲ್ಲಾ" ಎಂದಳು ತ್ರಿಶಲಾ. "ಅಮ್ಮಾ ಈಗೇನು ಅವಸರ ಎಂದು ಹೇಳಿ ಕೊಂಡೇ ಹಲವು ಜನ್ಮಗಳನ್ನು ಕಳೆದೆ. ಈಗಾಗಲೇ ಬಹಳ ಕಾಲ ಕಳೆದಾಯಿತು. ವೈರಾಗ್ಯ ಬಂದಾಗ ತಡಮಾಡಬಾರದು. ನನಗಂತೂ ಈಗ ಸಹಜವಾಗಿಯೇ ವೈರಾಗ್ಯ ಬಂದಿದೆ. ಈಗ ಈ ಅವಕಾಶವನ್ನು ಕಳೆದುಕೊಂಡರೆ ಮತ್ತೆ ದೊರೆಯುವುದು ದುರ್ಲಭ" ಎಂದರು ಮಹಾವೀರರು.

ಹೌದೇ! ಮಗೂ, ನಿನ್ನ ನಿರ್ಧಾರವನ್ನು ಬದಲಾಯಿಸುವುದಿಲ್ಲವೇ? ಅಲ್ಲಾ ನೀನು ನಮಗೆ ಒಬ್ಬನೇ ಮಗ... ನಮ್ಮ ವಂಶದ ಕೀರ್ತಿಯನ್ನು, ವಂಶವನ್ನು ಉಳಿಸಿ ಬೆಳೆಸುವವರಾರು? ಎಂದಳು ತಾಯಿ. "ತಾಯೇ ಏನಿದು ನಿಮಗೆ ಮೋಹಾಂಧಕಾರ! ನಿಮ್ಮ ವಂಶದ ಕೀರ್ತಿ ಈಗಾಗಲೇ ನನ್ನ ಹುಟ್ಟಿನಿಂದ ಜಗದ್ವಿಖ್ಯಾತವಾಗಿದೆ. ಸುರನರೇಂದ್ರರು ಬಂದು ನಿಮ್ಮ ಗುಣಗಾನ ಮಾಡಿ ಸೇವೆ ಮಾಡಿಲ್ಲವೇ? ಒಬ್ಬನೇ ಮಗ ನಾನು ನನ್ನಾತ್ಮಕಲ್ಯಾಣವನ್ನು ಮಾಡಿಕೊಂಡು ಇತರರಿಗೂ ಮುಕ್ತಿಮಾರ್ಗ

ವನ್ನು ತೋರಿಸಬೇಕಾಗಿದೆ. ಇದರಿಂದ ನಿಮ್ಮ ಈ ವಂಶದ ಕೀರ್ತಿ ಅಜರಾಮರವಾಗುತ್ತದೆ. ಆದುದರಿಂದ ನನ್ನ ನಿರ್ಧಾರವನ್ನು ಬದಲಾಯಿಸುವುದಿಲ್ಲ'' ಎಂದರು ಮಹಾವೀರರು.

"ಹಾಗಾದರೆ ನನ್ನ ಪ್ರೀತಿ-ವಾತ್ಸಲ್ಯಕ್ಕೆ ಬೆಲೆ ಇಲ್ಲವೆ?'' ಎಂದಳು ತಾಯಿ. "ಅಮ್ಮಾ ಒಂದು ವೇಳೆ ನೀವು ನನ್ನನ್ನು ಪ್ರೀತಿಸಿ ವಾತ್ಸಲ್ಯವನ್ನು ನಿಜವಾಗಿ ತೋರಿಸುವಿರಾದರೆ ನನ್ನ ಆತ್ಮಕಲ್ಯಾಣಕ್ಕೆ ಮುಕ್ತಿಮಾರ್ಗದಲ್ಲಿ ಸಾಗಲು ಅಡ್ಡಿ ಮಾಡಬೇಡಿರಿ. ಹೇಗೆ ನೀವು ನನ್ನನ್ನು ನಿಮ್ಮ ಗರ್ಭದಿಂದ ಬೇರೆ ಮಾಡಿದಿರೋ ಅದೇ ರೀತಿ ನನ್ನನ್ನು ನಿಮ್ಮ ಮೋಹ, ಮಮತೆ, ವಾತ್ಸಲ್ಯ, ರಾಗವೆಂಬ ಗರ್ಭದಿಂದಲೂ ಬೇರೆ ಮಾಡಿರಿ. ನಿಜವಾಗಿ ನೀವು ನನಗೊಬ್ಬನಿಗೆ ತಾಯಿಯಾಗಿದ್ದರೆ ನೀವು ಮತ್ತೊಮ್ಮೆ ಇನ್ನಾರಿಗೂ ತಾಯಿಯಾಗಬಾರದು. ಮತ್ತೆ ನಾನೂ ಇನ್ನೊಬ್ಬರ ಮಗನಾಗಬಾರದು. ನನಗೆ ನೀವೇ ಕೊನೆಯ ತಾಯಿಯಾಗಬೇಕು. ನಾನೇ ನಿಮ್ಮ ಕೊನೆಯ ಪುತ್ರನಾಗಬೇಕು. ಅದಕ್ಕಾಗಿ ನೀವು ನಿಮ್ಮ ಮೋಹ, ಮಮತೆಯ ಸಂಬಂಧವನ್ನು ಬಿಡಿರಿ. ನೀವೂ ನಿಮ್ಮಾತ್ಮಕಲ್ಯಾಣದತ್ತ ಸಾಗಿರಿ. ಈ ಸ್ತ್ರೀ ಪರ್ಯಾಯವನ್ನು ಭೇದಿಸುವಂತಹ ಆರ್ಯಿಕಾದೀಕ್ಷೆಯನ್ನು ಧರಿಸಿರಿ. ಸಮಾಧಿ ಹೊಂದಿ ಸ್ವರ್ಗದಲ್ಲಿ ಪುರುಷ ಪರ್ಯಾಯವನ್ನು ಹೊಂದಿ ಮುಂದಿನ ಜನ್ಮದಲ್ಲಿ ಮುಕ್ತರಾಗಿರಿ.'' ಎಂದು ಹೇಳಿ ಮಹಾವೀರರು ತಪೋವನದತ್ತ ಸಾಗಿದರು. ಆ ವೇಳೆಗೆ ಬ್ರಹ್ಮಸ್ವರ್ಗದಿಂದ ಲೋಕಾಂತಿಕ ದೇವತೆಗಳು ಬಂದರು. ಅವರು ಮಹಾವೀರರಿಗೆ ನಮಿಸಿ ಅವರ ವೈರಾಗ್ಯವು ದೃಢವಾಗುವಂತಹ ಬೋಧನೆಯನ್ನು ಮಾಡಿದರು.

ಅದನ್ನು ಕಂಡ ತ್ರಿಶಲಾದೇವಿಯು "ಆಯಿತು ಮಗೂ ನಿನ್ನ ಮಾರ್ಗಕ್ಕೆ ನಾನು ಅಡ್ಡಿ ಬರಲಾರೆ, ನಿನಗೆ ಜಯವಾಗಲಿ. ನಿನ್ನಂತಹ ಮಗನನ್ನು ಹೆತ್ತ ನಾನು ಧನ್ಯೆ. ನೀನು ಹೇಳಿದಂತೆ ನನ್ನ ಆತ್ಮಕಲ್ಯಾಣದತ್ತ ನಾನೂ ಸಾಗುವೆನು'' ಎಂದು ಹೇಳಿದಳು.